24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 124 | ನವದೆಹಲಿ | ಬೆಲೆ ₹10 | ಅಕ್ಟೋಬರ್, 30, 2026, ಶುಕ್ರವಾರ

## ಒಳಪುಟಗಳಲ್ಲಿ

ಪಿಜಿಸಿಇಟಿ ಎರಡನೇ ಸುತ್ತಿನ ಕೌನ್ಸೆಲಿಂಗ್‌ಗೆ ಸುಪ್ರೀಂ ಕೋರ್ಟ್ ಅನುಮತಿ - ಪು.4

ಪ್ರತಿ ಟನ್ ಕಬ್ಬಿಗೆ ಕನಿಷ್ಠ 4500 ರೂ. ಬೆಲೆ ನಿಗದಿಗೆ ಆಗ್ರಹ: ಕೇಂದ್ರ ಸಮಿತಿಗೆ ಸರ್ಕಾರಕ್ಕೆ ಕಬ್ಬು ಬೆಳೆಗಾರರ ಸಂಘ ಮನವಿ - ಪು.5

ಜನತಾ ಬಜಾರ್ ಅಧ್ಯಕ್ಷ ಸ್ಥಾನಕ್ಕೆ ಪಲ್ಲೇದ ಮೈತ್ರಿ ರಾಜಿನಾಮೆ - ಪು.6

ಬಕ್ರೀದ್‌ನಲ್ಲಿ ಗೋಹತ್ಯೆ ವಿರೋಧಿಸಿದ್ದ ಕೇಸ್‌ನಲ್ಲಿ ಶಾಸಕ ಶರಣು ಸಲಗರ ನಿರ್ದೋಷಿ - ಪು.7

# ಕೆಎಎಸ್ ಅಧಿಕಾರಿಗಳ ಆಯ್ಕೆ ಊರ್ಜಿತ: ಸುಪ್ರೀಂನಿಂದ ಕಾಯ್ದೆ ರದ್ದು

## ಕರ್ನಾಟಕ ಸರ್ಕಾರಕ್ಕೆ ಕಾನೂನು ಹೋರಾಟದಲ್ಲಿ ಹಿನ್ನಡೆ 362 ಕೆಎಎಸ್ ಅಧಿಕಾರಿಗಳ ಹುದ್ದೆಗೆ ಸಂಚಕಾರ

**ನವದೆಹಲಿ, ಅ.29:** 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಲು ಕರ್ನಾಟಕ ಸರ್ಕಾರ 2022ರಲ್ಲಿ ಜಾರಿಗೆ ತಂದಿದ್ದ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಈ ಮೂಲಕ ಕೆಪಿಎಸ್ಸಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ದೀರ್ಘಕಾಲದ ಕಾನೂನು ಹೋರಾಟದಲ್ಲಿ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ.

2011ನೇ ಸಾಲಿನ ಕೆಪಿಎಸ್‌ಸಿ ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪದಿಂದ ಆರಂಭವಾದ ವಿವಾದ, ಸರ್ಕಾರದ ನಿರ್ಧಾರ, ನ್ಯಾಯಮಂಡಳಿ ಮತ್ತು ಹೈಕೋರ್ಟ್‌ನ ವಿಭಿನ್ನ ಆದೇಶಗಳ ಬಳಿಕ ಸುಪ್ರೀಂ ಕೋರ್ಟ್‌ವರೆಗೂ ತಲುಪಿತ್ತು. ಆಯ್ಕೆ ಪಟ್ಟಿಗೆ ಕಾನೂನು ಮಾನ್ಯತೆ ನೀಡಲು ಸರ್ಕಾರ ರೂಪಿಸಿದ್ದ ವಿಶೇಷ ಕಾಯ್ದೆಯೇ ಇದೀಗ ರದ್ದಾಗಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ವಿನೋದ್‌ಚಂದ್ರನ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಮಹತ್ವದ ಆದೇಶ ಪ್ರಕಟಿಸಿದೆ. 2011ರ ಸಾಲಿನ ಕೆಪಿಎಸ್ಸಿ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕಾರಣದಿಂದ ಈ ಹಿಂದೆ ಹೈಕೋರ್ಟ್ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿತ್ತು. ಆದರೆ ಈ ಆಯ್ಕೆ ಪಟ್ಟಿಯನ್ನು ರಕ್ಷಿಸುವ ಸಲುವಾಗಿ ರಾಜ್ಯ ಸರ್ಕಾರ 2022ರಲ್ಲಿ ವಿಶೇಷ ಕಾಯ್ದೆಯನ್ನು ಜಾರಿಗೆ ತಂದಿತ್ತು. ಸರ್ಕಾರದ ಈ ಕಾಯ್ದೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು.



ಹೈಕೋರ್ಟ್‌ನ ಈ ನಿರ್ಧಾರವನ್ನು ಪ್ರಶ್ನಿಸಿ ಅರ್ಜಿದಾರರಾದ ಶ್ರೀನಿವಾಸ ಟಿ. ಮತ್ತು ಇತರರು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈಗ ಸುಪ್ರೀಂ ಕೋರ್ಟ್ ಸರ್ಕಾರದ ಕಾಯ್ದೆಯನ್ನು ಸಂಪೂರ್ಣವಾಗಿ ಅಸಿಂಧುಗೊಳಿಸಿ ರದ್ದುಪಡಿಸಿದೆ.

**ನ್ಯಾಯಮಂಡಳಿಯಿಂದ ಹೈಕೋರ್ಟ್‌ವರೆಗೆ:** ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ 2016ರ ಅಕ್ಟೋಬರ್‌ನಲ್ಲಿ ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮಂಡಳಿ ಸರ್ಕಾರದ ಆದೇಶವನ್ನು ರದ್ದುಗೊಳಿಸಿ, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವಂತೆ ಸೂಚಿಸಿತ್ತು. ಆದರೆ, 2018ರ ಮಾರ್ಚ್‌ನಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಮಂಡಳಿಯ ಆದೇಶವನ್ನು ರದ್ದುಗೊಳಿಸಿತು. ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದ್ದ ಗಂಭೀರ ಅಕ್ರಮಗಳ ಕುರಿತು ಹೈಕೋರ್ಟ್ ಉಲ್ಲೇಖಿಸಿದ್ದರಿಂದ 362 ಅಭ್ಯರ್ಥಿಗಳ ಆಯ್ಕೆಯ ಭವಿಷ್ಯ ಮತ್ತೆ ಅನಿಶ್ಚಿತತೆಗೆ ಸಿಲುಕಿತ್ತು.

**ಆಯ್ಕೆ ಪಟ್ಟಿಗೆ ಕಾನೂನು ಮಾನ್ಯತೆ ನೀಡಲು ಕಾಯ್ದೆ:** ಈ ವಿವಾದಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ 2022ರ ಮಾರ್ಚ್ 14ರಂದು ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಅಧಿನಿಯಮ, 2022 ಅನ್ನು ಜಾರಿಗೆ ತಂದಿತ್ತು. 2011ರ ಸಾಲಿನ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಿ, ಅದರ ಆಧಾರದ ಮೇಲೆ ನೇಮಕಾತಿಗೆ ಕಾನೂನು ಮಾನ್ಯತೆ ಕಲ್ಪಿಸುವುದು ಈ ಕಾಯ್ದೆಯ ಉದ್ದೇಶವಾಗಿತ್ತು. ಆದರೆ, ಕಾಯ್ದೆಯ ಸಿಂಧುತ್ವವನ್ನೇ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಯಿತು. 2022ರ ಏಪ್ರಿಲ್‌ನಲ್ಲಿ ಕರ್ನಾಟಕ ಹೈಕೋರ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿತ್ತು. ಇದಾದ ಬಳಿಕ ಅರ್ಜಿದಾರರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

### 2011ರಲ್ಲಿ ಆರಂಭವಾದ ನೇಮಕಾತಿ ಪ್ರಕ್ರಿಯೆ

ಕೆಪಿಎಸ್‌ಸಿ 2011ರ ನವೆಂಬರ್ 3ರಂದು 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿತ್ತು. 2012ರಲ್ಲಿ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನ ಪ್ರಕ್ರಿಯೆಗಳು ನಡೆದಿದ್ದವು. 2013ರ ಮಾರ್ಚ್ 21ರಂದು ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗಿತ್ತು. ಅದೇ ವರ್ಷದ ಮೇ ತಿಂಗಳಲ್ಲಿ ಸಂದರ್ಶನ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಅಭ್ಯರ್ಥಿಯೊಬ್ಬರು ದೂರು ನೀಡಿದ್ದರು. ಅಂಕಗಳ ಮೌಲ್ಯಮಾಪನ ಹಾಗೂ ಅಭ್ಯರ್ಥಿಗಳ ಆಯ್ಕೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ 2013–14ರ ಅವಧಿಯಲ್ಲಿ ಸಿಐಡಿ ತನಿಖೆಯ ಮಧ್ಯಂತರ ವರದಿಯನ್ನು ಆಧರಿಸಿ ರಾಜ್ಯ ಸರ್ಕಾರ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಲು ಕ್ರಮ ಕೈಗೊಂಡಿತ್ತು.

# ಸಫಲ್ ಬ್ರ್ಯಾಂಡ್ ಉತ್ಪನ್ನಗಳು ಎಲ್ಲ ಕನ್ನಡಿಗರ ಮನೆ ತಲುಪಲಿ: ಸಿಎಂ

## ಸಿಎಂ ಡಿ.ಕೆ. ಶಿವಕುಮಾರ್ ಆಶಯ: 10ಕ್ಕೂ ಹೆಚ್ಚು ಉತ್ಪನ್ನಗಳ ಬಿಡುಗಡೆ




**ಬೆಂಗಳೂರು, ಅ.29:** ರೈತರನ್ನು ಆರ್ಥಿಕವಾಗಿ ಸದೃಢಗೊಳಿಸಲು ಮತ್ತು ಅವರು ಬೆಳೆದ ಉತ್ಪನ್ನಗಳಿಗೆ ಸೂಕ್ತಬೆಲೆ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳವು ಸಫಲ್ ಬ್ರ್ಯಾಂಡ್‌ನಲ್ಲಿ ಹೊಸ ಉತ್ಪನ್ನಗಳನ್ನು ಹೊರತಂದಿದ್ದು ಪ್ರತಿ ಕನ್ನಡಿಗರ ಮನೆ ತಲುಪುವಂತಾಗಲಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ಗುರುವಾರ ಆಯೋಜಿಸಿದ್ದ ಸಫಲ್ ಎಣ್ಣೆ ಬ್ರ್ಯಾಂಡ್ ಉತ್ಪನ್ನಗಳ ಹೊಸ ವಿನ್ಯಾಸದ ಪ್ಯಾಕ್‌ಗಳು ಹಾಗೂ ಲೋಗೋವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಸ್ಪರ್ಧಾತ್ಮಕ ಕಾರ್ಪೋರೇಟ್ ಯುಗದಲ್ಲಿ ರೈತರು ಬೆಳೆದ ಪದಾರ್ಥಗಳಿಗೆ ಉತ್ತಮ ಬೆಲೆ ಸಿಗಬೇಕು ಹಾಗೂ ಆರ್ಥಿಕವಾಗಿ ಸದೃಢವಾಗಬೇಕು ಎಂಬ ಉದ್ದೇಶದಿಂದ ಸಫಲ್ ಬ್ರ್ಯಾಂಡ್‌ನ ಹೊಸ ವಿನ್ಯಾಸದ ಉತ್ಪನ್ನಗಳನ್ನು ಹೊರತಂದಿದೆ. ನಿತ್ಯ ಅಡುಗೆ ಆಹಾರ, ಮನೆ ದೀಪ ಬೆಳಗಿಸಲು ಎಣ್ಣೆ ಅಗತ್ಯವಿದೆ. ಜತೆಗೆ ಮನುಷ್ಯನ ಉತ್ತಮ ಆರೋಗ್ಯಕ್ಕೂ ಗುಣಮಟ್ಟದ ಅಡುಗೆಎಣ್ಣೆ ಬೇಕು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ ಹೊರತಂದಿರುವ ಸಫಲ್ ಎಣ್ಣೆ ಉತ್ಪನ್ನಗಳು ಡಿಜಿಟಲ್ ಯುಗದಲ್ಲಿ ಆನ್‌ಲೈನ್ ಮೂಲಕ ಹೊರರಾಜ್ಯಗಳಿಗೂ ವಿಸ್ತರಿಸುವಂತಾಗಲಿ. ಬರಗಾಲದ ಸಂದರ್ಭದಲ್ಲಿಯೂ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಶೇಂಗಾ, ಸೂರ್ಯಕಾಂತಿ ಸೇರಿದಂತೆ ವಿವಿಧ ಎಣ್ಣೆಕಾಳುಗಳಿಗೆ ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದೆ. ರೈತರಿಗೆ ಸರಿಯಾದ ಬೆಲೆ ಸಿಗಲು ಸಹಕಾರತತ್ವವನ್ನು ಗಟ್ಟಿಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಮೀನೇಶ್ ಸಿ.ಶಾ ಮಾತನಾಡಿ, ದೇಶದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಿ ರೈತರ ಆದಾಯ ವೃದ್ಧಿಸುವ ನಿಟ್ಟಿನಲ್ಲಿ ಸಂಸ್ಥೆಯು ರಾಜ್ಯದಲ್ಲಿ ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ಸ್ಥಳೀಯ ಉತ್ಪಾದನೆಗೆ ಉತ್ತೇಜನ ನೀಡಿ ಎಣ್ಣೆಕಾಳುಗಳ ಆಮದು ಪ್ರಮಾಣ ಕಡಿಮೆ ಮಾಡುವುದು ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಸಫಲ್ ಬ್ರ್ಯಾಂಡ್ ನೂತನ ವಿನ್ಯಾಸದ ಪ್ಯಾಕ್‌ನ ಖಾದ್ಯತೈಲ, ದೀಪದ ಎಣ್ಣೆ ಸೇರಿ 10ಕ್ಕೂ ಹೆಚ್ಚು ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು. ಜತೆಗೆ ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ಹೊಸ ಲಾಂಛನ ಅನಾವರಣಗೊಳಿಸಿದರು.

ಮಹಾಮಂಡಳದ ಅಧ್ಯಕ್ಷ ವೆಂಕಟರಾವ್ ನಾಡಗೌಡ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ, ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಮಹಾಮಂಡಳದ ಉಪಾಧ್ಯಕ್ಷ ಎಸ್. ಸೂಗನಗೌಡ,, ರಾಯಚೂರು ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷ ಸುರೇಶ್ , ಚಿತ್ರದುರ್ಗದ ಅಧ್ಯಕ್ಷ ಉದಯಕುಮಾರ್ ಸೇರಿ ಮತ್ತಿತರರು ಇದ್ದರು.

### ರೈತರ ಅಭಿವೃದ್ಧಿಗೆ ಒತ್ತು

ರಾಜಸ್ತಾನ ಹೊರತುಪಡಿಸಿ ಕರ್ನಾಟಕದಲ್ಲಿ ಹೆಚ್ಚು ಕೃಷಿ ಇದೆ. ರಾಜ್ಯದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಿ ಪ್ರೋತ್ಸಾಹಿಸಲು ಹಾಗೂ ರೈತರ ಒಳಿತಿಗಾಗಿ ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ನಿರಂತರವಾಗಿ ಶ್ರಮಿಸುತ್ತಿವೆ. ನಂದಿನಿ, ಮೈಸೂರು ಸ್ಯಾಂಡಲ್ ಸೋಪ್ ಮಾದರಿಯಲ್ಲಿಯೇ ಸಫಲ್ ಎಣ್ಣೆ ಉತ್ಪನ್ನಗಳು ತಮ್ಮ ವಿಭಿನ್ನ ಬ್ರ್ಯಾಂಡ್ ಮೂಲಕ ಹೊಸ ಕ್ರಾಂತಿ ಸೃಷ್ಟಿಸಲಿ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ಸರ್ಕಾರಿ ಯೋಜನೆಗಳ ಮೇಲ್ವಿಚಾರಣೆಗೆ ಪ್ರಾಜೆಕ್ಟ್ ಕೆ-ಮಾನಿಟರ್

## ಎರಡು ಹಂತದಲ್ಲಿ ಅನುಷ್ಠಾನ, 8 ತಿಂಗಳ ಅವಧಿಯಲ್ಲಿ ಸಮೀಕ್ಷೆಗೆ ನಿರ್ಧಾರ: ಸಚಿವ ಕೃಷ್ಣಬೈರೇಗೌಡ

### ಪ್ರಮುಖ 12 ಯೋಜನೆಗಳಿಗೆ ಸಂಪುಟ ಒಪ್ಪಿಗೆ

**ಬೆಂಗಳೂರು, ಅ.29:** ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸರ್ಕಾರಿ ಯೋಜನೆಗಳ ಮೇಲ್ವಿಚಾರಣೆಗೆ ಪ್ರಾಜೆಕ್ಟ್ ಕೆ-ಮಾನಿಟರ್ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಮಾಹಿತಿ ನೀಡಿದರು. ಸರ್ಕಾರಿ ಯೋಜನೆಗಳ ಮೇಲ್ವಿಚಾರಣೆಗೆ ಪ್ರಾಜೆಕ್ಟ್ ಕೆ-ಮಾನಿಟರ್ ಯೋಜನೆಗೆ 14 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಸರ್ಕಾರಿ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸುವುದು, ಯೋಜನೆಗಳಿಂದ ಸಾರ್ವಜನಿಕರಿಗೆ ದೊರೆಯುತ್ತಿರುವ ಪ್ರಯೋಜನಗಳ ಮೌಲ್ಯಮಾಪನ ಮಾಡುವ, ವಿವಿಧ ಇಲಾಖೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ, ಸಾರ್ವಜನಿಕ ಸೇವೆಗಳ ಗುಣಮಟ್ಟ, ಮೂಲಸೌಕರ್ಯ, ಉದ್ಯೋಗಾವಕಾಶ ಮತ್ತು ಇತರ ಆಡಳಿತಾತ್ಮಕ ಫಲಿತಾಂಶಗಳ ಕುರಿತು ಮಾಹಿತಿ ಸಂಗ್ರಹಿಸುವ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ ಒಂದು ಲಕ್ಷ ಯೋಜನೆಗಳು ಅಥವಾ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸುವ ಗುರಿ ಹೊಂದಲಾಗಿದೆ. ಎರಡನೇ ಹಂತದಲ್ಲಿ 60 ಸಾವಿರ ಯೋಜನೆಗಳು ಅಥವಾ ಕಾಮಗಾರಿಗಳನ್ನು ಪರಿಶೀಲನೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ಈ ವ್ಯವಸ್ಥೆಯಿಂದ ಸರ್ಕಾರಿ ಯೋಜನೆಗಳ ಬಗ್ಗೆ ಹೆಚ್ಚು ಸಮಗ್ರ ಮಾಹಿತಿ ದೊರೆಯಲಿದ್ದು, ಸಾರ್ವಜನಿಕ ಹಣದ ಬಳಕೆ ಮತ್ತು ಯೋಜನೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ನೆರವಾಗಲಿದೆ. ಜಲಸಂಪನ್ಮೂಲ, ಕೃಷಿ, ಆರೋಗ್ಯ, ಶಿಕ್ಷಣ, ನಗರಾಭಿವೃದ್ಧಿ ಮತ್ತು ಇತರ ಪ್ರಮುಖ ಕ್ಷೇತ್ರಗಳ ಯೋಜನೆಗಳ ಮೇಲ್ವಿಚಾರಣೆಯನ್ನೂ ಈ ವ್ಯವಸ್ಥೆಯ ಮೂಲಕ ಬಲಪಡಿಸಲು ಉದ್ದೇಶಿಸಲಾಗಿದೆ. ಯೋಜನೆಯಡಿ ನಿರಂತರ ಎಂಟು ತಿಂಗಳ ಅವಧಿಯಲ್ಲಿ ಎರಡು ಹಂತಗಳಲ್ಲಿ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

### ಸಂಪುಟ ಸಭೆಯ ಪ್ರಮುಖ ನಿರ್ಧಾರಗಳು

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳ ಮೂಲಕ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು ಮತ್ತು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಹೊಲಿಗೆ ಯಂತ್ರ ವಿತರಣೆ: 16.04 ಕೋಟಿ ವೆಚ್ಚ, 9243 ಫಲಾನುಭವಿಗಳು
- ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಸೈನಿಕ ತರಬೇತಿಗೆ ಪೂರಕವಾದ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸಂಗೊಳ್ಳಿಯಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿ – 228.95 ಕೋಟಿ ರೂ.
- ಅಕ್ರಮ ಗಣಿಗಾರಿಕೆ ತಡೆಯಲು ರಚಿಸಿರುವ ಎಸ್‌ಐಟಿ ಕಾರ್ಯಾವಧಿ 2026ರ ಜು.1ರಿಂದ ಮತ್ತೆ ಒಂದು ವರ್ಷ ವಿಸ್ತರಣೆ.
- ಸರ್ಕಾರಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ರೋಗನಿರ್ಣಯ ಸೇವೆಗಳನ್ನು ಬಲಪಡಿಸಲು ಪ್ರಯೋಗಾಲಯ ಉಪಕರಣಗಳ ಖರೀದಿಗೆ 21.11 ಕೋಟಿ ರೂ.
- ವಿವಿಧ ಕ್ರೀಡೆಗಳಿಗೆ ನೆರವಾಗುವಂತೆ ಹುಬ್ಬಳ್ಳಿ ನಗರದಲ್ಲಿ ಸಮಗ್ರ ಕ್ರೀಡಾಂಗಣ ನಿರ್ಮಾಣ ಹಾಗೂ ನಿರ್ವಹಣೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ 20 ವರ್ಷಗಳ ಅವಧಿಗೆ ವಹಿಸಿಕೊಡಲು ನಿರ್ಧರಿಸಲಾಗಿದೆ.
- ಹಳೆಯದಾಗಿರುವ ಲೋಕಾಯುಕ್ತ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು, ಆಡಳಿತಾತ್ಮಕ ಅಗತ್ಯಗಳು ಮತ್ತು ಬದಲಾಗಿರುವ ಸೇವಾ ಪರಿಸ್ಥಿತಿಗಳಿಗೆ ಅನುಗುಣವಾಗಿ ನವೀಕರಿಸಲು ಪರಿಷ್ಕೃತ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವೃಂದ ಮತ್ತು ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮ 2026ಕ್ಕೆ ಅನುಮೋದನೆ.
- ಬೆಂಗಳೂರು ನಗರದಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಎರಡು ಜಲಸಂಗ್ರಹಾಗಾರಗಳ ನಿರ್ಮಾಣ – 61.50 ಕೋಟಿ ರೂ. ಯೋಜನೆಯ ಮೊದಲ ಭಾಗವಾಗಿ ಕಾವಲ್‌ಬೈರಸಂದ್ರದಲ್ಲಿ 22.50 ಕೋಟಿ ರೂ. ವೆಚ್ಚದಲ್ಲಿ 50 ಎಂ.ಎಲ್. ಸಾಮರ್ಥ್ಯದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಅನುಮೋದನೆ. ಎರಡನೆಯದಾಗಿ ಬನಶಂಕರಿ ಪ್ರದೇಶದಲ್ಲಿ 39 ಕೋಟಿ ವೆಚ್ಚದಲ್ಲಿ 22 ಎಂ.ಎಲ್. ಸಾಮರ್ಥ್ಯದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ.
- ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತಲಿನ ನಗರ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ 16.60 ಕೋಟಿ ರೂ ವೆಚ್ಚದಲ್ಲಿ ಜಿಐಎಸ್ ಆಧಾರಿತ ಮಹಾಯೋಜನೆ ರೂಪಿಸಲು ಒಪ್ಪಿಗೆ
- ಬೆಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ತ್ಯಾಜ್ಯನೀರಿನ ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಚರಕನಹಳ್ಳಿ ಪ್ರದೇಶದಲ್ಲಿ 10 ಎಂ.ಎಲ್.ಡಿ. ಸಾಮರ್ಥ್ಯದ ಸಂಸ್ಕರಣಾ ಘಟಕ ನಿರ್ಮಾಣಕ್ಕೆ 51.37 ಕೋಟಿ ರೂ.
- ರಾಜ್ಯದಲ್ಲಿರುವ ಆದಿವಾಸಿ ಮತ್ತು ವಿಶೇಷವಾಗಿ ದುರ್ಬಲ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಇದಕ್ಕಾಗಿ 33.36 ಕೋಟಿ ಅನುದಾನ ಒದಗಿಸಲು ಒಪ್ಪಿಗೆ.
- ಜಿಬಿಎ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸಲು ಪರಿಷ್ಕೃತ ಅಂದಾಜು ಮೊತ್ತಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.
- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಎರಡು ನಗರ ಪಾಲಿಕೆಗಳ ಪ್ರದೇಶಗಳಲ್ಲಿ ಮುಂದಿನ ಐದು ವರ್ಷಗಳ ಅವಧಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು 1,494.70 ಕೋಟಿ ರೂ. ವೆಚ್ಚದ ಪರಿಷ್ಕೃತ ಅಂದಾಜಿಗೆ ಅನುಮೋದನೆ

# ಬರ ಪರಿಹಾರ 2500 ರೂ. ಬಿಡುಗಡೆಗೆ ಸರ್ಕಾರ ಆದೇಶ

**ಬೆಂಗಳೂರು, ಅ.29:** ರಾಜ್ಯದಲ್ಲಿ ಬರಗಾಲ ಹಿನ್ನೆಲೆಯಲ್ಲಿ ರೈತರಿಗೆ ಘೋಷಣೆ ಮಾಡಿದ್ದ 2500 ರೂ. ಬರ ಪರಿಹಾರ ಬಿಡುಗಡೆಗೆ ರಾಜ್ಯ ಸರ್ಕಾರ ಆದೇಶಿಸಿದೆ.

ವಿಶೇಷ ಅಧಿವೇಶನದಲ್ಲಿ ರೈತರಿಗೆ ಬರ ಪರಿಹಾರ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಬರಪೀಡಿತ ತಾಲೂಕುಗಳ ರೈತರಿಗೆ 2,500 ರೂ ಪರಿಹಾರ ಕೊಡಲು ತೀರ್ಮಾನಿಸಿತ್ತು. ಆದರೆ ಸರ್ಕಾರದ ಈ ನಿರ್ಧಾರಕ್ಕೆ ಆಕ್ಷೇಪ ಕೇಳಿಬಂದಿತ್ತು. ರೈತರಿಗೆ 25000 ರೂ ಪರಿಹಾರ ನೀಡುವಂತೆ ಆಗ್ರಹಿಸಲಾಗಿತ್ತು. ಇದೀಗ ಸರ್ಕಾರ ರೈತರಿಗೆ 2500 ರೂ. ಬರ ಪರಿಹಾರ ಬಿಡುಗಡೆಗೊಳಿಸಿ ಆದೇಶ ಹೊರಡಿಸಿದೆ.

ಬರ ಪರಿಹಾರ ಪಡೆಯಲು ರೈತರು ಯಾವುದೇ ಪ್ರತ್ಯೇಕ ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ. ಆಧಾರ್ ಸಂಖ್ಯೆ ಜೋಡಣೆ ಆಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮೆ ಆಗಲಿದೆ. ಅತೀ ಕಡಿಮೆ ಭೂಮಿ ಹೊಂದಿರುವ ಸಣ್ಣ ರೈತರಿಂದ ಹಿಡಿದು ದೊಡ್ಡ ರೈತರವರೆಗೆ ಆರೋಹಣ ಕ್ರಮದಲ್ಲಿ ಹಣ ಪಾವತಿ ಮಾಡಲಗುತ್ತದೆ.

ಮೊದಲು ಮಳೆಯಾಶ್ರಿತ ಬೆಳೆ, ನಂತರ ನೀರಾವರಿ ಮತ್ತು ಕೊನೆಯದಾಗಿ ಬಹುವಾರ್ಷಿಕ ಬೆಳೆಗಳಿಗೆ ಪರಿಹಾರ ನೀಡಲಾಗುತ್ತದೆ. ಒಬ್ಬ ರೈತನಿಗೆ ಗರಿಷ್ಠ 2 ಹೆಕ್ಟೇರ್‌ಗೆ ಮಾತ್ರ ಈ ಪರಿಹಾರ ಸೀಮಿತವಾಗಿದೆ.

# ನ.1ರಿಂದ ಬೆಂಗಳೂರು-ಮುಂಬೈ ವಂದೇಭಾರತ್ ಸ್ಲೀಪರ್ ರೈಲು ಸೇವೆ

## ಬೆಂಗಳೂರಿನ ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಕೇಂದ್ರ ಸಚಿವ ಅಶ್ವಿನ್ ವೈಷ್ಣವ್‌ರಿಂದ ಹಸಿರು ನಿಶಾನೆ



**ಬೆಂಗಳೂರು, ಅ.29:** ಬಹು ನಿರೀಕ್ಷಿತ ಬೆಂಗಳೂರು – ಮುಂಬೈ ವಂದೇಭಾರತ್ ಸ್ಲೀಪರ್ ರೈಲು ಸೇವೆ ನ.3ರಿಂದ ವಾಣಿಜ್ಯ ಕಾರ್ಯಾಚರಣೆ ಆರಂಭಲಿದ್ದು, ನ.1ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರು ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ಸೇವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ಈ ಹವಾನಿಯಂತ್ರಿತ ರೈಲು, ಎಸ್‌ಎಂವಿಟಿ ಬೆಂಗಳೂರು ಮತ್ತು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ನಡುವೆ ರಾತ್ರಿ ಪೂರ್ತಿ ಪ್ರಯಾಣದ ಸೌಲಭ್ಯವನ್ನು ಒದಗಿಸಲಿದೆ.

ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ, ಈ ರೈಲು ಬೆಂಗಳೂರಿನಿಂದ ರಾತ್ರಿ 7:50ಕ್ಕೆ ಹೊರಟು ಮರುದಿನ ಬೆಳಿಗ್ಗೆ 11:55ಕ್ಕೆ ಮುಂಬೈ ತಲುಪಲಿದೆ. ಮರು ಪ್ರಯಾಣದಲ್ಲಿ ಮುಂಬೈನಿಂದ ರಾತ್ರಿ 8:10ಕ್ಕೆ ಹೊರಟು ಮರುದಿನ ಬೆಳಿಗ್ಗೆ 11:55ಕ್ಕೆ ಬೆಂಗಳೂರಿಗೆ ಆಗಮಿಸಲಿದೆ. ಸದ್ಯ ಇತರ ರೈಲುಗಳು ಈ ಮಾರ್ಗದಲ್ಲಿ ಪ್ರಯಾಣಿಸಲು 22 ರಿಂದ 24 ಗಂಟೆ ತೆಗೆದುಕೊಳ್ಳುತ್ತಿದ್ದು, ನೂತನ ವಂದೇ ಭಾರತ್ ಸ್ಲೀಪರ್ ರೈಲು ಬೆಂಗಳೂರಿನಿಂದ ಮುಂಬೈಗೆ 16 ಗಂಟೆ 5 ನಿಮಿಷಗಳಲ್ಲಿ ಹಾಗೂ ಮುಂಬೈನಿಂದ ಬೆಂಗಳೂರಿಗೆ 15 ಗಂಟೆ 45 ನಿಮಿಷಗಳಲ್ಲಿ ತಲುಪಬಹುದು.



ಬಿಇಎಂಎಲ್ ಸಂಸ್ಥೆಯು ತಯಾರಿಸಿರುವ 16 ಬೋಗಿಗಳ ಎರಡು ರೈಲುಸೆಟ್‌ಗಳನ್ನು ಈ ಮಾರ್ಗಕ್ಕೆ ನಿಯೋಜಿಸಲಾಗಿದ್ದು, ಮುಂಬೈ ಮತ್ತು ಪುಣೆ ನಡುವಿನ ಘಾಟ್ ವಿಭಾಗದಲ್ಲಿ ಯಶಸ್ವಿ ಪರೀಕ್ಷಾರ್ಥ ಸಂಚಾರ ಸಹ ಪೂರ್ಣಗೊಳಿಸಲಾಗಿದೆ. ಆದಾಗ್ಯೂ, ಈ ಪ್ರಮುಖ ರೈಲುಸೇವೆಯನ್ನು ನಗರದ ಮುಖ್ಯ ನಿಲ್ದಾಣವಾದ ಕೆಎಸ್‌ಆರ್ (KSR) ಬೆಂಗಳೂರಿನ ಬದಲಾಗಿ ಎಸ್‌ಎಂವಿಟಿ ಟರ್ಮಿನಲ್‌ನಿಂದ ಆರಂಭಿಸುತ್ತಿರುವುದಕ್ಕೆ ಕೆಲವು ರೈಲ್ವೆ ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದು, ಸಂಪರ್ಕ ವ್ಯವಸ್ಥೆಯ ಕೊರತೆಯನ್ನು ಎತ್ತಿಹಿಡಿದಿದ್ದಾರೆ.

### ವಾರದಲ್ಲಿ 6 ದಿನ ಸಂಚಾರ

ವಾರಕ್ಕೆ 6 ದಿನ ಸಂಚರಿಸಲಿರುವ ಈ ರೈಲಿಗೆ ಎಸ್‌ಎಂವಿಟಿ ಬೆಂಗಳೂರು ಮುಖ್ಯ ನಿರ್ವಹಣಾ ಕೇಂದ್ರವಾಗಿದ್ದು, ಊಟವನ್ನು ಒಳಗೊಂಡ ಮೂರು ಹಂತದ (3 ಟೈರ್ ಎಸಿ) ಬರ್ತ್ ದರ 3,000 ರೂಪಾಯಿಗಳಿರಬಹುದು ಎಂದು ಅಂದಾಜಿಸಲಾಗಿದೆ. ಈ ರೈಲು ಗುಂತಕಲ್ ಮಾರ್ಗವಾಗಿ ಸಂಚರಿಸಲಿದ್ದು, ಅನಂತಪುರ, ಗುಂತಕಲ್, ರಾಯಚೂರು, ಕಲಬುರಗಿ, ಸೋಲಾಪುರ, ಪುಣೆ ಮತ್ತು ಕಲ್ಯಾಣ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಲಿದೆ.

# ಕಬ್ಬು ಬೆಳೆಗಾರರ ಸಮಸ್ಯೆ: ಕೇಂದ್ರ ತಂಡದೊಂದಿಗೆ ಸಚಿವರಾದ ಲಕ್ಷ್ಮಣ ಸವದಿ, ರುದ್ರಪ್ಪ ಲಮಾಣಿ ಚರ್ಚೆ





**ಬೆಂಗಳೂರು, ಅ.29:** ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕಾಗಿ ಬೆಂಗಳೂರಿಗೆ ಆಗಮಿಸಿರುವ ಕೇಂದ್ರ ಸರ್ಕಾರದ ಉನ್ನತ ಮಟ್ಟದ ಅಧ್ಯಯನ ತಂಡದ ಹಿರಿಯ ಅಧಿಕಾರಿಗಳೊಂದಿಗೆ ರಾಜ್ಯದ ಜವಳಿ ಮತ್ತು ಸಕ್ಕರೆ ಸಚಿವ ರುದ್ರಪ್ಪ ಲಮಾಣಿ ಹಾಗೂ ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು ಮಹತ್ವದ ಚರ್ಚೆ ನಡೆಸಿದರು.

ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ದೊರಕಿಸುವುದು, ಕಬ್ಬಿನ ತೂಕದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು, ಸಕ್ಕರೆ ಇಳುವರಿ ಪ್ರಮಾಣದ ವೈಜ್ಞಾನಿಕ ಮೌಲ್ಯಮಾಪನ, ಕಬ್ಬು ಕಟಾವು ಮತ್ತು ಸಾಗಣೆ ವೆಚ್ಚ ಹಾಗೂ ರೈತರಿಗೆ ಸಕಾಲದಲ್ಲಿ ಹಣ ಪಾವತಿಸುವುದು ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಅಗತ್ಯವಿದ್ದು, ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕ ಹಾಗೂ ಪಾರದರ್ಶಕ ವ್ಯವಸ್ಥೆ ರೂಪಿಸುವ ಮಹತ್ವದ ಕುರಿತು ಚರ್ಚಿಸಲಾಯಿತು.ಸಭೆಯಲ್ಲಿ ರೈತ ಪ್ರತಿನಿಧಿಗಳು, ಕೇಂದ್ರ ಅಧ್ಯಯನ ತಂಡದ ಹಿರಿಯ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

## ನಿತ್ಯ ಪಂಚಾಂಗ 30.10.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ–ಆಶ್ವಯುಜ ಮಾಸ

**ಆಶ್ವಯುಜ ಬಹುಳ, ಪಂಚಮಿ, ಮೃಗಶಿರ ನಕ್ಷತ್ರ, ಚಾಮುಂಡೇಶ್ವರೀ ಮುಡಿ ಉತ್ಸವ, ಬೆಳಗಾವಿ ಕಾಣೆ ಮಹಾರಾಜ ಪುಣ್ಯದಿನ, ಮಿಥಿನೂರು ಜಾತ್ರೆ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಮಾಜಿ ಸಿಎಂ ಸಿದ್ದರಾಮಯ್ಯಗೆ ಸಿಸಿಬಿ ಕ್ಲೀನ್‌ಚಿಟ್: ಸ್ಟಿಂಗ್ ಆಪರೇಷನ್ ವಿಚಾರಗಳೂ ಕಟ್ಟುಕಥೆ

**ಬೆಂಗಳೂರು, ಅ.29:** ರಾಜ್ಯ ರಾಜಕೀಯದಲ್ಲಿ ಭಾರೀ ಸದ್ದುಮಾಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಸ್ಟಿಂಗ್ ಆಪರೇಷನ್‌ನಲ್ಲಿ ಬರುವ ಎಲ್ಲ ವಿಚಾರಗಳು ಕೇವಲ ಕಟ್ಟುಕಥೆ ಎಂದು ಪ್ರಕರಣದ ತನಿಖೆ ನಡೆಸಿದ ಸಿಸಿಬಿ ಗುರುವಾರ ಹೇಳಿದೆ. ಈ ಮೂಲಕ ಪ್ರಕರಣದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಿಸಿಬಿ ಕ್ಲೀನ್‌ಚಿಟ್ ನೀಡಿದೆ.

ತಮ್ಮ ತಂದೆಗೆ ಸಿಸಿಬಿ ಕ್ಲೀನ್‌ಚಿಟ್ ನೀಡಿರುವ ಬಗ್ಗೆ ಮೊದಲ ಬಾರಿಗೆ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು, ಸತ್ಯಕ್ಕೆ ಜಯ ಸಿಕ್ಕಿದೆ. ವಿಡಿಯೋ ಮಾಡಿದವರು ಕೂಡ ಇದು ಫೇಕ್ ಎಂದು ಹೇಳಿದ್ದರು ಎಂದರು.

ಇದೊಂದು ಕಟ್ಟುಕಟ್ಟು ಕಥೆ ಎಂದು ಸ್ಟಿಂಗ್ ಮಾಡಿದವರೇ ಹೇಳಿದ್ದಾರೆ. ಈ ವಿಡಿಯೋನಲ್ಲಿ ಮುಸ್ಲಿಂ ಮಹಿಳೆ ಮಾತಾಡಿದ್ದು ಸಹ ಫೇಕ್ ಎಂದು ಗೊತ್ತಾಗಿದೆ. ಸ್ಟಿಂಗ್ ಆಪರೇಷನ್ ಮಾಡಿದವರದ್ದು ಎಷ್ಟು ತಪ್ಪೋ, ಆ ವಿಡಿಯೋ ಹಂಚಿದವರದ್ದು ಅಷ್ಟೇ ತಪ್ಪಿದೆ. ಹೀಗಾಗಿ ಈ ಕೆಲಸವನ್ನು ಮಾಡಿದವರೂ ಯಾರೇ ಆಗಿರಲೀ, ಅದು



ದೆಹಲಿಯ ಮಂತ್ರಿಗಳೇ ಆಗಿರಲೀ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಅವರನ್ನು ಜೈಲಿಗಟ್ಟಬೇಕು ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು ಪರೋಕ್ಷವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಒತ್ತಾಯಿಸಿದ್ದಾರೆ.

ಇನ್ನು ಸಿಸಿಬಿ ಪ್ರಕಟನೆ ಬಗ್ಗೆ ಪ್ರತಿಕ್ರಿಯಿಸಿರುವ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವ ಚಲುವರಾಯಸ್ವಾಮಿ, ಸಿದ್ದರಾಮಯ್ಯರಂತಹ ಹಿರಿಯ ನಾಯಕರ ಮೇಲೆ ಫೇಕ್ ವಿಡಿಯೋ ಮಾಡಿದ್ದು ತಪ್ಪು. ಇದೊಂದು ಫೇಕ್ ವಿಡಿಯೋ ಎಂದು ಮೊದಲೇ ತಿಳಿದಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದ್ದು, ನಾವು ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ಆದರೆ, ದೆಹಲಿಯ ಬುದ್ಧಿ–ಜೀವಿಗಳು ಫೋನ್ ಎಲ್ಲಿ ಖರೀದಿ ಮಾಡಿದ್ದಾರೆ ಖರೀದಿ ಮಾಡಿ ಯಾರ ಮನೆಗೆ ತೆಗೆದುಕೊಂಡು ಹೋಗಿದ್ದಾರೆ ಯಾರು ಪರಾರಿಯಾಗಿದ್ದಾರೆ ಎನ್ನುವುದು ಎಲ್ಲವೂ ಗೊತ್ತಿದೆ ಎಂದರು.

# ಸಿಎಂ ಸ್ಥಾನದಿಂದ ಇಳಿದ ನಂತರ ಮೌನಿಯಾಗಿದ್ದ ಸಿದ್ದರಾಮಯ್ಯ ಮತ್ತೆ ಆಕ್ಟಿವ್

### ನ.26ರ ಸಂವಿಧಾನ ದಿನಾಚರಣೆ ಸಿದ್ಧತೆ ನೆಪದಲ್ಲಿ ಸಚಿವರು, ಶಾಸಕರ ಜತೆ ಸಭೆ

ಬೆಂಗಳೂರು, ಅ.29: ಸಿಎಂ ಸ್ಥಾನದಿಂದ ಇಳಿದ ಬಳಿಕ ಸೈಲೆಂಟ್ ಆಗಿದ್ದ ಸಿದ್ದರಾಮಯ್ಯ ಮತ್ತೆ ಆಕ್ಟಿವ್ ಆಗಿದ್ದು, ಕಾವೇರಿ ನಿವಾಸದಲ್ಲಿ ಸಚಿವರು, ಶಾಸಕರ ಜತೆ ಸಭೆ ನಡೆಸಿದ್ದಾರೆ. ನವೆಂಬರ್ 26ರಂದು ಮೈಸೂರಿನಲ್ಲಿ ಸಂವಿಧಾನ ದಿನಾಚರಣೆಗೆ ಸಿದ್ಧತೆ ನೆಪದಲ್ಲಿ ಮಾತುಕತೆ ನಡೆದಿದೆ. ಸಚಿವ ಯತೀಂದ್ರ ಕರೆದಿದ್ದ ಬ್ರೇಕ್‌ಫಾಸ್ಟ್ ಮೀಟಿಂಗ್ ಇದಾಗಿತ್ತಾದರೂ ಸಿದ್ದರಾಮಯ್ಯ ತಾವೇ ಸಭೆಯ ನೇತೃತ್ವ ವಹಿಸಿದ್ದು ಹಲವು ಲೆಕ್ಕಾಚಾರಗಳಿಗೆ ಕಾರಣವಾಗಿದೆ.

ಈ ವೇಳೆ ಸಚಿವ ಯತೀಂದ್ರ ಜೊತೆ ಸಚಿವರಾದ ಮುನಿಯಪ್ಪ, ನರೇಂದ್ರಸ್ವಾಮಿ, ಚಲುವರಾಯಸ್ವಾಮಿ, ಖಾದರ್, ಪುಟ್ಟರಂಗಶೆಟ್ಟಿ ಸೇರಿ ಹಲವರು ಉಪಸ್ಥಿತರಿದ್ದರು. ಸಚಿವರ ವಿಶ್ವಾಸಕ್ಕೆ ಪಡೆಯುವ ಪ್ರಯತ್ನ ಇದಾಗಿದೆ ಎನ್ನಲಾಗಿದೆ.

ಕಾರ್ಯಕ್ರಮದ ರೂಪರೇಷೆ ಸಿದ್ಧಪಡಿಸಿರುವ ಸಿದ್ದರಾಮಯ್ಯ, ರಾಜ್ಯಮಟ್ಟದ ಕಾರ್ಯಕ್ರಮಕ್ಕೆ ಸಿಎಂ ಅವರನ್ನು ಆಹ್ವಾನಿಸಲೂ ನಿರ್ಧಾರ ಮಾಡಿದ್ದಾರಂತೆ. ಇನ್ನು ಉಪಾಹಾರದ ಸಭೆ ವೇಳೆ ಸ್ಟಿಂಗ್ ವಿಚಾರವನ್ನೂ ಮಾಜಿ ಸಿಎಂ ಪ್ರಸ್ತಾಪಿಸಿದ್ದಾರೆ. ಸ್ಟಿಂಗ್ ನಡೆಸಿದವರನ್ನು ಇಷ್ಟೊತ್ತಿಗೆ ಬಂಧಿಸಬೇಕಿತ್ತು. ಆದರೆ ಈವರೆಗೆ ಅರೆಸ್ಟ್ ಆಗಿಲ್ಲ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಅಸಮಾಧಾನ ಹೊರಹಾಕಿದ್ದಾರೆ. ಈ ಸಂದರ್ಭ ಕೃಪಾ ಆಳ್ವಾ ವಿದೇಶಕ್ಕೆ ಹೋಗಿರುವ ಬಗ್ಗೆಯೂ ಸಭೆಯಲ್ಲಿ ಸಚಿವರು ಮಾತನಾಡಿದ್ದಾರೆ ಎನ್ನಲಾಗಿದೆ.

ಮತ್ತೊಂದೆಡೆ ನವೆಂಬರ್ 26ರಂದು ನಡೆಸಲು ಉದ್ದೇಶಿಸಿರುವ ಸಂವಿಧಾನ ದಿನ ಆಚರಣೆ ಎಚ್.ಸಿ. ಮಹದೇವಪ್ಪ ಮತ್ತು ಸಚಿವ ಯತೀಂದ್ರ ನಡುವೆ ರಾಜಕೀಯ ಸಂಘರ್ಷಕ್ಕೆ ಕಾರಣವಾಗಲಿದೆಯಾ ಎಂಬ ಪ್ರಶ್ನೆಯೂ ಉದ್ಭವಿಸಿದೆ. ದಲಿತ ಸಂಘಟನೆಗಳ ಜೊತೆಗೂಡಿ ಮೈಸೂರಿನಲ್ಲಿ ಬೃಹತ್ ಕಾರ್ಯಕ್ರಮಕ್ಕೆ ಮಹದೇವಪ್ಪ ಕೂಡ ಮುಂದಾಗಿದ್ದಾರೆ.

ಕಾರ್ಯಕ್ರಮ ಯಶಸ್ವಿಯಾದರೆ ಮಹದೇವಪ್ಪ ಶಕ್ತಿ ಪ್ರದರ್ಶನ ಆಗಲಿದೆ. ಹೀಗಾಗಿ ಮಹದೇವಪ್ಪಗೆ ಟಕ್ಕರ್ ಕೊಡಲು ಮೈಸೂರಿನಲ್ಲೇ ಸರ್ಕಾರಿ ಕಾರ್ಯಕ್ರಮ ಮಾಡಲು ಡಾ.ಯತೀಂದ್ರ ಮುಂದಾಗಿದ್ದಾರೆ ಎನ್ನಲಾಗಿದೆ.

# ಡಾ. ಸಿ.ಎಂ.ಕೊಟಗಿ ಅವರಿಗೆ ಶ್ರೀಪರಮೇಶ್ವರ ಪುಲಕೇಶಿ ಪ್ರಶಸ್ತಿ ಗೌರವ



**ಬೆಂಗಳೂರು, ಅ.29:** ಡಾ. ಚನ್ನಬಸವ ಕೊಟಗಿ ಇವರು ಪತ್ರಕರ್ತರು ಕಲಾವಿದರು ಐತಿಹಾಸಿಕ ಮಾರ್ಗದರ್ಶಕ ಗಣ್ಯ ವ್ಯಕ್ತಿಗಳ ಆಪ್ತ ಸಹಾಯಕ ಕನ್ನಡ ನಾಡು–ನುಡಿ ಬಸವಾದಿ ಶರಣರ ಸೇವಕನಾಗಿ 15 ವರ್ಷಗಳ ಕಾಲ ಸೇವೆಯನ್ನು ಗುರುತಿಸಿ ಅವರಿಗೆ 1/11/26. 71ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬೆಳಗ್ಗೆ 10:30ಕ್ಕೆ ಬೆಂಗಳೂರಿನ ಕೆಂಪೇಗೌಡ ರಸ್ತೆ ಬನ್ನಪ್ಪ ಪಾರ್ಕ್ ಆಟದ ಮೈದಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಕೂಡ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದೆ. ಅವರಿಗೆ ಪರಮೇಶ್ವರ ಪುಲಕೇಶಿ ಪ್ರಶಸ್ತಿ ಪ್ರದಾನ ಸಮಾರಂಭ ಸಂಸ್ಥೆಯಿಂದ ಬೆಂಗಳೂರಿನ ಬನ್ನಪ್ಪ ಪಾರ್ಕ್ ದಲ್ಲಿ ನಡೆಯಲಿದೆ. ಸಾಂಸ್ಕೃತಿಕ ಸಂಘಟನೆಗಾಗಿ ಪತ್ರಕರ್ತ, ಕಲಾವಿದ, ಐತಿಹಾಸಿಕ ಮಾರ್ಗದರ್ಶಕ ಗಣ್ಯ ವ್ಯಕ್ತಿಗಳ ಆಪ್ತ ಸಹಾಯಕ ಭಾರತೀಯ ಜೀವ ನಿಗಮ ಪ್ರತಿನಿಧಿ ನಾಡು–ನುಡಿ ಸೇವೆ ಬಸವಾದಿ ಶರಣರ ಸೇವೆ ಸಂಘ ಸಂಸ್ಥೆಯ ಪ್ರತಿನಿಧಿ. ಸೇವೆಗಾಗಿ ಡಾ. ಚನ್ನಬಸವ ಕೊಟಗಿ ಅವರಿಗೆ ಶ್ರೀ ಪರಮೇಶ್ವರ ಪುಲಕೇಶಿ 1/11/ 26. ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡ ಚಳುವಳಿ ಧೀಮಂತ ನಾಯಕ, ಮಾಜಿ ಶಾಸಕ ಅವರ ಸಂಸ್ಥೆಯಿಂದ ಜಿ ನಾರಾಯಣ್ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷರು ಗುರುದೇವ್ ನಾರಾಯಣ ಕುಮಾರ್ ಪ್ರಶಸ್ತಿ ಆಯ್ಕೆ ಮಾಡಿದ್ದಾರೆ.

# ನವದೆಹಲಿಯ ಭಾರತ ಮಂಟಪದಲ್ಲಿ ನಾಡಪ್ರಭು ಕೆಂಪೇಗೌಡ ದಶಮಾನೋತ್ಸವ ಸಮಾರಂಭ ಯಶಸ್ವಿ

### 53,000ಕ್ಕೂ ಹೆಚ್ಚು ಪತ್ರಗಳನ್ನು ಬರೆದ ಶಿಕ್ಷಕ ಬಸವರಾಜ್ ಬಡಗಿ ವಿಶೇಷ ಸನ್ಮಾನ

**ಬಾಗಲಕೋಟೆ, ಕರ್ನಾಟಕ/ನವದೆಹಲಿ, ಅ.29:** ಜಿಎಚ್‌ಪಿಎಸ್ ಮದನಮಟ್ಟಿ ಶಾಲೆಯ ಸರ್ಕಾರಿ ಶಿಕ್ಷಕ ಬಸವರಾಜ್ ಬಡಗಿ ಅವರು 1989 ರಿಂದ 2026 ರವರೆಗೆ 53,000 ಕ್ಕೂ ಹೆಚ್ಚು ಪತ್ರಗಳನ್ನು ಬರೆಯುವ ಮೂಲಕ ವಿಶಿಷ್ಟ ಮೈಲಿಗಲ್ಲು ಸಾಧಿಸಿದ್ದಾರೆ. ತಮ್ಮ ಪೋಷಕರಿಂದ ಪ್ರೇರಿತರಾಗಿ ಅವರು ಸರ್ಕಾರಿ ಕಚೇರಿಗಳು, ಸ್ನೇಹಿತರು, ಬಂಧುಗಳು, ಗಣ್ಯರು, ಪತ್ರಕರ್ತರು, ಮುಖ್ಯಮಂತ್ರಿಗಳ ಕಚೇರಿಗಳು, ಚಲನಚಿತ್ರ ನಟರು ಹಾಗೂ ಅಂತರರಾಷ್ಟ್ರೀಯ ನಾಯಕರು ಸೇರಿದಂತೆ ಹಲವು ಪ್ರಮುಖರಿಗೆ ಪತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಈ ಅಪರೂಪದ ಸಾಧನೆಗೆ ಅವರಿಗೆ ಹಲವು ಪ್ರಶಸ್ತಿ ಪತ್ರಗಳು ಹಾಗೂ ರಾಜ್ಯ ಮತ್ತು ದೆಹಲಿ ಸರ್ಕಾರಿ ಅಧಿಕಾರಿಗಳಿಂದ ಗೌರವ–ಸನ್ಮಾನಗಳು ಲಭಿಸಿವೆ.




ಇದರ ಭಾಗವಾಗಿ, ನಾಡಪ್ರಭು ಕೆಂಪೇಗೌಡ ದಶಮಾನೋತ್ಸವ ಸಮಾರಂಭದ ಸಂದರ್ಭದಲ್ಲಿ, ನವದೆಹಲಿಯ ಭಾರತ ಮಂಟಪದಲ್ಲಿ ಸಂಸ್ಥೆಯ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಬಂದ 100 ಜನ ಕಲಾವಿದರು ತಮ್ಮ ಕಲಾ ಪ್ರದರ್ಶನದ ಮೂಲಕ ಮನರಂಜನೆ ನೀಡಿದರು. ಹಾಗೆಯೇ, ಜಗದ್ಗುರು ನಿರ್ಮಲಾನಂದನಾಥ ಸ್ವಾಮೀಜಿ, ಡಾ. ನಂಜಾವಧೂತ ಸ್ವಾಮೀಜಿಗಳು, ನಿಶ್ಚಲಾನಂದನಾಥ ಸ್ವಾಮೀಜಿಗಳು, ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ.ಸೋಮಣ್ಣ ಅವರು, ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರೊಂದಿಗೆ 2000ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮದ ಶೋಭೆಗೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಸಂಸ್ಥೆಯ ಅಧ್ಯಕ್ಷಸಿ.ಎಂ. ನಾಗರಾಜ್ ಅವರೂ ಸಾಕ್ಷಿಯಾಗಿದ್ದರು.

# ಮಲ್ಲಿಕಾರ್ಜುನ ಖರ್ಗೆ ನಿಂದನೆ: ಆರ್.ಅಶೋಕ್ ಕ್ಷಮೆ ಕೇಳುವಂತೆ ಈಶ್ವರ ಖಂಡ್ರೆ ಒತ್ತಾಯ



**ಬೆಂಗಳೂರು, ಅ.29:** ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರೂ, ರಾಜ್ಯಸಭೆಯ ಪ್ರತಿಪಕ್ಷದ ನಾಯಕರು, ಹಿರಿಯರೂ ಆದ ಮಲ್ಲಿಕಾರ್ಜುನ ಖರ್ಗೆ ಅವರು ನಡೆಯುವ ರೀತಿ ಕುರಿತಂತೆ ವೈಯಕ್ತಿಕ ನಿಂದನೆ ಮಾಡಿರುವ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ವಿರುದ್ಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರ ಪಂಚೆಯ ಪ್ರಸ್ತಾಪವನ್ನೂ ಮಾಡಿ, ಅವಹೇಳನೆ ಮಾಡಿರುವ ಆರ್. ಅಶೋಕ್ ಇಷ್ಟು ಕೀಳುಮಟ್ಟಕ್ಕೆ ಇಳಿಯುತ್ತಾರೆ ಎಂದು ನಿರೀಕ್ಷಿಸಿರಲಿಲ್ಲ. ಇದು ಬಿಜೆಪಿಯ ಕೆಟ್ಟ ಸಂಸ್ಕೃತಿಯನ್ನು ತೋರಿಸುತ್ತದೆ. ಇದು ಖಂಡನೀಯ ಎಂದು ಖಂಡ್ರೆ ಹೇಳಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರನ್ನು ಕರೆದುಕೊಂಡು ಬಂದು ಕುರ್ಚಿಯಲ್ಲಿ ಕೂರಿಸುವ ಸ್ಥಿತಿ ಬಂದಿದೆ ಎಂದೆಲ್ಲಾ ಆರ್. ಅಶೋಕ್ ಮಾತನಾಡಿದ್ದಾರೆ. ಯಾವುದೇ ಹಿರಿಯ ವ್ಯಕ್ತಿಗಳ ವೈಯಕ್ತಿಕ ನಿಂದನೆ ಮಾಡುವುದು ಕೀಳು ರಾಜಕೀಯದ ಪರಮಾವಧಿ ಎಂದು ಕಿಡಿ ಕಾರಿದ್ದಾರೆ.

ಮಾಜಿ ಗೃಹ ಸಚಿವ, ಬಿಜೆಪಿಯ ಆರಗ ಜ್ಞಾನೇಂದ್ರ ಕೂಡ ಈ ಹಿಂದೆ ಮಲ್ಲಿಕಾರ್ಜುನ ಖರ್ಗೆಯವರ ವೈಯಕ್ತಿಕ ನಿಂದನೆ ಮಾಡಿದ್ದರು. ರಾಜ್ಯದ ನಾನಾ ಕಡೆ ಪ್ರತಿಭಟನೆ ನಡೆದು, ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾದ ಬಳಿಕ ಕ್ಷಮೆ ಕೇಳಿದರು. ಇದು ಬಿಜೆಪಿಯ ಚಾಳಿ. ಹಿರಿಯರ ಬಗ್ಗೆ ಅವಹೇಳನೆ ಮಾಡುವುದೇ ಅವರ ಸಂಸ್ಕೃತಿ. ಇದನ್ನು ಉಗ್ರವಾಗಿ ಖಂಡಿಸುತ್ತೇನೆ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ. ಕೂಡಲೇ ಆರ್. ಅಶೋಕ್ ಬೇಷರತ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಕರ್ನಾಟಕದಲ್ಲಿ ಎಸ್‌ಐಆರ್ ಸರಿಯಾಗಿ ನಡೆದಿದೆ: ಸಚಿವ ಜಾರಕಿಹೊಳಿ



### ಕಾಂಗ್ರೆಸ್ ಹೋರಾಟ ಬೇರೆ ರಾಜ್ಯಗಳಲ್ಲಿ ಮಾತ್ರ, ಕರ್ನಾಟಕಕ್ಕೆ ಅನ್ವಯಿಸುವುದಿಲ್ಲ

**ಬೆಂಗಳೂರು, ಅ.29:** ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ವಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್‌ನಲ್ಲಿ ಭಿನ್ನ ಧ್ವನಿ ಕೇಳಿಬಂದಿದೆ.

ಕೇಂದ್ರ ಸರ್ಕಾರದ ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಪ್ರಕ್ರಿಯೆಯನ್ನು ವಿರೋಧಿಸಿ ಪಕ್ಷವು ಹೋರಾಟ ನಡೆಸುತ್ತಿದ್ದರೆ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಮಾತ್ರ ಕರ್ನಾಟಕದಲ್ಲಿ ಈ ಪ್ರಕ್ರಿಯೆ ಸರಿಯಾಗಿಯೇ ನಡೆಯುತ್ತಿದೆ ಎಂದು ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ಬರೋಬ್ಬರಿ 99.32 ಲಕ್ಷ ಮತದಾರರನ್ನು (5.54 ಕೋಟಿಯಿಂದ 4.55 ಕೋಟಿಗೆ ಇಳಿಕೆ) ವಿವಿಧ ಕಾರಣಗಳಿಂದ ಕೈಬಿಡಲಾಗಿರುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈ ಕುರಿತು ಪ್ರತಿಕ್ರಿಯಿಸಿರುವ ಸಚಿವ ಸತೀಶ್ ಜಾರಕಿಹೊಳಿ, ರಾಜ್ಯದಲ್ಲಿ ನಡೆದಿರುವ ಈ ಪ್ರಕ್ರಿಯೆ ಸರಿಯಾಗಿಯೇ ಇದೆ ಮತ್ತು ನಮ್ಮದೇನು ಅದಕ್ಕೆ ಅಭ್ಯಂತರವಿಲ್ಲ ಎಂದಿದ್ದಾರೆ.

ನಮ್ಮ ಹೋರಾಟ ಬೇರೆ ರಾಜ್ಯಗಳ ವಿರುದ್ಧ ಎಂದ ಸಚಿವರು, ಕೇಂದ್ರ ಚುನಾವಣಾ ಆಯೋಗ ಮತ್ತು ಎಸ್‌ಐಆರ್ ವಿರುದ್ಧ ಕಾಂಗ್ರೆಸ್ ಪಕ್ಷ ಮಾಡುತ್ತಿರುವ ಹೋರಾಟವು ಕರ್ನಾಟಕಕ್ಕೆ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಸತೀಶ್ ಜಾರಕಿಹೊಳಿ, ನಮ್ಮ ವಿರೋಧ ಹಾಗೂ ಹೋರಾಟವಿದ್ದದ್ದು ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮತ್ತು ಬಿಹಾರ ರಾಜ್ಯಗಳಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಹೊರತು ಕರ್ನಾಟಕದ ಕುರಿತಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

### ಜಾರಕಿಹೊಳಿ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ಆಕ್ಷೇಪ

ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡ ಸಚಿವ ಸತೀಶ್ ಜಾರಕಿಹೊಳಿ ಅವರ ಹೇಳಿಕೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರ ವಾದವನ್ನು ತಳ್ಳಿಹಾಕಿರುವ ಸಚಿವ ಪ್ರಿಯಾಂಕ್ ಖರ್ಗೆ, ಎಸ್‌ಐಆರ್ ಪ್ರಕ್ರಿಯೆ ಸಮರ್ಪಕವಾಗಿ ನಡೆದಿದೆ ಎಂದು ಹೇಳಲು ಅವರ ಬಳಿ ಯಾವ ಮಾಹಿತಿ ಇದೆಯೋ ಗೊತ್ತಿಲ್ಲ. ಕಾಂಗ್ರೆಸ್ ವರಿಷ್ಠರ ನಿಲುವಿಗೆ ಅನುಗುಣವಾಗಿ ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ಗಂಭೀರ ಆಕ್ಷೇಪ ಮಾಡಿದ ಪ್ರಿಯಾಂಕ್ ಖರ್ಗೆ, ಚುನಾವಣಾ ಆಯೋಗವನ್ನು ಕೈಗೊಂಬೆ ಎಂದು ಟೀಕಿಸಿದ್ದಾರೆ. ಕರ್ನಾಟಕದಲ್ಲಿ ಕೂಡ ಮತದಾರರ ದತ್ತಾಂಶ ನಿರ್ವಹಣೆಯಲ್ಲಿ ಲೋಪಗಳಾಗಿವೆ ಎಂದೂ ಆರೋಪಿಸಿದ್ದಾರೆ. ಬಾಡಿಗೆ ಮನೆಗಳಲ್ಲಿ ವಾಸಿಸುವವರು, ವಲಸೆ ಕಾರ್ಮಿಕರು, ಹಿರಿಯ ನಾಗರಿಕರು ಹಾಗೂ ದಾಖಲೆಗಳಲ್ಲಿ ಸಣ್ಣಪುಟ್ಟ ತಪ್ಪುಗಳಿರುವವರು ಸೇರಿದಂತೆ ಲಕ್ಷಾಂತರ ಅರ್ಹ ಮತದಾರರು ಈ ವ್ಯಾಪಕ ಪರಿಷ್ಕರಣೆಯಿಂದ ಮತದಾನದ ಹಕ್ಕು ಕಳೆದುಕೊಳ್ಳುವ ಅಪಾಯವಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಸ್ವತಂತ್ರ ನಾಗರಿಕ ಸಂಘಟನೆಗಳ ನಿಯೋಗಗಳು ಆತಂಕ ವ್ಯಕ್ತಪಡಿಸಿವೆ ಎಂದರು.

# ಹಿಂದೆ ಏನು ಮಾತನಾಡಿದ್ದೆ ಎನ್ನುವ ಬಗ್ಗೆ ಎಚ್‌ಡಿಕೆಗೆ ಸ್ಪಷ್ಟನೆಯಿಲ್ಲ: ಪ್ರಿಯಾಂಕ್ ಖರ್ಗೆ

**ಬೆಂಗಳೂರು, ಅ.29:** ಆಚಾರವಿಲ್ಲದ ನಾಲಿಗೆ, ವಿಚಾರವಿಲ್ಲದ ಮಾತು ಎಂದು ಹೇಳುವ ಮೂಲಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಕರ್ನಾಟಕದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತೆ ವಾಗ್ದಾಳಿ ನಡೆಸಿದ್ದಾರೆ.

ಈ ಹಿಂದೆ ಏನು ಮಾತನಾಡಿದ್ದೆ ಎಂಬುದರ ಬಗ್ಗೆ ಕುಮಾರಸ್ವಾಮಿ ಅವರಿಗೆ ಸ್ಪಷ್ಟತೆಯೇ ಇಲ್ಲ. ಸಿದ್ದರಾಮಯ್ಯ ವಿಷಯವಿಟ್ಟುಕೊಂಡು ಒಮ್ಮೆ ಸಿಎಂ ಕಡೆ ಬೆರಳು ತೋರಿಸ್ತಾರೆ. ಮತ್ತೊಮ್ಮೆ ಸಚಿವ ಜಮೀರ್ ಅಹ್ಮದ್ ಕಡೆ, ಇನ್ನೊಮ್ಮೆ ನಮ್ಮ ಕುಟುಂಬದ ಕಡೆ ಕೈತೋರಿಸುತ್ತಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಿದ್ದರಾಮಯ್ಯನವರನ್ನು ಅತಿ ಹೆಚ್ಚು ಅವಮಾನಿಸಿದವರು ಕುಮಾರಸ್ವಾಮಿ. ಅವರಿಗೆ ಸಿಎಂ ಹುದ್ದೆ ತಪ್ಪಿಸಿದ್ದು ಅವರೇ, ಇದು ಅವರ ರಾಜಕೀಯ ಜೀವನದುದ್ದಕ್ಕೂ ಎಡೆಬಿಡದೆ ಕಾಡಿದವರು ಈಗ ಖರ್ಗೆ ಕುಟುಂಬದ ಕಡೆ ತಿರುಗಿದ್ದಾರೆ. ನಿಮ್ಮ ಐಟಿ ಸೆಲ್‌ನ ಹುಡುಗರು ವಿಚಾರಣೆಗೆ ಹಾಜರಾಗುತ್ತಿಲ್ಲವೇಕೆ, ನಮ್ಮವರ ಪಾತ್ರವಿಲ್ಲ ಎಂದು ಹೇಳುವ ನೈತಿಕತೆ ತೋರುತ್ತಿಲ್ಲವೇಕೆ ವಿಡಿಯೋ ಅಪ್‌ಲೋಡ್ ಮಾಡಿದ್ದನ್ನು ನೀವು ವಿರೋಧಿಸುತ್ತಿಲ್ಲವೇಕೆ, ಅಕ್ಕ ಸಮ್ಮೇಳನದ ಹೆಸರಿನಲ್ಲಿ ಅಮೆರಿಕಕ್ಕೆ ಹೋಗಿ ನಡೆಸಿದ ಷಡ್ಯಂತ್ರವೇನು. ಕಿಂಚಿತ್ತಾದರೂ ಮಾತಿನಲ್ಲಿ ಘನತೆ ಬೆಳೆಸಿಕೊಳ್ಳಿ. ಸತ್ಯ ಹೇಳುವುದನ್ನು ರೂಢಿಸಿಕೊಳ್ಳಿ, ನಡತೆಯಲ್ಲಿ ತೂಕ ಹೆಚ್ಚಿಸಿಕೊಳ್ಳಿ ತಮ್ಮ ಎಕ್ಸ್‌ನಲ್ಲಿ ಎಂದು ಪ್ರಿಯಾಂಕ್ ಖರ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ನಿಧನ ವಾರ್ತೆ

# ಪಡುತೋನ್ಸೆ ಗುಜ್ಜರ್‌ಬೆಟ್ಟು ಸಂಕಿ ಬಾಬ ಪೂಜಾರ್ತಿ ನಿಧನ



**ಮುಂಬಯಿ, ಅ.28:** ಉಡುಪಿ ಕಲ್ಯಾಣ್ಪುರ ಪಡುತೋನ್ಸೆ ಇಲ್ಲಿನ ಗುಜ್ಜರ್‌ಬೆಟ್ಟು ಕಾಂತು ಪೂಜಾರಿ ಮನೆಯ ಹಿರಿಯ ಧಾರ್ಮಿಕ ಶ್ರದ್ಧಾಳು, ಶ್ರೀ ಧರ್ಮ ಜಾರಾಂದಾಯ ಪರಿವಾರ ದೈವಗಳ ದೈವಸ್ಥಾನ ಮೂಲ ಮನೆಯ ಕುಟುಂಬದ ಹಿರಿಯ ದೈವರಾಧಕಿ ಶ್ರೀಮತಿ ಸಂಕಿ ಬಾಬ ಪೂಜಾರ್ತಿ (89.) ಅ.28 ಬುಧವಾರ ಮುಂಜಾನೆ ಅಲ್ಪಕಾಲದ ಅಸ್ವಸ್ಥತೆಯಿಂದ ನಿಧನರಾದರು. ಮೃತರು ಮೂವರು ಸುಪುತ್ರರು (ಬೃಹನ್ಮುಂಬಯಿ ಜೆರಿಮೆರಿ ಅಲ್ಲಿನ ಹೊಟೇಲು ಉದ್ಯಮಿಗಳಾದ ತೋನ್ಸೆ ಸಂಜೀವ ಪೂಜಾರಿ (ತೋನ್ಸೆ ಶ್ರೀ ಬ್ರಹ್ಮ ಬೈದರ್ಕಳ ಪಂಚ ಧೂಮಾವತಿ ಗರೋಡಿ ಸೇವಾ ಟ್ರಸ್ಟ್ ಮುಂಬಯಿ ಇದರ ಗೌರವ ಪ್ರಧಾನ ಕಾರ್ಯದರ್ಶಿ) ಮತ್ತು ಜಯ ಪೂಜಾರಿ ತೋನ್ಸೆ, ಹಾಗೂ ಜೇಸಿ ಶೇಕರ್ ಗುಜ್ಜರ್‌ಬೆಟ್ಟು (ಸಂತೆಕಟ್ಟೆ ಬಿಲ್ಲವರ ಸೇವಾ ಸಂಘ ಅಸೋಸಿಯೇಶನ್‌ನ ನಿಕಟಪೂರ್ವ ಅಧ್ಯಕ್ಷ) ಸೇರಿದಂತೆ ಓರ್ವ ಸಹೋದರ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯ ಸಂಸ್ಕಾರವು ಬುಧವಾರ ಅಪರಾಹ್ನ 3:00 ಗಂಟೆಯ ವೇಳೆಗೆ ಗುಜ್ಜರ್‌ಬೆಟ್ಟುನಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

# ಬಿಜೆಪಿಯಿಂದ ಅರಾಜಕತೆ ಹಟಾವೋ ಅಭಿಯಾನ: ಸುನೀಲ್ ಕುಮಾರ್

### ಎಸ್‌ಐಆರ್ ಕುರಿತು ಜನರಲ್ಲಿ ಗೊಂದಲ, ಅರಾಜಕತೆ ಸೃಷ್ಟಿಸಲು ಕಾಂಗ್ರೆಸ್ ಯತ್ನ ಆರೋಪ



**ಚಿಕ್ಕಮಗಳೂರು, ಅ.29:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಕುರಿತು ಕಾಂಗ್ರೆಸ್ ಜನರಲ್ಲಿ ಗೊಂದಲ ಮೂಡಿಸುವ ಹಾಗೂ ಸುಳ್ಳು ಸುದ್ದಿಗಳ ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಬಿಜೆಪಿ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್ ಆರೋಪಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಈ ಧೋರಣೆಯನ್ನು ಖಂಡಿಸಿ ನವೆಂಬರ್ 1ರಿಂದ 30ರವರೆಗೆ ರಾಜ್ಯಾದ್ಯಂತ 'ಅರಾಜಕತೆ ಹಟಾವೋ' ಅಭಿಯಾನ ಹಮ್ಮಿಕೊಳ್ಳಲು ಬಿಜೆಪಿ ನಿರ್ಧರಿಸಿದೆ ಎಂದು ತಿಳಿಸಿದರು. ಸ್ವಾತಂತ್ರ್ಯ ನಂತರ ದೇಶದಲ್ಲಿ 12 ಬಾರಿ ಎಸ್‌ಐಆರ್ ಪ್ರಕ್ರಿಯೆ ನಡೆದಿದ್ದು, ಈ ಅವಧಿಯಲ್ಲಿ ಹಲವು ಬಾರಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಮತದಾರರ ಪಟ್ಟಿಯ ಪರಿಷ್ಕರಣೆ ಚುನಾವಣಾ ಆಯೋಗದ ನಿರಂತರ ಹಾಗೂ ಸಾಂವಿಧಾನಿಕ ಪ್ರಕ್ರಿಯೆಯಾಗಿದೆ. ಆದರೂ ಕಾಂಗ್ರೆಸ್, ಎಸ್‌ಐಆರ್ ಪ್ರಕ್ರಿಯೆಯನ್ನು ರಾಜಕೀಯ ವಿವಾದವನ್ನಾಗಿ ಮಾಡುತ್ತಿದೆ ಎಂದು ಟೀಕಿಸಿದರು. ಎಸ್‌ಐಆರ್ ಪ್ರಕ್ರಿಯೆ ಆರಂಭಕ್ಕೂ ಮುನ್ನ ಚುನಾವಣಾಧಿಕಾರಿಗಳು ರಾಜ್ಯಮಟ್ಟದಿಂದ ತಾಲೂಕು ಮಟ್ಟದವರೆಗೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಹಲವು ಸುತ್ತಿನ ಚರ್ಚೆ ನಡೆಸಿದ್ದಾರೆ. ಆಗ ಆಕ್ಷೇಪ ವ್ಯಕ್ತಪಡಿಸದ ಕಾಂಗ್ರೆಸ್, ಇದೀಗ ಜನರಲ್ಲಿ ಗೊಂದಲ ಮೂಡಿಸುವ ರೀತಿಯಲ್ಲಿ ಹೋರಾಟ ನಡೆಸುತ್ತಿರುವುದು ಹಾಸ್ಯಾಸ್ಪದ ಎಂದು ಹೇಳಿದರು.

# ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಪತನ ಆರಂಭ: ಎನ್‌ಡಿಎ ಹೊಸ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದೆ: ಟಿ.ಎ.ಶರವಣ

**ಬೆಂಗಳೂರು, ಅ.29:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಪತನದ ಆರಂಭವಾಗಿದೆ. ಬಿಜೆಪಿ–ಜೆಡಿಎಸ್ ಮೈತ್ರಿಕೂಟವು ಎನ್‌ಡಿಎ ಹೆಸರಿನಲ್ಲಿ ರಾಜ್ಯದಲ್ಲಿ ಹೊಸ ರಾಜಕೀಯ ಶಕ್ತಿಯಾಗಿ ಹೊರಹೊಮಿದೆ ಎಂದು ವಿಧಾನಪರಿಷತ್ ಸದಸ್ಯ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಟಿ.ಎ. ಶರವಣ ಹೇಳಿದರು.

ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಆಯ್ಕೆಯಾದ ಎನ್‌ಡಿಎ ಮೈತ್ರಿಕೂಟದ 4 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಜೆಡಿಎಸ್ ಶಾಸಕಾಂಗ ಪಕ್ಷದ ವತಿಯಿಂದ ವಿಧಾನಸೌಧದಲ್ಲಿ ಜೆಡಿಎಸ್‌ನ ಎ.ಪಿ. ರಂಗನಾಥ್ ಅವರಿಗೆ ಬುಧವಾರ ಹಮ್ಮಿಕೊಂಡಿದ್ದಅಭಿನಂದನಾ ಸಭೆ ನಂತರ ಮಾತನಾಡಿ, ರಾಜ್ಯ ರಾಜಕೀಯದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಅನುಭವಿಸಲಿದೆ ಎಂಬುದಕ್ಕೆ ವಿಧಾನಪರಿಷತ್ ಚುನಾವಣೆಯಲ್ಲಿ ಮೈತ್ರಿಕೂಟ ಸಾಧಿಸಿರುವ ಪ್ರಚಂಡ ಗೆಲುವೇ ಸಾಕ್ಷಿಯಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.



**ಪರಿಷತ್ ಚುನಾವಣೆ ಫಲಿತಾಂಶ ರಾಜ್ಯ ರಾಜಕಾರಣದಲ್ಲಿ ಬದಲಾವಣೆಯ ಮುನ್ಸೂಚನೆ ಎಂದು ಮೈತ್ರಿಕೂಟದ ನಾಯಕರು ವಿಶ್ಲೇಷಿಸಿದ್ದಾರೆ. ಎನ್‌ಡಿಎಗೆ ಮತದಾರರು ಬೆಂಬಲ ನೀಡಿದ್ದಾರೆ, ಕಾಂಗ್ರೆಸ್ ವಿರುದ್ಧ ಜನಾಕ್ರೋಶ ವ್ಯಕ್ತವಾಗಿದೆ ಎಂದು ಹೇಳಿಕೆ ನೀಡಿದ್ದು, ಕಾಂಗ್ರೆಸ್ ಮುಕ್ತ ಕರ್ನಾಟಕದ ಸಂಕಲ್ಪದ ಮಾತನ್ನೂ ಮುಂದಿಟ್ಟಿದ್ದಾರೆ.**

ವಿಧಾನಪರಿಷತ್ ಚುನಾವಣೆಯ ಫಲಿತಾಂಶ ಕೇವಲ ಗೆಲುವು ಸೋಲಿನ ಲೆಕ್ಕಾಚಾರವಲ್ಲ; ಅದು ರಾಜ್ಯದ ಜನರ ಜನಾದೇಶವಾಗಿದೆ. ಕಾಂಗ್ರೆಸ್ ಪಕ್ಷ ಮತ್ತು ಅದರ ಸರ್ಕಾರದ ಆಡಳಿತದಿಂದ ಜನರು ಭ್ರಮನಿರಸನಗೊಂಡಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷದ ವಿರುದ್ಧ ಜನರ ಅಸಮಾಧಾನ ಹೆಚ್ಚಾಗಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಜನರು ತಿರಸ್ಕರಿಸಲಿರುವುದು ನಿಶ್ಚಿತ ಎಂದು ಶರವಣ ಅವರು ವಾಗ್ದಾಳಿ ನಡೆಸಿದರು. ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಒಗ್ಗಟ್ಟು, ಕಾರ್ಯಕರ್ತರ ಪರಿಶ್ರಮ ಮತ್ತು ಜನರ ಬೆಂಬಲದಿಂದ ಈ ಐತಿಹಾಸಿಕ ಗೆಲುವು ಸಾಧ್ಯವಾಗಿದೆ. ವಿಧಾನಪರಿಷತ್‌ನ ನಾಲ್ಕೂ ಸ್ಥಾನಗಳಲ್ಲಿ ಮೈತ್ರಿಕೂಟ ಜಯಗಳಿಸಿರುವುದು ರಾಜ್ಯದ ರಾಜಕೀಯ ಭವಿಷ್ಯದ ದಿಕ್ಕನ್ನು ಸೂಚಿಸುವ ಮಹತ್ವದ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ಈ ಚುನಾವಣೆಯ ಫಲಿತಾಂಶ ರಾಜ್ಯ ರಾಜಕೀಯದಲ್ಲಿ ಟ್ರೆಂಡ್‌ಸೆಟ್ಟರ್ ಆಗಲಿದೆ. ಮುಂಬರುವ ದಿನಗಳಲ್ಲಿ ಎನ್‌ಡಿಎ ಮೈತ್ರಿಕೂಟ ಮತ್ತಷ್ಟು ಬಲಿಷ್ಠವಾಗಿ ಬೆಳೆದು, ರಾಜ್ಯದಲ್ಲಿ ರಾಜಕೀಯ ಬದಲಾವಣೆಗೆ ಮುನ್ನುಡಿ ಬರೆಯಲಿದೆ ಎಂದು ಟಿ.ಎ.ಶರವಣ ವಿಶ್ವಾಸ ವ್ಯಕ್ತಪಡಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಹಾಲಿನ ದರ ಲೀಟರ್‌ಗೆ 8 ರೂ. ಏರಿಕೆ, ನ.1ರಿಂದ ಜಾರಿ

## ರೈತರಿಗೆ 7 ರೂ. , ಒಕ್ಕೂಟಕ್ಕೆ 1 ರೂ.: ಸಂಪುಟ ಸಭೆಯಲ್ಲಿ ನಿರ್ಧಾರ

**ಬೆಂಗಳೂರು, ಅ.29:** ರಾಜ್ಯ ಸರ್ಕಾರ ರಾಜ್ಯದ ಜನತೆಗೆ ಮತ್ತೊಂದು ದರ ಏರಿಕೆ ಶಾಕ್ ನೀಡಿದ್ದು, ನಂದಿನ ಹಾಲಿನ ದರ ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಲು ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಲು ನಿರ್ಧರಿಸಲಾಗಿದೆ.




ಹೆಚ್ಚಿಗೆ ಮಾಡಲಾಗುವ 8 ರೂಪಾಯಿಯಲ್ಲಿ 7 ರೂಪಾಯಿ ಹಾಲು ಉತ್ಪಾದಕರಿಗೆ ಮತ್ತು 1 ರೂಪಾಯಿ ಕೆಎಂಎಫ್ ಗೆ ನೀಡಲಾಗುವುದು ಮತ್ತು ಪರಿಷ್ಕೃತ ದರ ನವೆಂಬರ್ 1ರಿಂದಲೇ ಜಾರಿಯಾಗಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದ್ದಾರೆ.

**ಪ್ರೋತ್ಸಾಹಧನ ಸೇರಿ 47 ರೂ. ರೈತರಿಗೆ:** ಇದು ಸರ್ವಾನುಮತದಿಂದ ಕೈಗೊಂಡ ತೀರ್ಮಾನ ಆಗಿದೆ. ಇನ್ಮುಂದೆ ರೈತರಿಗೆ 35 ರೂ. ಬದಲು 42 ರೂ. ಲೀಟರ್‌ಗೆ ಸಿಗಲಿದೆ. ಇದರ ಜೊತೆಗೆ ಪ್ರೋತ್ಸಾಹಧನ 5 ರೂ. ಸಿಗುತ್ತಿದೆ. ಒಟ್ಟು 47 ರೂ. ಲೀಟರ್ ಹಾಲಿಗೆ ಇನ್ನು ಮುಂದೆ ರೈತರಿಗೆ ಸಿಗಲಿದೆ ಎಂದು ಮಾಹಿತಿ ನೀಡಿದರು.

ಈ ಹಿಂದೆ ರೈತರು ಹೋರಾಟ ಮಾಡಿ ಹಾಲಿನ ದರ ಪರಿಷ್ಕರಣೆಗೆ ಆಗ್ರಹಿಸಿದ್ದರು. ಹಾಲು ಉತ್ಪಾದನಾ ಒಕ್ಕೂಟಗಳೂ ಹಾಲಿನ ದರ ಹೆಚ್ಚಿಸಲು ಒತ್ತಾಯ ಮಾಡಿದ್ದವು. ಹಾಲಿನ ದರ ಏರಿಸಲು ಪಕ್ಷಾತೀತವಾಗಿ ಒತ್ತಡ ಇದೆ. ರಾಜ್ಯದಲ್ಲಿ 46 ರೂ., ದೆಹಲಿಯಲ್ಲಿ 59 ರೂ., ಗುಜರಾತ್‌ನಲ್ಲಿ 57 ರೂ., ತೆಲಂಗಾಣ 64 ರೂ. ಇದೆ. ಸರಾಸರಿ ಭಾರತದಲ್ಲಿ 57 ರೂ ಹಾಲಿನ ದರ ಇದೆ. ನಮ್ಮ ರಾಜ್ಯದಲ್ಲಿ ಸರಾಸರಿ ದರ 46 ರೂ ಇದೆ ಎಂದು ಅಂಕಿ ಅಂಶ ನೀಡಿದರು. ಈ ಎಲ್ಲ ಕಾರಣಗಳಿಂದ ರೈತರ ನೆರವಿಗಾಗಿ ಹಾಲಿನ ದರ ಏರಿಕೆ ಮಾಡಲು ಸರ್ಕಾರ ತೀರ್ಮಾನ ಮಾಡಿದೆ. ಹಾಲಿನ ದರ 8 ರೂ. ಹೆಚ್ಚಳ ಹೆಚ್ಚಿಸಲು ತೀರ್ಮಾನ ಮಾಡಲಾಗಿದೆ. ಇದರಲ್ಲಿ 1 ರೂ. ಹಾಲು ಒಕ್ಕೂಟಗಳಿಗೆ, ರೈತರಿಗೆ 7 ರೂ. ಹೋಗಲಿದೆ ಎಂದು ಕೃಷ್ಣಬೈರೇಗೌಡ ವಿವರಿಸಿದರು.

**ಹಾಲಿನ ಉತ್ಪನ್ನಗಳ ಬೆಲೆಯೂ ಜಾಸ್ತಿ ಆಗುತ್ತೆ:** ನಂದಿನಿ ಹಾಲಿನ ದರ ಏರಿಕೆ ಬೆನ್ನಲ್ಲೇ ಹೋಟೆಲ್‌ಗಳಲ್ಲಿ ಕಾಫಿ,ಟೀ ಹಾಗೂ ತಿಂಡಿ ತಿನಿಸುಗಳ ದರ ಹಾಗೂ ಹಾಲಿನ ಉತ್ಪನ್ನಗಳ ದರ ಸಹ ಹೆಚ್ಚಳವಾಗಲಿದೆ. ಈ ಬಗ್ಗೆ ಸ್ವತಃ ಸಹಕಾರಿ ಸಚಿವ ಲಕ್ಷ್ಮಣ ಸವದಿ ಸುಳಿವು ನೀಡಿದ್ದಾರೆ. ಸಚಿವ ಸಂಪುಟ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಹಾಲಿನ ದರ ಏರಿಕೆ ಮಾಡೋದು ಅನಿವಾರ್ಯವಾಗಿತ್ತು. ಇಲ್ಲದಿದ್ದರೆ ರೈತರು ಬೇರೆ ರಾಜ್ಯಗಳಿಗೆ ಹಾಲು ಮಾರಾಟ ಮಾಡ್ತಾರೆ. ಗ್ರಾಹಕರು ಕೂಡ ಈ ದರ ಏರಿಕೆಗೆ ಸಪೋರ್ಟ್ ಮಾಡಬೇಕು. ನೀವು ಕೊಡುವ ದುಡ್ಡು ರೈತರಿಗೆ ಹೋಗುತ್ತೆ. ಹಾಗೇ ಒಂದು ಏರಿಕೆ ಆದರೆ ಎಲ್ಲವೂ ಏರಿಕೆ ಆಗುತ್ತೆ ಎಂದರು.

## ರೈತರ ನಷ್ಟ ತಡೆಯಲು ಹಾಲಿನ ದರ ಏರಿಕೆ: ಸಿಎಂ ಡಿಕೆಶಿ ಸಮರ್ಥನೆ

**ಬೆಂಗಳೂರು, ಅ.29:** ಕಳೆದ ಒಂದೆರಡು ವರ್ಷದಿಂದ ಹಾಲಿನ ದರ ಏರಿಸಲು ಬೇಡಿಕೆ ಇತ್ತು. ರೈತರ ನಷ್ಟ ತಡೆಯಲು ಹಾಲಿನ ದರ ಏರಿಕೆ ಮಾಡಲಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.



ನಗರದ ಖಾಸಗಿ ಹೋಟೆಲ್ ಬಳಿ ಮಾಧ್ಯಮಗಳಿಗೆ ಗುರುವಾರ ಪ್ರತಿಕ್ರಿಯೆ ನೀಡಿದ ಅವರು, ಸರ್ಕಾರ ರೈತರಿಗೆ ಸಹಾಯ ಮಾಡುತ್ತಿದೆ. ರೈತರು ನಮಗೆ ಮುಖ್ಯ. ಪ್ಲಾಸ್ಟಿಕ್ ಕವರ್, ಡೀಸೆಲ್, ಪೆಟ್ರೋಲ್ ಸೇರಿ ಎಲ್ಲದರ ಬೆಲೆ ಹೆಚ್ಚಾಗಿದೆ. ಹಾಲಿನ ಸಾರಿಗೆ ವೆಚ್ಚವೂ ಏರಿಕೆಯಾಗಿದೆ. 12ರಿಂದ 15 ರೂ.ವರೆಗೆ ಹೆಚ್ಚಳ ಮಾಡಬೇಕೆಂಬ ಬೇಡಿಕೆ ಇತ್ತು. ನಾವು ಎಲ್ಲರೊಂದಿಗೆ ಚರ್ಚಿಸಿ ಈ ತೀರ್ಮಾನ ಮಾಡಲಾಗಿದೆ ಎಂದರು.

**ನೆರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಕಡಿಮೆ:** ಪ್ರತಿ ಲೀಟರ್ ನೀರಿಗೆ 30–35 ರೂ.ಗಳನ್ನು ನೀಡಲಾಗುತ್ತಿದೆ. ಪಕ್ಕದ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಹಾಲಿನ ಬೆಲೆ ಕಡಿಮೆ ಇದೆ. ನಮ್ಮಲ್ಲಿ ಬೆಲೆ ಕಡಿಮೆ ಇದ್ದಿದ್ದರಿಂದ ಆಂಧ್ರ, ಮಹಾರಾಷ್ಟ್ರಕ್ಕೂ, ಹಾಲು ಹೋಗುತ್ತಿತ್ತು. ಅದನ್ನು ತಡೆಯಬೇಕಿತ್ತು. ತಿರುಪತಿಗೆ ನಂದಿನಿ ತುಪ್ಪವನ್ನೇ ಖರೀದಿ ಮಾಡುತ್ತಾರೆ. ಅವರು ಅಲ್ಲಿಯೇ ಖರೀದಿಸಬಹುದು. ಆದರೆ ನಂದಿನಿ ಬಗ್ಗೆ ಅವರಿಗೆ ನಂಬಿಕೆ ಇದೆ. ಮೈಸೂರು ಪಾಕ್ ಸೇರಿದಂತೆ ಇತರ ಪದಾರ್ಥಗಳಿಗೆ ನಂದಿನ ತುಪ್ಪದ ಬೇಡಿಕೆ ಇದೆ. ಇದರ ಜೊತೆಗೆ ಸರ್ಕಾರದಿಂದಲೂ ಪ್ರೋತ್ಸಾಹಧನ ನೀಡಲಾಗುತ್ತಿದೆ. ರೈತರಿಗೆ ನಷ್ಟವಾಗುತ್ತಿರುವುದರಿಂದ ಸರ್ಕಾರ ಈ ತೀರ್ಮಾನವನ್ನು ಮಾಡಿದೆ ಎಂದು ಸ್ಪಷ್ಟಪಡಿಸಿದರು.

## ದರ ಏರಿಕೆಯಿಂದ ರೈತರಿಗೆ ಲಾಭ



**ಹಾಲಿನ ದರ ಏರಿಕೆ ಮಾಡುವ ಮೂಲಕ ನಮ್ಮ ಸರ್ಕಾರ ರೈತರ ಕೈ ಬಲಪಡಿಸುವ ಕೆಲಸ ಮಾಡುತ್ತಿದೆ. ಏಕಾಏಕಿ 8 ರೂ., ಏರಿಕೆ ಮಾಡಿ, ರೈತರಿಗೆ 6 ರೂ., ಲಾಭ ನೀಡುವ ಐತಿಹಾಸಿಕ ನಿರ್ಧಾರವನ್ನು ನಮ್ಮ ಸರ್ಕಾರ ಪ್ರಕಟಿಸಿದೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು. ವಿಧಾನಸೌಧದಲ್ಲಿ ಇಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವರು, "ನಮ್ಮಪ್ಪನೂ ರೈತನೇ. ಅವರಿಗೆ 6 ರೂ., ದೊರೆಯುವುದಾದರೆ, ನಾವು (ನಗರವಾಸಿಗಳು) ಇಲ್ಲಿ ಇನ್ನೆರೆಡು ರೂಪಾಯಿ ಹೆಚ್ಚುವರಿ ನೀಡಿ ಹಾಲು ಖರೀದಿಸಿದರೆ ತಪ್ಪೇನು, ನಮ್ಮಪ್ಪನಿಗೆ ಹಣ ನೀಡಲು ನಾವು ಯೋಚನೆ ಮಾಡಬೇಕೆ" ಎಂದು ಹಾಲಿನ ದರ ಏರಿಕೆಯನ್ನು ಸಮರ್ಥಿಸಿಕೊಂಡರು.**

## ಎಲ್ಲ ತಾಲ್ಲೂಕು, ಹೋಬಳಿ ಮಟ್ಟದಲ್ಲೂ ಅಗ್ನಿಶಾಮಕ ಠಾಣೆ: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು, ಅ.29: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದ್ದು, ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅಗತ್ಯ ಸೌಲಭ್ಯ, ಆರ್ಥಿಕ ನೆರವು ಮತ್ತು ಮೂಲಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಗೃಹ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.



ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ಗುರುವಾರ ಆಯೋಜಿಸಲಾಗಿದ್ದ 2ನೇ ಅಖಿಲ ಭಾರತ ಅಗ್ನಿಶಾಮಕ ಸೇವೆಗಳ ಕ್ರೀಡಾಕೂಟ–2026ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಹಗಲು–ರಾತ್ರಿ ಎನ್ನದೆ ಜನರ ಜೀವ ಹಾಗೂ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಶ್ರಮಿಸುತ್ತಿದ್ದಾರೆ. ಅಪಾಯಕಾರಿ ಸಂದರ್ಭಗಳಲ್ಲಿ ಧೈರ್ಯ, ದೈಹಿಕ ಸಾಮರ್ಥ್ಯ, ಸಮಯಪ್ರಜ್ಞೆ ಮತ್ತು ತಂಡವಾಗಿ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರ ಸುರಕ್ಷತೆಯನ್ನು ಖಚಿತಪಡಿಸುವ ಈ ಸಿಬ್ಬಂದಿಯ ಸೇವೆ ಮಹತ್ವದ್ದಾಗಿದೆ ಎಂದು ಸಚಿವರು ಹೇಳಿದರು.

ದೇಶದ ಪ್ರತಿಯೊಂದು ತಾಲ್ಲೂಕಿನಲ್ಲೂ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸುವ ಕೇಂದ್ರ ಸರ್ಕಾರದ ಆಶಯದಂತೆ, ಕರ್ನಾಟಕದಲ್ಲಿಯೂ ಎಲ್ಲ ತಾಲ್ಲೂಕುಗಳು ಹಾಗೂ ಪ್ರಮುಖ ಹೋಬಳಿ ಮಟ್ಟದಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ ಅಗ್ನಿ ಅವಘಡಗಳು ಮತ್ತು ಇತರ ತುರ್ತು ಸಂದರ್ಭಗಳಲ್ಲಿ ಜನರಿಗೆ ತ್ವರಿತವಾಗಿ ನೆರವು ಒದಗಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಇಲಾಖೆಗೆ ಅಗತ್ಯವಿರುವ ಸೌಲಭ್ಯಗಳು, ಮೂಲಸೌಕರ್ಯ ಹಾಗೂ ಆರ್ಥಿಕ ನೆರವು ಒದಗಿಸುವ ಮೂಲಕ ಅದರ ಕಾರ್ಯನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ಭರವಸೆ ನೀಡಿದರು.

ಕ್ರೀಡಾಕೂಟವನ್ನು ಆಯೋಜಿಸಿದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಮಹಾನಿರ್ದೇಶಕರು, ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಭಿನಂದಿಸಿದರು. ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಗೃಹರಕ್ಷಕ ದಳ, ನಾಗರಿಕ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಂ. ನಂಜುಂಡಸ್ವಾಮಿ, ಉಪ ಮಹಾನಿರ್ದೇಶಕಿ ರೇಣುಕಾ ಕೆ. ಸುಕುಮಾರ್, ಅಗ್ನಿಶಾಮಕ ಸಲಹೆಗಾರ ಪ್ರಶಾಂತ್ ಲೋಂಕರ್, ಉಪ ಅಗ್ನಿಶಾಮಕ ಸಲಹೆಗಾರ ಮೋರೆಶ್ವರ್ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಜವಳಿ ಉದ್ಯಮಿಗಳಿಗೆ ಕೇಂದ್ರದ ಪ್ರೋತ್ಸಾಹಕ ಯೋಜನೆ ಲಾಭ ತಲುಪಿಸಲು ವಿಶೇಷ ಅಭಿಯಾನ

**ಬೆಂಗಳೂರು, ಅ.29:** ಕೇಂದ್ರ ಸರ್ಕಾರದ ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಯೋಜನೆಯಡಿ ಜವಳಿ ಕ್ಷೇತ್ರದಲ್ಲಿ ಹೂಡಿಕೆ ಆಕರ್ಷಣೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನ ಪಡೆದಿದೆ. ಈ ಸಾಧನೆಯನ್ನು ಮತ್ತಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಕೇಂದ್ರದ ಪರಿಷ್ಕೃತ ಪಿಎಲ್‌ಐ ಯೋಜನೆಯ ಪ್ರಯೋಜನವನ್ನು ರಾಜ್ಯದ ಅರ್ಹ ಜವಳಿ ಉದ್ಯಮಗಳಿಗೆ ತಲುಪಿಸಲು ವಿಶೇಷ ನೆರವು ಅಭಿಯಾನ ಆರಂಭಿಸಲಾಗುವುದು ಎಂದು ಸಕ್ಕರೆ ಮತ್ತು ಜವಳಿ ಸಚಿವ ರುದ್ರಪ್ಪ ಲಮಾಣಿ ತಿಳಿಸಿದ್ದಾರೆ.



ಜವಳಿ ಉದ್ಯಮಗಳಿಗೆ ಪಿಎಲ್‌ಐ ಯೋಜನೆಯ ಅರ್ಹತಾ ನಿಯಮಗಳನ್ನು ಸಡಿಲಗೊಳಿಸಿ, ಯೋಜನೆಯ ಅವಧಿಯನ್ನು ವಿಸ್ತರಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ ಸಚಿವರು, ಇದರಿಂದ ರಾಜ್ಯದ ಜವಳಿ ಮತ್ತು ಸಿದ್ಧ ಉಡುಪು ತಯಾರಿಕಾ ಕ್ಷೇತ್ರಕ್ಕೆ ಮತ್ತಷ್ಟು ಉತ್ತೇಜನ ದೊರೆಯಲಿದೆ ಎಂದರು. ಕೇಂದ್ರ ಜವಳಿ ಸಚಿವಾಲಯವು ಲೋಕಸಭೆಯಲ್ಲಿ ನೀಡಿರುವ ಮಾಹಿತಿಯ ಪ್ರಕಾರ, 2026ರ ಮಾರ್ಚ್ 31ರವರೆಗೆ ಪಿಎಲ್‌ಐ ಯೋಜನೆಯಡಿ ಕರ್ನಾಟಕದ ಆರು ಕಂಪನಿಗಳ ಮೂಲಕ 1,515.99 ಕೋಟಿ ಹೂಡಿಕೆಯಾಗಿದ್ದು, 5,611 ಉದ್ಯೋಗಗಳು ಸೃಷ್ಟಿಯಾಗಿವೆ. ಈ ಎರಡೂ ವಿಭಾಗಗಳಲ್ಲಿ ಕರ್ನಾಟಕ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

### ಹೂಡಿಕೆ, ಉದ್ಯೋಗ ಸೃಷ್ಟಿಗೆ ಒತ್ತು



**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಪ್ರಯೋಜನಗಳನ್ನು ಉದ್ಯಮಿಗಳಿಗೆ ತಲುಪಿಸುವ ಮೂಲಕ ಜವಳಿ ಕ್ಷೇತ್ರದ ಬೆಳವಣಿಗೆಗೆ ಆದ್ಯತೆ ನೀಡಲಾಗುವುದು. ಜವಳಿ ಪಿಎಲ್‌ಐ ಯೋಜನೆಯಡಿ ಕರ್ನಾಟಕ ಈಗಾಗಲೇ ಉತ್ತಮ ಸಾಧನೆ ಮಾಡಿದೆ. ಕೇಂದ್ರ ಸರ್ಕಾರದ ಪರಿಷ್ಕೃತ ಅರ್ಹತಾ ನಿಯಮಗಳಿಂದ ಹೆಚ್ಚಿನ ಉದ್ಯಮಗಳಿಗೆ ಯೋಜನೆಯ ಪ್ರಯೋಜನ ಪಡೆಯುವ ಅವಕಾಶ ದೊರೆಯಲಿದೆ. ಕೈಗಾರಿಕಾ ಸಂಘಟನೆಗಳು ಮತ್ತು ಉದ್ಯಮಿಗಳೊಂದಿಗೆ ಸಮನ್ವಯ ಸಾಧಿಸಿ, ಅರ್ಜಿ ಸಲ್ಲಿಕೆಗೆ ಮಾರ್ಗದರ್ಶನ ನೀಡುವುದು ಹಾಗೂ ಎದುರಾಗುವ ಪ್ರಕ್ರಿಯಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ನೆರವಾಗಲಾಗುವುದು. ಕೇಂದ್ರದ ಪ್ರೋತ್ಸಾಹಕ ಯೋಜನೆ ಮತ್ತು ರಾಜ್ಯದ ನೂತನ ಜವಳಿ ನೀತಿಯ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹೂಡಿಕೆ ಆಕರ್ಷಣೆ, ಉತ್ಪಾದನಾ ಸಾಮರ್ಥ್ಯ ವಿಸ್ತರಣೆ, ಉದ್ಯೋಗ ಸೃಷ್ಟಿಗೆ ಒತ್ತು ನೀಡಲಾಗುವುದು ಎಂದರು.**

## ಬೆಂಗಳೂರಿನ ಸಾಮರ್ಥ್ಯಕ್ಕೆ ತಕ್ಕಂತೆ ಭವಿಷ್ಯ ರೂಪಿಸುವುದು ಜವಾಬ್ದಾರಿ

**ಬೆಂಗಳೂರು, ಅ.29:** ಬೆಂಗಳೂರು ನಗರದ ಸಾಮರ್ಥ್ಯಕ್ಕೆ ತಕ್ಕಂತೆ ಭವಿಷ್ಯವನ್ನು ರೂಪಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

■ **ಸಮಗ್ರ ಮೂಲಸೌಕರ್ಯ ಅಭಿವೃದ್ಧಿಯೊಂದಿಗೆ ವಾಸಯೋಗ್ಯ ನಗರ ನಿರ್ಮಿಸುವುದೇ ಸರ್ಕಾರದ ಗುರಿ: ಸಿಎಂ ಡಿ.ಕೆ. ಶಿವಕುಮಾರ್**

ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ಸುಮಾರು ಒಂದು ಲಕ್ಷ ಕೋಟಿ ಹೂಡಿಕೆಯೊಂದಿಗೆ ಸಿದ್ಧ ಪಡಿಸಲಾದ ಬೆಂಗಳೂರು ಅಭಿವೃದ್ಧಿಯ ಹತ್ತು ವರ್ಷಗಳ ಮಾರ್ಗಸೂಚಿಯು 2037ರಲ್ಲಿ 500ನೇ ವಾರ್ಷಿಕೋತ್ಸವವನ್ನು ಆಚರಿಸಲಿರುವ ಬೆಂಗಳೂರಿಗಾಗಿ ಒಂದು ಮಹತ್ವಾಕಾಂಕ್ಷೆಯ ದೃಷ್ಟಿಕೋನವನ್ನು ಹೊಂದಿದೆ. ಉತ್ತಮ ರಸ್ತೆಗಳು, ವಿಸ್ತೃತ ಸಾರ್ವಜನಿಕ ಸಾರಿಗೆ ವ್ಯವಸ್ಥೆ, ನಿರಂತರ ನೀರು ಸರಬರಾಜು, ಸುಧಾರಿತ ನಾಗರಿಕ ಮೂಲಸೌಕರ್ಯಗಳು ಮತ್ತು ಸ್ವಚ್ಛವಾದ ಬಡಾವಣೆಗಳ ಮೂಲಕ ಹೆಚ್ಚು ಸುಲಭವಾಗಿ ಬದುಕು ಸಾಗಿಸಬಲ್ಲ, ಉತ್ತಮ ಸಂಪರ್ಕ ಹೊಂದಿರುವ ಹಾಗೂ ಭವಿಷ್ಯಕ್ಕೆ ಸಜ್ಜಾಗಿರುವ ಬೆಂಗಳೂರನ್ನು ನಿರ್ಮಿಸಲು ಶ್ರಮಿಸುತ್ತಿರುವುದಾಗಿ ತಿಳಿಸಿದ್ದಾರೆ.

ಬೆಂಗಳೂರಿನ ಬೆಳವಣಿಗೆ ಪ್ರತಿಯೊಬ್ಬ ನಾಗರಿಕನ ಜೀವನ ಮಟ್ಟವನ್ನು ಉತ್ತಮಗೊಳಿಸುವಂತಾಗಬೇಕು ಎಂಬುದೇ ನಮ್ಮ ಬದ್ಧತೆಯಾಗಿದೆ. ನಗರದ ಭವಿಷ್ಯದ ಅಗತ್ಯತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಸುರಂಗ ಮಾರ್ಗ, ಎಲಿವೇಟೆಡ್ ಕಾರಿಡಾರ್, ಮೆಟ್ರೋ ಹಾಗೂ ಉಪನಗರ ರೈಲು ಸೇರಿ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿ, ಒಳಚರಂಡಿ ಹಾಗೂ ವೈಜ್ಞಾನಿಕ ಕಸ ನಿರ್ವಹಣೆಯ ಮೂಲಕ ವಾಸಯೋಗ್ಯ ನಗರವನ್ನಾಗಿ ನಿರ್ಮಿಸುವುದೇ ಸರ್ಕಾರದ ಗುರಿಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ಪರಿಷತ್ ಚುನಾವಣೆಯಲ್ಲಿ ಸೋತಿರಬಹುದು, ಮುಂದಿನ ಚುನಾವಣೆಗಳಲ್ಲಿ ಗೆಲ್ಲುತ್ತೇವೆ

**ಬೆಂಗಳೂರು, ಅ.29:** ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿರಬಹುದು. ಆದರೆ, ಮುಂದೆ ನಡೆಯುವ ಚುನಾವಣೆಗಳಲ್ಲಿ ನಾವೇ ಗೆಲ್ಲುತ್ತೇವೆ ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.



■ **ಆರ್. ಅಶೋಕ್ ವಿರುದ್ಧ ಸಚಿವ ರಾಮಲಿಂಗಾರೆಡ್ಡಿ ವಾಗ್ದಾಳಿ**

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಪರಿಷತ್‌ನ ನಾಲ್ಕು ಸ್ಥಾನಗಳ ಪೈಕಿ ಮೂರರಲ್ಲಿ ಬಿಜೆಪಿ ಗೆದ್ದಿತ್ತು. ಈಗ ಒಂದು ಸ್ಥಾನ ಹೆಚ್ಚು ಗೆದ್ದಿದ್ದಾರೆ. ನಾವು ಪ್ರಯತ್ನ ಮಾಡಿದ್ದರೆ ಒಂದು ಸ್ಥಾನ ಗೆಲ್ಲಬಹುದಿತ್ತು. ಏನೇ ಇರಲಿ, ಈ ಚುನಾವಣೆಯಲ್ಲಿ ಸೋತಿದ್ದರೂ ಮುಂದೆ ನಾವು ಗೆಲ್ಲುತ್ತೇವೆ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಎಐಸಿಸಿ ಅಧ್ಯಕ್ಷ ಖರ್ಗೆ ಅವರ ಪಂಚೆ ವಿರುದ್ಧ ಮಾಡಿರುವ ಟೀಕೆಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ಖರ್ಗೆ ಅವರ ಪಂಚೆ ಬಗ್ಗೆ, ಅವರ ನಡಗೆ ಬಗ್ಗೆ ಅಶೋಕ್ ಟೀಕೆ ಮಾಡಿದ್ದಾರೆ. ಈ ರೀತಿಯ ಟೀಕೆ ಪ್ರತಿಪಕ್ಷ ನಾಯಕರಿಗೆ ಗೌರವ ತರಲ್ಲ. ಪಕ್ಷದ ವರಿಷ್ಠರನ್ನು ಮೆಚ್ಚಿಸಲು ಖರ್ಗೆ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ ಇದು ಸರಿಯಲ್ಲ ಎಂದರು. ಪ್ರಧಾನಿ ಮೋದಿ ಅವರು ದಿನಕ್ಕೆ ಮೂರು ಸೂಟು ಬದಲಿಸುತ್ತಾರೆ. ಅವರು ಕಟ್ಟುವ ವಾಚ್, ಬಳಕೆ ಮಾಡುವ ಪೆನ್ನ ಬೆಲೆ ಗೊತ್ತೆ. ಯಾರು ಮಾತನಾಡಲ್ಲ ಎಂದು ಹೇಳಿದರು.

ಭಾರತ–ಪಾಕಿಸ್ಥಾನ ಯುದ್ಧ ನಿಲ್ಲಿಸಿದ್ದು ನಾನೇ ಎಂದು ಟ್ರಂಪ್ ಹೇಳಿದ್ದಾರೆ. ಅದರ ಬಗ್ಗೆ ಮಾತನಾಡುವ ಧಮ್ಮು ಬಿಜೆಪಿ ನಾಯಕರಿಗೆ ಇಲ್ಲ ಎಂದು ವ್ಯಂಗ್ಯವಾಡಿದರು.

ಮಣಿಪುರದಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ. ಆ ಬಗ್ಗೆ ಬಾಯಿಬಿಡಲ್ಲ. ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸಿದ್ದಾರೆ. ಝುನ್‌ಜಿ ಪ್ರತಿಭಟನೆ ಯಾವ ಬಗ್ಗೆಯೂ ಬಿಜೆಪಿ ನಾಯಕರು ಮಾತನಾಡಲ್ಲ ಎಂದು ಹರಿಹಾಯ್ದರು.

ನಮ್ಮ ರಾಜ್ಯದ ನೆಲ–ಜಲ ವಿಚಾರದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿದೆ. ಈ ಬಗ್ಗೆಯೂ ಬಿಜೆಪಿಯವರು ಮಾತನಾಡಲ್ಲ ಎಂದು ವಾಗ್ದಾಳಿ ನಡೆಸಿದರು.

## ನವೆಂಬರ್ ಮೊದಲ ವಾರದಲ್ಲಿ ಸಾರಿಗೆ ಸಂಸ್ಥೆ ಬಸ್ ಪ್ರಯಾಣದರ ಏರಿಕೆ

**ಬೆಂಗಳೂರು, ಅ.29:** ನವೆಂಬರ್ ಮೊದಲ ವಾರದಲ್ಲಿ ಸರ್ಕಾರಿ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.



■ **ನ.3ರಂದು ಸಾರಿಗೆ ನಿಗಮಗಳೊಂದಿಗೆ ಸಭೆ: ಸಾರಿಗೆ ಸಚಿವ ಬೈರತಿ ಸುರೇಶ್**

ಗುರುವಾರ ಸಚಿವ ಸಂಪುಟ ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ಸಭೆಯಲ್ಲಿ ಬಸ್ ಪ್ರಯಾಣ ದರ ಏರಿಕೆ ವಿಚಾರದ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಕಳೆದ ಒಂದು ವರ್ಷದಲ್ಲಿ ಐದು ಬಾರಿ ಡೀಸೆಲ್ ಮತ್ತು ಇತರ ತೈಲೋತ್ಪನ್ನಗಳ ದರವನ್ನು ಹೆಚ್ಚಳ ಮಾಡಿದೆ. ಇದರಿಂದ ಸರ್ಕಾರದ ನಾಲ್ಕೂ ಸಾರಿಗೆ ನಿಗಮಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಆರ್ಥಿಕ ಹೊರೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿ ರಾಜ್ಯದ ಜನರಿಗೆ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವ ದೃಷ್ಟಿಯಿಂದ ಈಗಾಗಲೇ ನಾವು ಬಸ್ ಪ್ರಯಾಣದ ದರ ಹೆಚ್ಚಳ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರಂತೆ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಬಗ್ಗೆ ಎಲ್ಲಾ ಸಚಿವರ ಜೊತೆ ಚರ್ಚೆ ನಡೆಸಿದರು ಎಂದು ಸುರೇಶ್ ಹೇಳಿದರು.

ಎಲ್ಲಾ ಸಚಿವರ ಅಭಿಪ್ರಾಯ ಪಡೆದ ನಂತರ ಮುಖ್ಯಮಂತ್ರಿಗಳು ಪ್ರಯಾಣ ದರ ಏರಿಕೆ ಮಾಡುವ ನಿರ್ಧಾರವನ್ನು ನಮ್ಮ ಸಾರಿಗೆ ಇಲಾಖೆಗೇ ವಹಿಸಿದ್ದಾರೆ ಎಂದು ತಿಳಿಸಿದರು. ಮುಖ್ಯಮಂತ್ರಿಗಳು ನೀಡಿರುವ ಜವಾಬ್ದಾರಿ ಹಿನ್ನೆಲೆಯಲ್ಲಿ ನವೆಂಬರ್ 3 ರಂದು ಎಲ್ಲಾ ನಾಲ್ಕೂ ಸಾರಿಗೆ ನಿಗಮಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು. ನವೆಂಬರ್ 4 ರಂದು ಈ ಬಗ್ಗೆ ಅಂತಿಮ ನಿರ್ಧಾರವನ್ನು ಪ್ರಕಟಿಸ ಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

# ಕಾಂಗ್ರೆಸ್‌ನ ಅಧಿಕಾರ ಬಲಕ್ಕೆ ತಡೆಯೊಡ್ಡಿದ ಬಿಜೆಪಿಯ ಸಂಘಟನಾ ಶಕ್ತಿ : ಸಂಕನೂರ್‌ಗೆ ಹ್ಯಾಟ್ರಿಕ್ ಗೆಲುವು

ಹುಬ್ಬಳ್ಳಿ, ಅ.29: ಕರ್ನಾಟಕ ವಿಧಾನ ಪರಿಷತ್ತಿನ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣಾ ಫಲಿತಾಂಶ ಕೇವಲ ಒಂದು ಸ್ಥಾನದ ಗೆಲುವಲ್ಲ; ಅದು ಸಚಿವರ ಕಾರ್ಯನಿಷ್ಠೆ, ನಾಯಕರ ಶಿಸ್ತುಬದ್ಧ ಸಮನ್ವಯ ಮತ್ತು ನೆಲಮಟ್ಟದ ಕಾರ್ಯಕರ್ತರ ಒಗ್ಗಟ್ಟಿನ ವಿಜಯವಾಗಿದೆ. ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಈ ಪ್ರತಿಷ್ಠೆಯ ಕಣದಲ್ಲಿ ಬಿಜೆಪಿ–ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಪ್ರೊ. ಎಸ್.ವಿ. ಸಂಕನೂರ ಭರ್ಜರಿ ಜಯ ಸಾಧಿಸುವ ಮೂಲಕ ಸತತ ಮೂರನೇ ಬಾರಿಗೆ ಮೇಲ್ಮನೆ ಪ್ರವೇಶಿಸಿದ್ದಾರೆ.

### ಪಶ್ಚಿಮ ಪದವೀಧರ ಕ್ಷೇತ್ರ: ಕಾಂಗ್ರೆಸ್‌ನ ಪ್ರತಿಷ್ಠೆಗೆ ತಣ್ಣೀರೆರಚಿದ ಪ್ರಜ್ಞಾವಂತ ಮತದಾರ

ಪ್ರೊ. ಸಂಕನೂರ 33,711 ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಪಡೆದು, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಮೋಹನ ಲಿಂಬಿಕಾಯಿ (24,388 ಮತ) ಅವರನ್ನು 9,323 ಮತಗಳ ಭಾರಿ ಅಂತರದಿಂದ ಮಣಿಸಿದ್ದಾರೆ.

ಈ ಚುನಾವಣೆಯನ್ನು ಆಡಳಿತಾರೂಢ ಕಾಂಗ್ರೆಸ್ ಕೇವಲ ಸಾಮಾನ್ಯ ಪರಿಷತ್ ಕಣವಾಗಿ ನೋಡಿರಲಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಲೋಕಸಭಾ ಕ್ಷೇತ್ರದ ಹೃದಯಭಾಗದಲ್ಲೇ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ಜೋಶಿ ಅವರಿಗೆ ರಾಜಕೀಯವಾಗಿ ಹಿನ್ನಡೆ ಉಂಟುಮಾಡಬೇಕೆಂಬ ಹಠಕ್ಕೆ ಕಾಂಗ್ರೆಸ್ ಬಿದ್ದಿತ್ತು. ಇದಕ್ಕಾಗಿ ಚುನಾವಣೆಗೂ ಎಂಟು–ಹತ್ತು ತಿಂಗಳು ಮುಂಚಿತವಾಗಿಯೇ ಅಭ್ಯರ್ಥಿ ಘೋಷಿಸಿ, ಇಡೀ ಸರ್ಕಾರವನ್ನೇ ಕಣಕ್ಕಿಳಿಸಿತ್ತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಕೆಪಿಸಿಸಿ ನಾಯಕರು ಹಾಗೂ ನಾಲ್ಕೂ ಜಿಲ್ಲೆಗಳ ಉಸ್ತುವಾರಿ ಸಚಿವರು ಕ್ಷೇತ್ರದಲ್ಲೇ ಬೀಡುಬಿಟ್ಟು ಭರ್ಜರಿ ಪ್ರಚಾರ ನಡೆಸಿದ್ದರು. ಗ್ಯಾರಂಟಿ ಯೋಜನೆಗಳು ಹಾಗೂ ಯುವನಿಧಿಯ ಭರವಸೆಗಳನ್ನು ಮುಂದಿಟ್ಟುಕೊಂಡು ಪದವೀಧರರ ಮತ ಸೆಳೆಯಲು ಕಸರತ್ತು ನಡೆಸಲಾಗಿತ್ತು. ಆದರೆ, ಪ್ರಜ್ಞಾವಂತ ಪದವೀಧರರು ಸರ್ಕಾರದ ಆಡಳಿತ ಯಂತ್ರ ಹಾಗೂ ಆಮಿಷಗಳಿಗೆ ಮಣಿಯದೆ ಬಿಜೆಪಿಗೆ ಸ್ಪಷ್ಟ ತೀರ್ಪು ನೀಡಿದ್ದಾರೆ.

**ಗೆಲುವಿನ ಹಾದಿ ಸುಗಮಗೊಳಿಸಿದ ಸಮರ್ಥ ನಾಯಕರ ಟೀಮ್ ವರ್ಕ್:** ಜೋಶಿಯವರ ಮಾರ್ಗದರ್ಶನದಲ್ಲಿ ಬಿಜೆಪಿಯ ಹಿರಿಯ ನಾಯಕರ ದೊಡ್ಡ ತಂಡವೇ ಮೈದಾನದಲ್ಲಿ ಕೆಲಸ ಮಾಡಿತು. ಚುನಾವಣಾ ಉಸ್ತುವಾರಿ ಹೊತ್ತಿದ್ದ ಶಾಸಕ ಮಹೇಶ ಟೆಂಗಿನಕಾಯಿ ನಾಲ್ಕೂ ಜಿಲ್ಲೆಗಳಲ್ಲಿ ಶಿಸ್ತುಬದ್ಧ ಪ್ರಚಾರದ ರೂಪರೇಷೆ ಸಿದ್ಧಪಡಿಸಿದ್ದರು. ಸಂಸದ ಬಸವರಾಜ ಬೊಮ್ಮಾಯಿ ಮಾರ್ಗದರ್ಶನ ಹಾವೇರಿ–ಗದಗ ಭಾಗದಲ್ಲಿ ಬಲ ತುಂಬಿದರೆ, ಹಿರಿಯ ನಾಯಕ ಬಸವರಾಜ ಹೊರಟ್ಟಿ ತಮ್ಮ ಇಡೀ ಶಿಕ್ಷಕರ ತಂಡದೊಂದಿಗೆ ಶ್ರಮಿಸಿ ಮತದಾರರ ವಿಶ್ವಾಸ ಗಳಿಸಿದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಾರದ ಸಾರಥ್ಯ ವಹಿಸಿದ್ದರು. ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ನಿಂಗಪ್ಪ ಸುವರ್ಣಗಟ್ಟಿ, ರಾಜು ಕುಡಗಿ, ವಿರೂಪಾಕ್ಷಪ್ಪ ಬಳ್ಳಾರಿ ಹಾಗೂ ಎನ್.ಎಸ್. ಹೆಗಡೆ ಮತಗಟ್ಟೆ ಮಟ್ಟದವರೆಗೆ ಪ್ರತಿ ಪದವೀಧರ ಮತದಾರನನ್ನು ತಲುಪುವಲ್ಲಿ ಯಶಸ್ವಿಯಾದರು. ಇದರೊಂದಿಗೆ ಮಿತ್ರಪಕ್ಷ ಜೆಡಿಎಸ್ ನಾಯಕರು ಹೆಗಲಿಗೆ ಹೆಗಲು ಕೊಟ್ಟು ದುಡಿದರು.



**ಅಂಕಿ– ಅಂಶಗಳಲ್ಲಿ ಬಿಜೆಪಿಯ ಜನಪ್ರಿಯತೆ ಹೆಚ್ಚಳ:** ಕಳೆದ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿ ಪ್ರೊ. ಎಸ್.ವಿ. ಸಂಕನೂರ ಮತಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಕಳೆದ ಬಾರಿಗಿಂತ 10 ಸಾವಿರಕ್ಕೂ ಅಧಿಕ ಮತಗಳ ಜಿಗಿತ ಕಂಡುಬಂದಿದ್ದು, ಇದು ಬಿಜೆಪಿಯ ಬೆಂಬಲ ವಿಸ್ತರಣೆಯಾಗಿರುವುದಕ್ಕೆ ಸ್ಪಷ್ಟ ಸಾಕ್ಷಿ. ಒಟ್ಟು ಚಲಾವಣೆಯಾದ 73,692 (ಶೇ. 75.66) ಮತಗಳಲ್ಲಿ ಬಿಜೆಪಿ ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡಿದ್ದರಿಂದ ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆಯ ಅಗತ್ಯವೇ ಬರಲಿಲ್ಲ.

2028ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ: ಪಶ್ಚಿಮ ಪದವೀಧರ ಕ್ಷೇತ್ರದ ಈ ಗೆಲುವು ಕೇವಲ ಒಂದು ಸ್ಥಾನಕ್ಕೆ ಸೀಮಿತವಾಗಿಲ್ಲ. ಇತ್ತೀಚೆಗೆ ನಡೆದ ನಾಲ್ಕೂ ಪರಿಷತ್ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟ ಜಯಭೇರಿ ಬಾರಿಸಿದ್ದು, ಕಾಂಗ್ರೆಸ್ ಶೂನ್ಯಕ್ಕೆ ಸೃತ್ತಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿಪರ ಆಡಳಿತಕ್ಕೆ ಸಿಕ್ಕ ಜಯವಾಗಿದ್ದು, ರಾಜ್ಯದ ಕಾಂಗ್ರೆಸ್ ಸರ್ಕಾರದ ಮೇಲಿರುವ ಸಾರ್ವಜನಿಕ ಅಸಮಾಧಾನದ ಮುನ್ಸೂಚನೆಯಾಗಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನುಡಿದಂತೆ , ಈ ಫಲಿತಾಂಶ ಮುಂದಿನ 2028ರ ವಿಧಾನಸಭಾ ಚುನಾವಣೆಯ ದಿಕ್ಸೂಚಿಯಾಗಿದ್ದು, ಬಿಜೆಪಿಯ ದಿಗ್ವಿಜಯಕ್ಕೆ ನಾಂದಿ ಹಾಡಿದೆ.

### ಜೋಶಿ ಚಾಣಾಕ್ಷ ಕಾರ್ಯತಂತ್ರ

ಕೇಂದ್ರದಲ್ಲಿ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ನವೀಕರಿಸಬಹುದಾದ ಇಂಧನ ಖಾತೆಗಳ ಜೊತೆಗೆ, ಇತ್ತೀಚೆಗೆ ಶಿಕ್ಷಣ ಖಾತೆಯ ಬೃಹತ್ ಜವಾಬ್ದಾರಿಯನ್ನೂ ಹೆಗಲಿಗೇರಿಸಿಕೊಂಡಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಈ ಚುನಾವಣೆಯ ಯಶಸ್ಸಿನ ಮುಖ್ಯ ರೂವಾರಿಯಾಗಿದ್ದಾರೆ. ದೇಶದ ಶಿಕ್ಷಣ ವ್ಯವಸ್ಥೆಯ ದಿನನಿತ್ಯದ ಸಚಿವಾಲಯದ ಕೆಲಸಗಳನ್ನು ದೆಹಲಿಯಿಂದಲೇ ನಿಭಾಯಿಸುತ್ತಾ, ಕ್ಷೇತ್ರದ ಚುನಾವಣೆಗೂ ದಣಿವರಿಯದೆ ಸಮಯ ಮೀಸಲಿಟ್ಟರು. ದೆಹಲಿ ಮತ್ತು ಕ್ಷೇತ್ರದ ನಡುವೆ ಸತತವಾಗಿ ಓಡಾಡಿದ ಅವರು, ಸಚಿವಾಲಯದ ಕೆಲಸ ಮತ್ತು ಪಕ್ಷದ ಜವಾಬ್ದಾರಿ ಎರಡಕ್ಕೂ ಸಮಾನ ನ್ಯಾಯ ಒದಗಿಸಿದರು

ಕಾಂಗ್ರೆಸ್ ಪಕ್ಷವು ಕೇವಲ ಮೇಲ್ಮಟ್ಟದ ಪ್ರಚಾರಕ್ಕೆ ಸೀಮಿತವಾಗಿದ್ದರೆ, ಪ್ರಲ್ಹಾದ ಜೋಶಿಯವರು ಅತ್ಯಂತ ಸೂಕ್ಷ್ಮ ಹಾಗೂ ನೆಲಮಟ್ಟದ ತಂತ್ರಗಾರಿಕೆಯನ್ನು ಹೆಣೆದಿದ್ದರು. ಚುನಾವಣೆಯ ಪ್ರತಿ ಹಂತದಲ್ಲೂ ನಾಯಕರ ನಡುವೆ ಸಮನ್ವಯ ಸಾಧಿಸುವುದು, ಹೊಸ ಮತದಾರರ ನೋಂದಣಿಯಿಂದ ಹಿಡಿದು ಮತಗಟ್ಟೆ ಮಟ್ಟದ ಸಿದ್ಧತೆಗಳವರೆಗೆ ಖುದ್ದಾಗಿ ನಿಗಾ ವಹಿಸಿದರು. ನಾಲ್ಕೂ ಜಿಲ್ಲೆಗಳ ಪ್ರಮುಖ ಕೇಂದ್ರಗಳಾದ ಹುಬ್ಬಳ್ಳಿ, ಧಾರವಾಡ, ಗದಗ, ಶಿಗ್ಗಾವಿ, ಹಾನಗಲ್, ಬ್ಯಾಡಗಿ, ಹಿರೇಕೆರೂರು, ಕುಮಟಾ, ಕಾರವಾರ ಮತ್ತು ಯಲ್ಲಾಪುರದಲ್ಲಿ ಸ್ವತಃ ಸಂಚರಿಸಿ ಕೇವಲ ಸಾರ್ವಜನಿಕ ಸಭೆಗಳನ್ನಷ್ಟೇ ಮಾಡದೇ, ಬೂತ್ ಮಟ್ಟದ ಕಾರ್ಯಕರ್ತರನ್ನು ಖುದ್ದಾಗಿ ಭೇಟಿಯಾಗಿ ಅವರ ಮನೋಬಲ ಹೆಚ್ಚಿಸುವ ಕೆಲಸವನ್ನು ನಿರಂತರವಾಗಿ ಮಾಡಿದರು.

ರಾಜ್ಯ ಸರ್ಕಾರದ ವಿದ್ಯುತ್ ಕಡಿತ, ಬರ ಪರಿಹಾರದ ವೈಫಲ್ಯ, ಹಾಗೂ ದಿನಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ಪ್ರಮುಖ ಅಸ್ತ್ರವಾಗಿಸಿಕೊಂಡು ಆಡಳಿತ ವಿರೋಧಿ ಅಲೆಯನ್ನು ಮತಗಳನ್ನಾಗಿ ಪರಿವರ್ತಿಸುವಲ್ಲಿ ಜೋಶಿ ತಂತ್ರಗಾರಿಕೆ ಯಶಸ್ವಿಯಾಯಿತು. ಕೊಟ್ಟ ಗುರಿಯನ್ನು ಮುಟ್ಟುವವರೆಗೆ ವಿರಮಿಸದ ಜೋಶಿಯವರ ಈ ಟಾಸ್ಕ್ ಮಾಸ್ಟರ್ ಕಾರ್ಯಶೈಲಿಯೇ ಕಾಂಗ್ರೆಸ್‌ನ ಸಂಘಟಿತ ಆಕ್ರಮಣಕ್ಕೆ ಭದ್ರ ಕೋಟೆಯಾಯಿತು.

# ನ.4ಕ್ಕೆ ಇನ್ಸಾಫ್ ರ‍್ಯಾಲಿ: ರಾಹುಲ್ ಗಾಂಧಿ ಭಾಗಿ

**ಸಂಗ್ರೂರ್, ಅ. 29:** ಪಂಜಾಬ್‌ನ ಹಕ್ಕುಗಳು, ನ್ಯಾಯ ಮತ್ತು ಭವಿಷ್ಯದ ಕುರಿತು ಧ್ವನಿ ಎತ್ತುವ ಉದ್ದೇಶದಿಂದ ನವೆಂಬರ್ 4ರಂದು ಸಂಗ್ರೂರ್‌ನಲ್ಲಿ ಇನ್ಸಾಫ್ ರ‍್ಯಾಲಿ ಆಯೋಜಿಸಲಾಗಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದು, ಪಂಜಾಬದದನ ವಿವಿಧ ಭಾಗಗಳಿಂದ ಒಂದು ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ಪರ್ಗತ್ ಸಿಂಗ್ ತಿಳಿಸಿದ್ದಾರೆ.




ಚಂಡೀಗಢದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ನಾಲ್ಕೂವರೆ ವರ್ಷಗಳಿಂದ ರೈತರು, ಯುವಜನರು ಹಾಗೂ ಸಾಮಾನ್ಯ ನಾಗರಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರ ಮೌನ ವಹಿಸಿದೆ ಎಂದು ಆರೋಪಿಸಿದ ಅವರು, ಕಾನೂನು ಸುವ್ಯವಸ್ಥೆ, ಮಾದಕವಸ್ತು ಹಾವಳಿ, ನಿರುದ್ಯೋಗ, ಭತ್ತ ಖರೀದಿ, ಧಾರ್ಮಿಕ ಗ್ರಂಥಗಳ ಅವಮಾನ ಪ್ರಕರಣಗಳು ಹಾಗೂ ಪಂಜಾಬ್‌ನ ಹಕ್ಕುಗಳ ವಿಚಾರಗಳನ್ನು ಕಾಂಗ್ರೆಸ್ ಪ್ರಬಲವಾಗಿ ಪ್ರಸ್ತಾಪಿಸಲಿದೆ. ಪಂಜಾಬ್‌ನಲ್ಲಿ ಪರಿಸ್ಥಿತಿ ಆತಂಕಕಾರಿಯಾಗುತ್ತಿದೆ. ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ. ಜನರ ಅಹವಾಲುಗಳಿಗೆ ಸ್ಪಂದಿಸುವ ಬದಲು ಆಡಳಿತ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸ ಕುಸಿಯುವಂತೆ ಮಾಡುತ್ತಿದೆ ಎಂದು ಆರೋಪಿಸಿದರು.

ಆಮ್ ಆದ್ಮಿ ಪಕ್ಷದ ಸರ್ಕಾರ ಪಂಜಾಬನ್ನು ಪೊಲೀಸ್ ರಾಜ್ಯವನ್ನಾಗಿ ಪರಿವರ್ತಿಸುತ್ತಿದೆ ಎಂದು ವಿಧಾನಸಭೆಯಲ್ಲೇ ಎಚ್ಚರಿಕೆ ನೀಡಲಾಗಿತ್ತು. ಪೊಲೀಸ್ ಇಲಾಖೆ ಮತ್ತು ನಾಗರಿಕ ಆಡಳಿತದ ಮನೋಬಲ ಕುಸಿದಿದ್ದು, ಪೊಲೀಸರ ಮೇಲಿನ ಜನರ ವಿಶ್ವಾಸವೂ ದುರ್ಬಲವಾಗುತ್ತಿದೆ. ರಾಷ್ಟ್ರಮಟ್ಟದಲ್ಲಿ ಬಿಜೆಪಿ ಪ್ರಜಾಪ್ರಭುತ್ವ ಸಂಸ್ಥೆಗಳ ಸಹಜ ಕಾರ್ಯ ನಿರ್ವಹಣೆಯನ್ನು ದುರ್ಬಲಗೊಳಿಸಿದೆ. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷವೂ ಇದೇ ರೀತಿಯ ನಡೆ ಅನುಸರಿಸುತ್ತಿದೆ ಎಂದು ಟೀಕಿಸಿದರು.

ಪಂಜಾಬ್‌ನ ರೈತರು ತಮ್ಮ ಭತ್ತದ ಬೆಳೆಯನ್ನು ಮಾರಾಟ ಮಾಡಲು ಸಂಕಷ್ಟ ಎದುರಿಸುತ್ತಿದ್ದಾರೆ. ಆದರೆ ಸರ್ಕಾರ ಇದಕ್ಕೆ ಸ್ಪಷ್ಟ ಪರಿಹಾರ ನೀಡಿಲ್ಲ. ಇತರ ರಾಜ್ಯಗಳಲ್ಲಿ ಉತ್ತಮ ಬೆಲೆಯ ಕುರಿತು ಚರ್ಚೆಯಾಗುತ್ತಿರುವಾಗ ಪಂಜಾಬ್‌ನ ರೈತರಿಗೆ ನ್ಯಾಯಯುತ ಬೆಲೆ ಮತ್ತು ಸಕಾಲಿಕ ಖರೀದಿಯ ಭರವಸೆ ಏಕೆ ನೀಡುತ್ತಿಲ್ಲ ಎಂದು ಪ್ರಶ್ನಿಸಿದರು. ರೈತರಿಗೆ ಕೇವಲ ಭರವಸೆಗಳು ಸಾಲದು. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸುಗಮ ಖರೀದಿ ವ್ಯವಸ್ಥೆ ಮತ್ತು ಅವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು. ಸರ್ಕಾರದ ಮೌನ ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸುತ್ತಿದೆ ಎಂದು ಅವರು ಹೇಳಿದರು.

ಪಂಜಾಬ್‌ನ ಜನರು ಧಾರ್ಮಿಕ ಗ್ರಂಥಗಳ ಅವಮಾನ ಪ್ರಕರಣಗಳಲ್ಲಿ ನ್ಯಾಯ ದೊರೆಯಲಿದೆ ಎಂದು ನಿರೀಕ್ಷಿಸಿದ್ದರು. ಆದರೆ ಪ್ರಕರಣಗಳನ್ನು ರಾಜ್ಯದ ಹೊರಗೆ ವರ್ಗಾಯಿಸಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದರು.

ಅಣೆಕಟ್ಟು ಸುರಕ್ಷತಾ ಕಾಯ್ದೆಯ ಸೆಕ್ಷನ್ 79(1) ಮತ್ತು ರಾಜಸ್ಥಾನಕ್ಕೆ ನೀರು ಪೂರೈಕೆ ಮಾಡುವ ವಿಚಾರದಲ್ಲಿ ಪಂಜಾಬ್‌ನ ಹಿತಾಸಕ್ತಿಗಳ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು. ನದಿ ನೀರಿನ ವಿವಾದಗಳಿಗೆ ಸಂಬಂಧಿಸಿದಂತೆ 78, 79 ಮತ್ತು 80ನೇ ವಿಧಿಗಳ ಅಡಿಯಲ್ಲಿ ಕಾನೂನು ಪ್ರಕ್ರಿಯೆಗಳು ನಡೆಯುತ್ತಿವೆ. ಹೀಗಾಗಿ ರಾಜ್ಯದ ನೀರಿನ ಸಂಪನ್ಮೂಲ ಮತ್ತು ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಗಂಭೀರವಾಗಿ ತನ್ನ ವಾದ ಮಂಡಿಸಬೇಕು ಎಂದು ಆಗ್ರಹಿಸಿದರು.

ಪರ್ಮಿಂದರ್ ಸಿಂಗ್ ಝೋಟಾ ಮತ್ತು ಗುಲ್ಜಾರ್ ಸಿಂಗ್ ಪ್ರಕರಣಗಳನ್ನು ಉಲ್ಲೇಖಿಸಿದ ಪರ್ಗಟ್ ಸಿಂಗ್, ಇತ್ತೀಚಿನ ಘಟನೆಗಳಲ್ಲಿನ ಪೊಲೀಸ್ ತನಿಖೆ ಹಾಗೂ ನಿರ್ಧಾರಗಳ ಕುರಿತು ಉದ್ಭವಿಸಿರುವ ಪ್ರಶ್ನೆಗಳಿಗೆ ಪಾರದರ್ಶಕವಾಗಿ ಉತ್ತರಿಸಬೇಕು. ಸಿಧು ಮೂಸೆವಾಲಾ ಹತ್ಯೆ ಪ್ರಕರಣದ ತನಿಖೆಗೆ ವರ್ಷಗಳೇ ಬೇಕಾಯಿತು. ಅಂತಹ ಸಂದರ್ಭದಲ್ಲಿ ಮತ್ತೊಂದು ಘಟನೆಯಲ್ಲಿ ಕೇವಲ ಎರಡು ಗಂಟೆಗಳಲ್ಲಿ ಹತ್ಯೆಯ ತೀರ್ಮಾನಕ್ಕೆ ಬಂದಿರುವುದರ ಆಧಾರವೇನು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಪ್ರತಿಯೊಂದು ಪ್ರಕರಣದಲ್ಲೂ ನಿಷ್ಪಕ್ಷಪಾತ ತನಿಖೆ ನಡೆಯಬೇಕು. ದೃಢವಾದ ಸಾಕ್ಷ್ಯಗಳ ಆಧಾರದಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು.

ಪೊಲೀಸರು ಜನರಲ್ಲಿ ವಿಶ್ವಾಸ ಮೂಡಿಸಬೇಕೇ ಹೊರತು ಅನುಮಾನ ಹೆಚ್ಚಿಸಬಾರದು ಎಂದು ಒತ್ತಾಯಿಸಿದರು.

ಮಾದರಿ ನೀತಿ ಸಂಹಿತೆ ಶೀಘ್ರದಲ್ಲೇ ಜಾರಿಗೆ ಬರುವ ಸಾಧ್ಯತೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನೀತಿ ಸಂಹಿತೆ ಜಾರಿಗೊಳಿಸುವುದರಿಂದ ಮಾತ್ರ ಆಡಳಿತ ವ್ಯವಸ್ಥೆಯ ಸಮಸ್ಯೆಗಳು ಬಗೆಹರಿಯುವುದಿಲ್ಲ. ಪೊಲೀಸ್ ಮತ್ತು ಆಡಳಿತ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಮರುಸ್ಥಾಪಿಸುವುದು, ಹೊಣೆಗಾರಿಕೆಯನ್ನು ನಿಗದಿಪಡಿಸುವುದು ಹಾಗೂ ನಿಯಮಾನುಸಾರ ಆಡಳಿತ ನಡೆಯುವಂತೆ ಮಾಡುವುದು ಮುಖ್ಯವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪಂಜಾಬ್‌ನಲ್ಲಿ ಪ್ರತಿಯೊಂದು ಕಾರ್ಯವೂ ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳಲಾಗು ವುದು. ಯಾರಿಗೂ ಮನಬಂದಂತೆ ವರ್ತಿಸಲು ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಪಂಜಾಬ್‌ನ ಜನರು ಒಗ್ಗೂಡಿ ರಾಜ್ಯದ ಹಿತ ಕಾಪಾಡಲು ಮುಂದಾಗಬೇಕು. ನ.4ರಂದು ಸಂಗ್ರೂರ್‌ನಲ್ಲಿ ನಡೆಯಲಿರುವ ಇನ್ಸಾಫ್ ರ‍್ಯಾಲಿ ಕೇವಲ ರಾಜಕೀಯ ಕಾರ್ಯಕ್ರಮವಲ್ಲ, ಅದು ಪಂಜಾಬ್‌ನ ಹಕ್ಕುಗಳು, ರೈತರ ಸಂಕಷ್ಟ, ಯುವಜನರ ಭವಿಷ್ಯ ಮತ್ತು ನ್ಯಾಯಕ್ಕಾಗಿ ಜನರು ಎತ್ತುವ ಧ್ವನಿಯಾಗಲಿದೆ ಎಂದು ಅವರು ಹೇಳಿದರು.




ಫಿಲಿಪ್ಪೀನ್ಸ್‌ನ ಸೆಬುವಿನಲ್ಲಿ ನಡೆದ 13ನೇ ಏಷ್ಯನ್ ಸಚಿವರ ಸಭೆಯನ್ನು ಉದ್ದೇಶಿಸಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಮಾತನಾಡಿದರು. ಸಾಮೂಹಿಕ ಭದ್ರತೆ ಮತ್ತು ಜಂಟಿ ಕಾರ್ಯಾಚರಣಾ ಸಾಮರ್ಥ್ಯಗಳನ್ನು ಬಲಪಡಿಸಲು, ಯುದ್ಧದ ಮೂಲಕ ಸಾಬೀತಾದ ಭಯೋತ್ಪಾದನಾ ನಿಗ್ರಹ ಪರಿಣತಿಯನ್ನು ಪಾಲುದಾರ ರಾಷ್ಟ್ರಗಳೊಂದಿಗೆ ಹಂಚಿಕೊಳ್ಳಲು ಭಾರತ ಸಿದ್ಧವಾಗಿದೆ ಎಂದು ತಿಳಿಸಿದರು.

# ಪಿಜಿಸಿಇಟಿ ಎರಡನೇ ಸುತ್ತಿನ ಕೌನ್ಸೆಲಿಂಗ್‌ಗೆ ಸುಪ್ರೀಂ ಕೋರ್ಟ್ ಅನುಮತಿ

**ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ನಿರೀಕ್ಷೆಯಲ್ಲಿದ್ದ ಸಾವಿರಾರು ವಿದ್ಯಾರ್ಥಿಗಳು ನಿರಾಳ**



**ನವದೆಹಲಿ, ಅ.29:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2026ನೇ ಸಾಲಿನ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ (ಪಿಜಿಸಿಇಟಿ) ಮೂಲಕ ನಡೆಯುವ ಪ್ರವೇಶ ಪ್ರಕ್ರಿಯೆಯ ಎರಡನೇ ಸುತ್ತಿನ ಕೌನ್ಸೆಲಿಂಗ್ ನಡೆಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರನ್ನೊಳಗೊಂಡ ನ್ಯಾಯಪೀಠ ಈ ಆದೇಶ ನೀಡಿದೆ. ಈ ಮೂಲಕ ಕರ್ನಾಟಕದಲ್ಲಿ ಎಂಬಿಎ, ಎಂಸಿಎ, ಎಂ.ಇ. ಮತ್ತು ಎಂ.ಟೆಕ್ ಸೇರಿದಂತೆ ವಿವಿಧ ಸ್ನಾತಕೋತ್ತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಗಾಗಿ ಕಾಯುತ್ತಿದ್ದ ಸಾವಿರಾರು ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ ದೊರೆತಂತಾಗಿದೆ.

ಈ ಹಿಂದೆ ಪ್ರವೇಶ ವೇಳಾಪಟ್ಟಿಗೆ ಸಂಬಂಧಿಸಿದ ನ್ಯಾಯಾಲಯದ ನಿರ್ದೇಶನಗಳಿಂದಾಗಿ ಪಿಜಿಸಿಇಟಿ ಪ್ರವೇಶ ಪ್ರಕ್ರಿಯೆ ಮುಂದುವರಿಸುವ ಕುರಿತು ಅನಿಶ್ಚಿತತೆ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಕೆಇಎ ಎರಡನೇ ಸುತ್ತಿನ ಕೌನ್ಸೆಲಿಂಗ್ ನಡೆಸಲು ಅನುಮತಿ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಕೆಇಎ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹಾಗೂ ವಕೀಲ ಸುಭಾಷ್ ಚಂದ್ರ ಸಾಗರ್ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು.

ಮೊದಲ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಯಾವುದೇ ಸೀಟು ಪಡೆಯಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಅವಕಾಶ ದೊರೆಯಲಿದೆ. ಅಲ್ಲದೆ, ತಮ್ಮ ಅರ್ಹತೆ ಮತ್ತು ಆಯ್ಕೆಗಳ ಆಧಾರದ ಮೇಲೆ ಈಗಾಗಲೇ ಹಂಚಿಕೆಯಾದ ಸೀಟುಗಳನ್ನು ಉತ್ತಮಗೊಳಿಸಿ ಕೊಳ್ಳಲು ಬಯಸುವ ಅಭ್ಯರ್ಥಿಗಳಿಗೂ ಈ ಪ್ರಕ್ರಿಯೆ ಅನುಕೂಲವಾಗಲಿದೆ. ರಾಜ್ಯದ ವಿವಿಧ ಸ್ನಾತಕೋತ್ತರ ವೃತ್ತಿಪರ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳ ಸಮರ್ಪಕ ಬಳಕೆಗೆ ಸಹ ಇದು ನೆರವಾಗಲಿದೆ.

ಎರಡನೇ ಸುತ್ತಿನ ಕೌನ್ಸೆಲಿಂಗ್‌ಗೆ ಸಂಬಂಧಿಸಿದ ವಿವರವಾದ ವೇಳಾಪಟ್ಟಿ ಹಾಗೂ ಅಭ್ಯರ್ಥಿಗಳು ಪಾಲಿಸಬೇಕಾದ ಮುಂದಿನ ಸೂಚನೆಗಳನ್ನು ಕೆಇಎ ತನ್ನ ಅಧಿಕೃತ ಜಾಲತಾಣದ ಮೂಲಕ ಪ್ರಕಟಿಸುವ ನಿರೀಕ್ಷೆಯಿದೆ.

# ಹೂಡಿಕೆ ನಿಧಿಗಳ ನೈಜ ಮಾಲೀಕರ ಮಾಹಿತಿ ಬಹಿರಂಗಪಡಿಸುವಂತೆ ಕೋರಿ ಮಹುವಾ ಮೊಯಿತ್ರಾ ಸಲ್ಲಿಸಿದ್ದ ಅರ್ಜಿ ವಿಲೇವಾರಿ

**ನವದೆಹಲಿ, ಅ.29:** ಪರ್ಯಾಯ ಹೂಡಿಕೆ ನಿಧಿಗಳು (ಎಐಎಫ್), ವಿದೇಶಿ ಪೋರ್ಟ್‌ಫೋಲಿಯೊ ಹೂಡಿಕೆದಾರರು (ಎಫ್‌ಪಿಐ) ಹಾಗೂ ಅವುಗಳ ಮಧ್ಯವರ್ತಿಗಳ ನೈಜ ಲಾಭದಾಯಕ ಮಾಲೀಕರ ವಿವರ ಮತ್ತು ಹೂಡಿಕೆ ಪೋರ್ಟ್ ಫೋಲಿಯೊ ಮಾಹಿತಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸು ವಂತೆ ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿಗೆ (ಸೆಬಿ) ನಿರ್ದೇಶನ ನೀಡಬೇಕೆಂದು ಕೋರಿ ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಲೇವಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಆರ್. ಮಹಾದೇವನ್ ಮತ್ತು ಡಿ.ಕೆ.ಉಪಾಧ್ಯಾಯ ಅವರನ್ನೊಳಗೊಂಡ ಪೀಠವು, ಇಂತಹ ಮಾಹಿತಿಯನ್ನು ಸಾರ್ವಜನಿಕ ವಾಗಿ ಬಹಿರಂಗಪಡಿಸಲು ಈಗಾಗಲೇ ಜಾರಿಯಲ್ಲಿರುವ ಕಾನೂನು ಅಥವಾ ನಿಯಂತ್ರಣ ವ್ಯವಸ್ಥೆ ಇರಬೇಕು ಎಂದು ಹೇಳಿದೆ. ಅಸ್ತಿತ್ವದಲ್ಲಿರುವ ಕಾನೂನಿನ ಆಧಾರವಿಲ್ಲದೆ ಹೊಸ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವಂತೆ ನ್ಯಾಯಾಲಯವು ಸೆಬಿಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

ವಿಚಾರಣೆ ಆರಂಭದಲ್ಲಿ ನ್ಯಾಯಪೀಠವು ಮಹುವಾ ಮೊಯಿತ್ರಾ ಅರ್ಜಿ ಸಲ್ಲಿಸಿರುವುದರ ಉದ್ದೇಶದ ಬಗ್ಗೆ ಪ್ರಶ್ನಿಸಿತು. ಈ ವಿಷಯವನ್ನು



ಸಂಸತ್ತಿನಲ್ಲಿ ಪ್ರಸ್ತಾಪಿಸಿ ಚರ್ಚೆಗೆ ಒತ್ತಾಯಿಸಬಹುದಿತ್ತು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಈಗಾಗಲೇ ಜಾರಿಯಲ್ಲಿರುವ ಕಾನೂನು ಅಥವಾ ನಿಯಂತ್ರಣ ವ್ಯವಸ್ಥೆಯ ಅನುಷ್ಠಾನದಲ್ಲಿ ಲೋಪವಾಗಿದ್ದರೆ, ಅದರ ಪಾಲನೆಗೆ ನಿರ್ದೇಶನ ನೀಡಬಹುದು. ಆದರೆ, ಹೊಸ ವ್ಯವಸ್ಥೆಯನ್ನು ರೂಪಿಸುವಂತೆ ಆದೇಶಿಸಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿತು. ಬಳಿಕ ಅರ್ಜಿಯನ್ನು ವಿಲೇವಾರಿ ಮಾಡಿತು.

ಎಐಎಫ್‌ಗಳು ಮತ್ತು ಎಫ್ಪಿಐಗಳ ಮೂಲಕ ಷೇರುಪೇಟೆಯಲ್ಲಿ ಹೂಡಿಕೆ ಮಾಡುವವರ ನೈಜ ಗುರುತು ಹಾಗೂ ಹೂಡಿಕೆಗಳ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕೆಂದು ಮಹುವಾ ಮೊಯಿತ್ರಾ ಮನವಿ ಮಾಡಿದ್ದರು.

ಈ ನಿಧಿಗಳ ಹಿಂದೆ ನಿಜವಾಗಿ ಯಾರು ಹೂಡಿಕೆ ಮಾಡಿದ್ದಾರೆ, ಹೂಡಿಕೆಯ ಮೇಲಿನ ನಿಯಂತ್ರಣ ಯಾರ ಕೈಯಲ್ಲಿದೆ ಮತ್ತು ಯಾವ ಕಂಪನಿಗಳಲ್ಲಿ ಹಣ ಹೂಡಿಕೆ ಮಾಡಲಾಗಿದೆ ಎಂಬ ಮಾಹಿತಿ ಬಹಿರಂಗವಾಗುವುದರಿಂದ ಸಾಮಾನ್ಯ ಹೂಡಿಕೆದಾರರ ಹಿತಾಸಕ್ತಿ ಕಾಪಾಡಲು ನೆರವಾಗುತ್ತದೆ ಎಂಬುದು ಅರ್ಜಿಯ ಪ್ರಮುಖ ಉದ್ದೇಶವಾಗಿತ್ತು.

ಮೊಯಿತ್ರಾ ಪರ ವಕೀಲ ಪ್ರಶಾಂತ್ ಭೂಷಣ್ ಅವರು, ಹಣಕಾಸು ಮಾರುಕಟ್ಟೆಯಲ್ಲಿ ಪಾರದರ್ಶಕತೆ ಹೆಚ್ಚಿಸಲು ನೈಜ ಮಾಲೀಕರ ವಿವರಗಳನ್ನು ಸಾರ್ವಜನಿಕ ವಾಗಿ ಬಹಿರಂಗಪಡಿಸುವ ಅಗತ್ಯವನ್ನು ನ್ಯಾಯಾಲಯದ ಮುಂದೆ ಪ್ರತಿಪಾದಿಸಿದ್ದರು. ಆದರೆ, ಅಂತಹ ಬಹಿರಂಗಪಡಿಸುವಿಕೆಗೆ ಕಡ್ಡಾಯ ಗೊಳಿಸುವ ಅಸ್ತಿತ್ವದಲ್ಲಿರುವ ಕಾನೂನು ವ್ಯವಸ್ಥೆ ಇಲ್ಲದಿರುವುದರಿಂದ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

# ಡಿಜಿಟಲ್ ಅರೆಸ್ಟ್: ಬ್ಯಾಂಕುಗಳೇ ಪರಿಹಾರ ನೀಡಲಿ




**ನವದೆಹಲಿ, ಅ. 29:** ದೇಶಾದ್ಯಂತ ಹೆಚ್ಚುತ್ತಿರುವ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಸಾರ್ವಜನಿಕ ಜಾಗೃತಿ ಅಭಿಯಾನಗಳು, ವರದಿಗಳು ಹಾಗೂ ನ್ಯಾಯಾಲಯದ ಆದೇಶಗಳ ನಡುವೆಯೂ ಸುಶಿಕ್ಷಿತರೇ ಇಂತಹ ವಂಚನೆಗೆ ಬಲಿಯಾಗುತ್ತಿರುವುದಕ್ಕೆ ತೀವ್ರ ಆಘಾತ ವ್ಯಕ್ತಪಡಿಸಿದೆ.

ಡಿಜಿಟಲ್ ಅರೆಸ್ಟ್ ಕುರಿತ ಸ್ವಯಂ ಪ್ರೇರಿತ ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಅವರ ನೇತೃತ್ವದ ನ್ಯಾಯಪೀಠವು ಸಾರ್ವಜನಿಕರ ಮೌಢ್ಯದ ಬಗ್ಗೆ ಅಸಮಾಧಾನ ಹೊರಹಾಕಿತು. ಈ ಜನರಿಗೆ ಏನಾಗಿದೆ ಇಂತಹ ವಂಚನೆಗಳ ಬಲೆಗೆ ಅವರು ಹೇಗೆ ಬೀಳುತ್ತಿದ್ದಾರೆ ಮೊಬೈಲ್ ಮೂಲಕ ಬಂಧಿಸುವ ಈ ಕಾಲ್ಪನಿಕ ಬಂಧನದ ಬಗ್ಗೆ ಯಾಕಿಷ್ಟು ಭಯ ಮೊಬೈಲ್ ಅನ್ನು ಗೋಡೆಗೆ ಎಸೆದು ಒಡೆದರೆ ನಿಮ್ಮ ಬಂಧನವೂ ಅಲ್ಲಿಗೇ ತಪ್ಪುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮೊಬೈಲ್‌ನಲ್ಲಿ ಬಂಧಿಸುತ್ತಾರೆ ಎಂದು ನಂಬುವ ನೀವು ಎಂಥವರು ಎಂದು ಸಿಜೆಐ ಮೌಖಿಕವಾಗಿ ತರಾಟೆಗೆ ತೆಗೆದುಕೊಂಡರು.

ನಿಮ್ಮನ್ನು ನೀವೇ ಬಲಿಪಶುಗಳನ್ನಾಗಿ ಮಾಡಿಕೊಳ್ಳುತ್ತಿದ್ದೀರಿ. ಸುಶಿಕ್ಷಿತರೇ ಈ ರೀತಿ ವಂಚನೆಗೆ ಒಳಗಾಗುತ್ತಿರುವುದು ನಮಗೆ ತೀವ್ರ ಹತಾಶೆ ತರಿಸಿದೆ. ಈ ವಯಸ್ಸಿನಲ್ಲಿ ಡಿಜಿಟಲ್ ಅರೆಸ್ಟ್‌ಗೆ ಒಳಗಾದರೆ ಮುಂದಿನ ಪೀಳಿಗೆಗೆ ನೀವು ಯಾವ ಸಂದೇಶ ನೀಡುತ್ತೀರಿ ನಿಮ್ಮ ವಿರುದ್ಧ ಏನಾದರೂ ಆದೇಶಗಳಿದ್ದರೆ, ನ್ಯಾಯಾಲಯದ ಅಧಿಕೃತ ವೆಬ್ಸೈಟ್ಗಳಿಗೆ ಭೇಟಿ ನೀಡಿ ಪರಿಶೀಲಿಸಬಹುದು ಎಂದು ಸಿಜೆಐ ಸಲಹೆ ನೀಡಿದರು.

ಪ್ರಕರಣದ ಅಮಿಕಸ್ ಕ್ಯೂರಿ (ನ್ಯಾಯಾಲಯದ ಮಿತ್ರ) ಆಗಿರುವ ಎನ್.ಎಸ್. ನಪ್ಪಿನೈ ಅವರು ನ್ಯಾಯಪೀಠಕ್ಕೆ ಮಾಹಿತಿ ನೀಡಿ, ಡಿಜಿಟಲ್ ಅರೆಸ್ಟ್ ತಡೆಯಲು ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಸಮಸ್ಯೆ ಎಗ್ಗಿಲ್ಲದೆ ಮುಂದುವರಿದಿದೆ. ಕಳೆದ ವಾರವಷ್ಟೇ ಮಹಿಳೆಯೊಬ್ಬರು ಈ ಡಿಜಿಟಲ್ ಅರೆಸ್ಟ್ ವಂಚನೆಗೆ ಬರೋಬ್ಬರಿ 2.5 ಕೋಟಿ ರೂಪಾಯಿ ಕಳೆದುಕೊಂಡಿದ್ದಾರೆ ಎಂದು ವಿವರಿಸಿದರು.

ಸಿಜೆಐ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್‌ಮಾಲ್ಯ ಬಾಗ್ಚಿ ಮತ್ತು ವಿ. ಮೋಹನಾ ಅವರಿದ್ದ ತ್ರಿಸದಸ್ಯ ಪೀಠವು ಈ ವಿಚಾರದಲ್ಲಿ ಬ್ಯಾಂಕ್ಗಳ ಹೊಣೆಗಾರಿಕೆಯನ್ನು ತೀವ್ರವಾಗಿ ಪ್ರಶ್ನಿಸಿತು. ವಂಚನೆಗೊಳಗಾಗುವ ಗ್ರಾಹಕರಿಗೆ ಬ್ಯಾಂಕ್‌ಗಳು ರಕ್ಷಣಾ ಛತ್ರಿಯಂತೆ ಕಾರ್ಯನಿರ್ವಹಿಸಬೇಕು ಎಂದು ಒತ್ತಿ ಹೇಳಿತು. ನಿವೃತ್ತ ವ್ಯಕ್ತಿಯೊಬ್ಬರ ಬ್ಯಾಂಕ್ ಖಾತೆಯಿಂದ ಅಸಾಮಾನ್ಯ ರೀತಿಯಲ್ಲಿ, ಏಕಾಏಕಿ ದೊಡ್ಡ ಮೊತ್ತದ ಹಣ ಡ್ರಾ ಆಗುತ್ತಿರುವಾಗ ಬ್ಯಾಂಕ್‌ಗಳು ಮಧ್ಯಪ್ರವೇಶಿಸಿ ತಡೆಯದಿರುವುದು ಏಕೆ ಎಂದು ನ್ಯಾಯಾಲಯ ಪ್ರಶ್ನಿಸಿದೆ. ಬ್ಯಾಂಕ್‌ಗಳ ನಿರ್ಲಕ್ಷ್ಯದಿಂದ ಇಂತಹ ಡಿಜಿಟಲ್ ವಂಚನೆಗಳು ನಡೆದರೆ, ಆ ಬ್ಯಾಂಕ್‌ಗಳೇ ಸಂತ್ರಸ್ತರಿಗೆ ಪರಿಹಾರ ನೀಡಬೇಕು ಮತ್ತು ಕಾನೂನು ಕ್ರಮ ಎದುರಿಸಬೇಕು. ಹಣಕಾಸು ಸಂಸ್ಥೆಗಳ ಎಚ್ಚರಿಕೆಯ ಕೊರತೆಯಿಂದ ಗ್ರಾಹಕರು ಹಣ ಕಳೆದುಕೊಂಡರೆ, ಕಳೆದುಕೊಂಡ ಕನಿಷ್ಠ ಮೊತ್ತವನ್ನಾದರೂ ಬ್ಯಾಂಕ್‌ಗಳು ಪರಿಹಾರವಾಗಿ ಭರಿಸುವಂತೆ ಕಡ್ಡಾಯ ನಿರ್ದೇಶನ ನೀಡಲು ನಾವು ಚಿಂತಿಸುತ್ತಿದ್ದೇವೆ ಎಂದು ಸಿಜೆಐ ಸ್ಪಷ್ಟಪಡಿಸಿದರು.

# ಜಾತಿ ಗಣತಿಯಲ್ಲಿ ಓಬಿಸಿಗೆ ಪ್ರತ್ಯೇಕ ಕಾಲಂ ಅರ್ಜಿ ಇತ್ಯರ್ಥಪಡಿಸಿದ ಸುಪ್ರೀಂ ಕೋರ್ಟ್

**ನವದೆಹಲಿ, ಅ. 29:** 2027ರ ಜನಗಣತಿಯಲ್ಲಿ ಇತರೆ ಹಿಂದುಳಿದ ವರ್ಗಗಳ (ಓಬಿಸಿ) ಜಾತಿಗಳನ್ನು ಗುರುತಿಸಲು ಪ್ರತ್ಯೇಕ ಕಾಲಂ ಅಥವಾ ಆಯ್ಕೆ ವ್ಯವಸ್ಥೆ ಕಲ್ಪಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಲೇವಾರಿ ಮಾಡಿದೆ. ಈ ವಿಚಾರ ನೀತಿ ನಿರ್ಧಾರಕ್ಕೆ ಸಂಬಂಧಿಸಿದ್ದಾಗಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯ, ಅರ್ಜಿಯ ಅರ್ಹತೆಯ ಕುರಿತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೆ ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರನ್ನು ಸಂಪರ್ಕಿಸಲು ಅರ್ಜಿದಾರರಿಗೆ ಅವಕಾಶ ನೀಡಿದೆ.

ಓಬಿಸಿ ಫೆಡರೇಷನ್ ಆಫ್ ಇಂಡಿಯಾ ಸಲ್ಲಿಸಿದ್ದ ಈ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್‌ಮಾಲ್ಯ ಬಾಗ್ಚಿ ಹಾಗೂ ನ್ಯಾಯಮೂರ್ತಿ ವಿ. ಮೋಹನಾ ಅವರನ್ನೊಳಗೊಂಡ ತ್ರಿಸದಸ್ಯ ಪೀಠ ನಡೆಸಿತು.

2027ರ ಜನಗಣತಿಯ ಡಿಜಿಟಲ್ ವ್ಯವಸ್ಥೆಯಲ್ಲಿ ಜಾತಿಗೆ ಸಂಬಂಧಿಸಿದ 10ನೇ ಕಾಲಂನಲ್ಲಿ ಓಬಿಸಿ ಜಾತಿಗಳ ಅಧಿಕೃತ ಪಟ್ಟಿಯನ್ನು ಆಯ್ಕೆ ಮಾಡಲು ಅನುಕೂಲವಾಗುವಂತೆ ಡ್ರಾಪ್‌ಡೌನ್ ಮೆನು ಒದಗಿಸಬೇಕು ಎಂಬುದು ಅರ್ಜಿಯ ಪ್ರಮುಖ ಬೇಡಿಕೆಯಾಗಿತ್ತು. 2026ರ ಆಗಸ್ಟ್ 14ರಂದು ಅಧಿಸೂಚನೆ ಹೊರಡಿಸಲಾದ ಜನಗಣತಿ ವೇಳಾಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಲ್ಲೇಖವಿದ್ದರೂ, ಇತರ ಜಾತಿಗಳ ವಿಚಾರದಲ್ಲಿ ವ್ಯಕ್ತಿಗಳು ತಮ್ಮ ಜಾತಿಯ ಹೆಸರನ್ನು ಸ್ವಂತ ಪದಗಳಲ್ಲಿ ನಮೂದಿಸಬೇಕಾದ ಮುಕ್ತ ಆಯ್ಕೆ ವ್ಯವಸ್ಥೆ ಇದೆ ಎಂದು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತಂದಿದ್ದರು.

ಈ ಮುಕ್ತ ಆಯ್ಕೆ ವ್ಯವಸ್ಥೆಯಿಂದಾಗಿ 2011ರ ಸಾಮಾಜಿಕ–ಆರ್ಥಿಕ ಜಾತಿ ಗಣತಿಯಲ್ಲಿ ಎದುರಾದ ಸಮಸ್ಯೆಗಳು ಮತ್ತೆ ಮರುಕಳಿಸುವ ಸಾಧ್ಯತೆಯಿದೆ ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದರು. ಹೀಗಾಗಿ, ಜಾತಿಗಳ ಹೆಸರನ್ನು ಏಕರೂಪವಾಗಿ ದಾಖಲಿಸಲು ಅಧಿಕೃತ ಜಾತಿ ಪಟ್ಟಿಯನ್ನು ಡಿಜಿಟಲ್ ವ್ಯವಸ್ಥೆಯಲ್ಲಿ ಆಯ್ಕೆಯ ರೂಪದಲ್ಲಿ ಒದಗಿಸಬೇಕು ಎಂದು ಕೋರಿದ್ದರು.

ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಅರ್ಜಿಯಲ್ಲಿ ಪ್ರಸ್ತಾಪಿಸಿರುವ ವಿಷಯವು ಮೂಲತಃ ನೀತಿ ನಿರ್ಧಾರಕ್ಕೆ ಸಂಬಂಧಿಸಿದ್ದಾಗಿದ್ದು, ಅದನ್ನು ನೀತಿ ರೂಪಿಸುವ ಪ್ರಾಧಿಕಾರಗಳು ಪರಿಣಾಮಕಾರಿಯಾಗಿ ಪರಿಶೀಲಿಸಬಹುದು ಎಂದು ಹೇಳಿತು. ಅರ್ಜಿಯಲ್ಲಿನ ಬೇಡಿಕೆಗಳ ಅರ್ಹತೆಯ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೆ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಿತು.

ಅಲ್ಲದೆ, ಅರ್ಜಿಯ ಪ್ರತಿಯನ್ನು ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರಿಗೆ ಮನವಿಯಾಗಿ ಸಲ್ಲಿಸಿ, ಪ್ರಸ್ತಾಪಿಸಿರುವ ವಿಷಯವನ್ನು ಪರಿಶೀಲಿಸುವಂತೆ ಸಂಬಂಧಪಟ್ಟ ಪ್ರಾಧಿಕಾರವನ್ನು ಸಂಪರ್ಕಿಸಲು ಅರ್ಜಿದಾರರಿಗೆ ಸ್ವಾತಂತ್ರ್ಯ ನೀಡಿತು.

ಸುಪ್ರೀಂ ಕೋರ್ಟ್ ಈ ಆದೇಶದ ಹಿನ್ನೆಲೆಯಲ್ಲಿ ಓಬಿಸಿ ಫೆಡರೇಷನ್ ಆಫ್ ಇಂಡಿಯಾದ ಅಧ್ಯಕ್ಷ ಜೆ. ಹೆಂಜಾರಪ್ಪ ಅವರು ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರನ್ನು ಸಂಪರ್ಕಿಸಿ ಮನವಿ ನೀಡಿದ್ದಾರೆ. ಜಾತಿಯ ಹೆಸರನ್ನು ಪ್ರತಿಯೊಬ್ಬರೂ ತಮ್ಮದೇ ಪದಗಳಲ್ಲಿ ನಮೂದಿಸುವ ವ್ಯವಸ್ಥೆ ಮುಂದುವರಿದರೆ, 2011ರ ಸಾಮಾಜಿಕ–ಆರ್ಥಿಕ ಜಾತಿ ಗಣತಿಯಲ್ಲಿ ಉಂಟಾದ ಸಮಸ್ಯೆಗಳು ಮರುಕಳಿಸಬಹುದು ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ.

# ನನ್ನಷ್ಟು ಕೆಟ್ಟವನು ಬೇರೊಬ್ಬನಿಲ್ಲ: ಬಂಗಾಳದಲ್ಲಿ ಮತಾಂತರ, ಗೋಹತ್ಯೆ ವಿರುದ್ಧ ಸಿಎಂ ಸುವೇಂದು ಅಧಿಕಾರಿ ಎಚ್ಚರಿಕೆ

**ಕೋಲ್ಕತ್ತಾ, ಅ.29:** ಪಶ್ಚಿಮ ಬಂಗಾಳದಲ್ಲಿ ಗೋಹತ್ಯೆ ಮತ್ತು ಮತಾಂತರ ವಿರುದ್ಧ ಎಚ್ಚರಿಕೆ ನೀಡಿರುವ ಸಿಎಂ ಸುವೇಂದು ಅಧಿಕಾರಿ, ಲವ್ ಜಿಹಾದ್ ಮತ್ತು ಲ್ಯಾಂಡ್ ಜಿಹಾದ್ ತಡೆಯುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಇಂತಹ ಘಟನೆಗಳು ಮರುಕಳಿಸಿದರೆ, 'ನನ್ನಷ್ಟು ಕೆಟ್ಟವನು ಬೇರೊಬ್ಬನಿಲ್ಲ' ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.



ಬಾಂಗ್ಲಾದೇಶದ ಗಡಿಯಲ್ಲಿರುವ, ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಯಾದ ಮಾಲ್ಡಾದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅಧಿಕಾರಿ, 2023ರಲ್ಲಿ ಕಾಲಿಯಾಚಕ್–1 ಬ್ಲಾಕ್‌ನಲ್ಲಿ ನಡೆದಿದೆ ಎನ್ನಲಾದ ಧಾರ್ಮಿಕ ಮತಾಂತರದ ಘಟನೆಯೇ ಕೊನೆಯ ಪ್ರಕರಣವಾಗಲಿದೆ ಎಂದು ಹೇಳಿದರು. ಅಲ್ಲದೆ, ತಮ್ಮ ಮೇಲ್ವಿಚಾರಣೆಯಲ್ಲಿ ಮೋಟಾಬಾರಿ ಮತ್ತು ಕಾಲಿಯಾಚಕ್‌ನಲ್ಲಿ ನಡೆದಂತಹ ಕೋಮು ಹಿಂಸಾಚಾರಗಳು ಮರುಕಳಿಸಲು ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ನೀವು ಮಾಲ್ಡಾದಲ್ಲಿ ಧಾರ್ಮಿಕ ಮತಾಂತರವನ್ನು ತಡೆಯುತ್ತೀರಾ ಜಿಲ್ಲೆಯ ಕಾಲಿಯಾಚಕ್–1 ಬ್ಲಾಕ್‌ನಲ್ಲಿ ಇಂತಹ ಒಂದು ಘಟನೆ ದಾಖಲಾಗಿತ್ತು. ಅದೇ ಕೊನೆಯದು. ನನ್ನ ಅಧಿಕಾರಾವಧಿಯಲ್ಲಿ ಇದೇ ರೀತಿಯ ಘಟನೆ ಮತ್ತೆ ನಡೆದರೆ, ನನ್ನಷ್ಟು ಕಠಿಣ ವ್ಯಕ್ತಿ ಬೇರೊಬ್ಬರಿಲ್ಲ ಎಂಬುದನ್ನು ನೀವು ಅರಿತುಕೊಳ್ಳುತ್ತೀರಿ ಎಂದು ಎಚ್ಚರಿಸಿದರು. ಮಾಲ್ಡಾ ಜಿಲ್ಲೆಯ ಮೋಟಾಬಾರಿಯಲ್ಲಿ ಇಬ್ಬರು ಸಹೋದರರನ್ನು ಬಲವಂತವಾಗಿ ಮತಾಂತರಗೊಳಿಸಲಾಗಿದೆ ಎಂದು ಆರೋಪಿಸಿ 2023ರಲ್ಲಿ ಪ್ರಕರಣವೊಂದು ದಾಖಲಾಗಿತ್ತು. ಜಿಲ್ಲೆಯಲ್ಲಿ ನಡೆದ ಕೋಮು ಹಿಂಸಾಚಾರದ ಬಗ್ಗೆ ಪ್ರಸ್ತಾಪಿಸಿದ ಅಧಿಕಾರಿ, ಹಿಂದೂಗಳು ಅತಿ ಹೆಚ್ಚು ಸಂಕಷ್ಟ ಅನುಭವಿಸಿದ್ದಾರೆ ಎಂದು ಹೇಳಿದರು. ಧಾರ್ಮಿಕ ಮತಾಂತರ ಮತ್ತು ಗಡಿಭದ್ರತೆಯ ವಿಷಯಗಳಲ್ಲಿ ತಮ್ಮ ಸರ್ಕಾರ ಕಠಿಣ ನಿಲುವು ತೆಗೆದುಕೊಳ್ಳಲಿದೆ ಎಂದು ಅವರು ಪ್ರತಿಪಾದಿಸಿದರು.

ನಾವು ಎಲ್ಲಿಯೂ ಯಾವುದೇ ಧಾರ್ಮಿಕ ಮತಾಂತರವನ್ನು ಸಹಿಸುವುದಿಲ್ಲ. ನಾವು ಲವ್ ಜಿಹಾದ್ ಮತ್ತು ಲ್ಯಾಂಡ್ ಜಿಹಾದ್ ಅನ್ನು ತಡೆಯುತ್ತೇವೆ. ನಾವು ಗಡಿ ಭದ್ರತಾ ಪಡೆಗೆ ಭೂಮಿಯನ್ನು ಹಸ್ತಾಂತರಿಸಿದ್ದೇವೆ. ಒಂದು ನೊಣವೂ ಒಳಗೆ ನುಸುಳಲು ನಾವು ಬಿಡುವುದಿಲ್ಲ ಎಂದರು. ಮಾಲ್ಡಾ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಳ್ಳುತಂತಿಯ ಬೇಲಿ ಮತ್ತು ಗಡಿ ಹೊರಠಾಣೆಗಳನ್ನು ನಿರ್ಮಿಸಲು, ರಾಜ್ಯ ಸರ್ಕಾರವು ಮೇ ತಿಂಗಳಲ್ಲಿ 142.79 ಎಕರೆ ಭೂಮಿಯನ್ನು ಗಡಿ ಭದ್ರತಾ ಪಡೆಗೆ ಹಸ್ತಾಂತರಿಸಿತ್ತು. ಗಡಿ ಭದ್ರತೆಗೆ ಬಿಜೆಪಿ ಸರ್ಕಾರ ನೀಡುತ್ತಿರುವ ಒತ್ತು ಹಾಗೂ ಗಡಿ ಜಿಲ್ಲೆಗಳಲ್ಲಿ ನಡೆಯುತ್ತಿದೆ ಎನ್ನಲಾದ ಅಕ್ರಮ ಒಳನುಸುಳುವಿಕೆ ಮತ್ತು ಜನಸಂಖ್ಯಾ ಬದಲಾವಣೆಯ ಕುರಿತಾದ ಅದರ ರಾಜಕೀಯ ಪ್ರಚಾರದ ಹಿನ್ನೆಲೆಯಲ್ಲಿ, ಮತಾಂತರ ಮತ್ತು ಲ್ಯಾಂಡ್ ಜಿಹಾದ್ ಕುರಿತು ಮುಖ್ಯಮಂತ್ರಿಗಳು ಈ ಹೇಳಿಕೆಗಳನ್ನು ನೀಡಿದ್ದಾರೆ.

# ಬಿಹಾರ ಶಿಕ್ಷಣ ಇಲಾಖೆಯಲ್ಲಿ ಭಾರಿ ಗೋಲ್ಮಾಲ್

**ಪಟನಾ, ಅ. 29:** ಬಿಹಾರದ ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ನೌಕರರು ಮತ್ತು ಶಿಕ್ಷಕರ ಸಂಬಳ ನೀಡಲು ಬಳಸುವ ಆನ್‌ಲೈನ್ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು, ಬರೋಬ್ಬರಿ 1.85 ಕೋಟಿ ರೂ.ಗಳಿಗೂ ಹೆಚ್ಚು ಸಾರ್ವಜನಿಕ ಹಣವನ್ನು ಲೂಟಿ ಮಾಡಿರುವ ದೊಡ್ಡ ಹಗರಣ ಬೆಳಕಿಗೆ ಬಂದಿದೆ.

ಸಂಬಳ ಪಾವತಿಯಲ್ಲಿ ಪಾರದರ್ಶಕತೆ ತರಲು ಸರ್ಕಾರ ಈ ಆನ್‌ಲೈನ್ ಸಿಸ್ಟಮ್ ಜಾರಿಗೆ ತಂದಿತ್ತು. ಆದರೆ, ಕೆಲ ಕೆಳಹಂತದ ಸಿಬ್ಬಂದಿ ಮತ್ತು ಅಧಿಕಾರಿಗಳು ಕೋಟ್ಯಂತರ ಹಣವನ್ನು ತಮ್ಮದೇ ಖಾತೆಗಳಿಗೆ ವರ್ಗಾಯಿಸಿಕೊಂಡಿರುವುದು ಇಲಾಖೆಯ ಆಂತರಿಕ ತನಿಖೆಯಲ್ಲಿ ಪತ್ತೆಯಾಗಿದೆ. ಸದ್ಯ ಈ ಹಗರಣ ರಾಜ್ಯದ ಮೂರು ಪ್ರಮುಖ ಜಿಲ್ಲೆಗಳಲ್ಲಿ ಸದ್ದು ಮಾಡುತ್ತಿದೆ.

ನವಾಡ ಜಿಲ್ಲೆಯ ರಾಜೌಲಿ ತಾಲೂಕಿನ ಶಾಲೆಯೊಂದರ ಶಿಕ್ಷಕಿಯೊಬ್ಬರಿಗೆ ಏಪ್ರಿಲ್ ತಿಂಗಳಲ್ಲಿ ಬರಬೇಕಿದ್ದ ಮೂಲ ಸಂಬಳ 46,772 ರೂ. ಆದರೆ, ಆನ್‌ಲೈನ್ ಸಿಸ್ಟಮ್ ಬಳಸುತ್ತಿದ್ದ ಸಿಬ್ಬಂದಿ, ಆಕೆಗೆ ಹೆಚ್ಚುವರಿಯಾಗಿ 4,52,222 ರೂ. ಸೇರಿಸಿ ಒಟ್ಟು 4,91,772 ರೂ. ಜಮೆ ಮಾಡಿದ್ದಾರೆ. ಮೇ ತಿಂಗಳಲ್ಲೂ ಇದೇ ರೀತಿ 3.49 ಲಕ್ಷ ರೂ. ಹಾಕಲಾಗಿದೆ. ಅಲ್ಲದೆ, ಸರ್ಕಾರದ ಬೇರೆ ನಿಧಿಯಿಂದಲೂ




2.86 ಲಕ್ಷ ರೂ. ಈಕೆಯ ಖಾತೆಗೆ ಹೋಗಿದ್ದು, ಒಟ್ಟಾರೆಯಾಗಿ ಆ ಶಿಕ್ಷಕಿ 10.43 ಲಕ್ಷ ರೂ.ಗಳನ್ನು ಸುಮ್ಮನೆ ಪಡೆದಿದ್ದಾರೆ. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಮಾಡುತ್ತಿದ್ದಾರೆ.

ಪಟನಾ ಜಿಲ್ಲೆಯ ಶಾಲೆಯೊಂದರ ಕ್ಲರ್ಕ್ ವಿಜಯ್ ಕುಮಾರ್ ಎಂಬಾತ, ನೇರವಾಗಿ ಜಿಲ್ಲಾ ಶಿಕ್ಷಣಾಧಿಕಾರಿಗಳ ಅಧಿಕೃತ ಪಾಸ್ವರ್ಡ್ ಬಳಸಿ ಆನ್ಲೈನ್‌ನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾನೆ. ಈ ಮೂಲಕ ಸುಮಾರು 76.71 ಲಕ್ಷ ರೂ. ಸರ್ಕಾರಿ ಹಣವನ್ನು ಡಿಜಿಟಲ್ ಸುಲಿಗೆ ಮಾಡಿದ್ದಾನೆ. ವಿಷಯ ಗೊತ್ತಾಗುತ್ತಿದ್ದಂತೆ ಡಿಇಒ ಆತನನ್ನು ಕೆಲಸದಿಂದ ಅಮಾನತು ಮಾಡಿದ್ದಾರೆ.

ಭಾಗಲ್ಪುರ ಜಿಲ್ಲೆಯಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ತನುಶ್ರೀ ಎನ್ನುವ ಅಸ್ತಿತ್ವದಲ್ಲೇ ಇಲ್ಲದ ನಕಲಿ ಶಿಕ್ಷಕಿಯ ಹೆಸರನ್ನು ಸಿಸ್ಟಮ್‌ನಲ್ಲಿ ಸೃಷ್ಟಿಸಲಾಗಿದೆ. ಈ ನಕಲಿ ಹೆಸರಿಗೆ ತಿಂಗಳುಗಟ್ಟಲೆ ಬರೋಬ್ಬರಿ 98 ಲಕ್ಷ ರೂ.ಗಳಿಗೂ ಹೆಚ್ಚು ಹಣವನ್ನು ಸಂಬಳದ ರೂಪದಲ್ಲಿ ಡ್ರಾ ಮಾಡಿಕೊಳ್ಳಲಾಗಿದೆ.

ಈ ಅಕ್ರಮಕ್ಕೆ ಸಂಬಂಧಿಸಿದಂತೆ ಒಬ್ಬ ಅಧಿಕಾರಿಯನ್ನು ಪೊಲೀಸರು ಬಂಧಿಸಿದ್ದರೆ, ಜಿಲ್ಲಾ ಶಿಕ್ಷಣಾಧಿಕಾರಿಯನ್ನೂ ಸಸ್ಪೆಂಡ್ ಮಾಡಲಾಗಿದೆ. ಅಷ್ಟೇ ಅಲ್ಲ, ಪೊಲೀಸರು ತನಿಖೆಗೆ ಹೋದಾಗ ಈ ಹಗರಣಕ್ಕೆ ಸಂಬಂಧಿಸಿದ ಮುಖ್ಯ ಕಡತಗಳೇ ನಾಪತ್ತೆಯಾಗಿರುವುದು ಅಚ್ಚರಿಗೆ ಕಾರಣವಾಗಿದೆ.

ಸಿಸ್ಟಮ್ ನಿಯಮದ ಪ್ರಕಾರ ಒಬ್ಬರು ಲೆಕ್ಕ ನಮೂದಿಸಿದರೆ, ಮತ್ತೊಬ್ಬ ಹಿರಿಯ ಅಧಿಕಾರಿ ಅದನ್ನು ಪರಿಶೀಲಿಸಬೇಕು. ಆದರೆ ಇಲ್ಲಿ ಇಬ್ಬರೂ ಸೇರಿಕೊಂಡೇ ಹಣ ಗುಳುಂ ಮಾಡಿದ್ದಾರೆ. ಹಿರಿಯ ಅಧಿಕಾರಿಗಳ ಬಳಿ ಇರಬೇಕಿದ್ದ ಪಾಸ್‌ವರ್ಡ್‌ಗಳು ಕಚೇರಿಯ ಕ್ಲರ್ಕ್‌ಗಳ ಕೈಯಲ್ಲೇ ಇದ್ದವು, ಇದರಿಂದ ವಂಚನೆ ಸುಲಭವಾಯಿತು. ಸರ್ಕಾರದ ಬೇರೆ ಯೋಜನೆಗಳಿಗೆ ಬರಬೇಕಿದ್ದ ಹಣವನ್ನು ನೇರವಾಗಿ ವೈಯಕ್ತಿಕ ಖಾತೆಗಳಿಗೆ ಹಾಕಿಕೊಳ್ಳಲಾಗಿದೆ.

ಸುದ್ದಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಬಿಹಾರ ಶಿಕ್ಷಣ ಸಚಿವ ಮಿಥಿಲೇಶ್ ತಿವಾರಿ, ಈ ಹಗರಣದ ಗಂಭೀರತೆಯನ್ನು ಒಪ್ಪಿಕೊಂಡಿದ್ದಾರೆ. ಈ ಮೂರು ಜಿಲ್ಲೆಗಳ ಪ್ರಕರಣಗಳು ನಮಗೆ ದೊಡ್ಡ ಎಚ್ಚರಿಕೆಯ ಗಂಟೆಯಾಗಿವೆ. ರಾಜ್ಯದ ಎಲ್ಲಾ 38 ಜಿಲ್ಲೆಗಳಲ್ಲೂ ಎಚ್ ಆರ್ ಎಂಎಸ್ ಆಡಿಟ್ ನಡೆಸಲು ಆದೇಶಿಸಿದ್ದು, ನವೆಂಬರ್ 15ರ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಪೋರ್ಟಲ್‌ನ ತಾಂತ್ರಿಕ ಲೋಪಗಳನ್ನು ಸರಿಪಡಿಸಲು ಪ್ರತ್ಯೇಕ ಸೈಬರ್ ಹಾಗೂ ಐಟಿ ತಜ್ಞರ ತಂಡವನ್ನು ನಿಯೋಜಿಸಲಾಗುತ್ತಿದೆ. ಭ್ರಷ್ಟ ಅಧಿಕಾರಿಗಳು ಮತ್ತು ಶಿಕ್ಷಕರ ವಿರುದ್ಧದ ಈ ಕಾರ್ಯಾಚರಣೆ ಇಲ್ಲಿಗೆ ನಿಲ್ಲುವುದಿಲ್ಲ ಎಂದಿದ್ದಾರೆ.

# ಎಸ್‌ಐಆರ್ ನಂತರ ಜಿಬಿಎ ವ್ಯಾಪ್ತಿಯಲ್ಲಿ ಉಳಿದಿರುವುದು ಕೇವಲ 59 ಲಕ್ಷ ಮತದಾರರು!

**ಅಂಕಿಅಂಶಗಳ ಪ್ರಕಾರ 48 ಲಕ್ಷ ಹೆಸರು ಪಟ್ಟಿಯಿಂದ ಹೊರಕ್ಕೆ ವಾರ್ಡ್‌ಗಳ ಮತದಾರರ ಸಂಖ್ಯೆ ಸರಾಸರಿ 24 ಸಾವಿರದಿಂದ 16 ಸಾವಿರಕ್ಕೆ ಇಳಿಕೆ**

**ಬೆಂಗಳೂರು, ಅ.29:** ಎಸ್‌ಐಆರ್ ನಂತರ ಜಿಬಿಎ ವ್ಯಾಪ್ತಿಯಲ್ಲಿ ಕೇವಲ 59,08,151 ಮತದಾರರು ಮಾತ್ರ ಉಳಿದಿದ್ದಾರೆ. ಈ ಮತದಾರರ ಆಧಾರದ ಮೇಲೆ ಹೇಗೆ ಐದು ಪಾಲಿಕೆಗಳಿಗೆ ಚುನಾವಣೆ ನಡೆಸುವುದು ಎನ್ನುವ ತಲೆನೋವು ಶುರುವಾಗಿದೆ.

ಲೆಕ್ಕಾಚಾರದ ಪ್ರಕಾರ ನಗರದಲ್ಲಿದ್ದ 48,00,565 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಇದರಿಂದ ವಾರ್ಡ್‌ವಾರು ಮತದಾರರ ಸಂಖ್ಯೆಯಲ್ಲಿ ದೊಡ್ಡ ಮಟ್ಟದ ಬದಲಾವಣೆಯಾಗುವ ಸಾಧ್ಯತೆಯಿದ್ದು, ಮುಂಬರುವ ಜಿಬಿಎ ಚುನಾವಣೆಯ ಸಿದ್ಧತೆಗೂ ಸವಾಲು ಎದುರಾಗಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ 369 ವಾರ್ಡ್‌ಗಳಲ್ಲಿ ಮೊದಲು ಸರಾಸರಿ 24,100 ಮತದಾರರಿದ್ದರು ಎಂದು ಅಂದಾಜಿಸಲಾಗಿತ್ತು. ಆದರೆ ಪರಿಷ್ಕರಣೆಯ ಬಳಿಕ ವಾರ್ಡ್‌ವೊಂದರ ಸರಾಸರಿ ಮತದಾರರ ಸಂಖ್ಯೆ ಸುಮಾರು 16 ಸಾವಿರಕ್ಕೆ ಇಳಿದಿದೆ. ಮತದಾರರ ಸಂಖ್ಯೆಯಲ್ಲಿನ ಈ ಭಾರೀ ವ್ಯತ್ಯಾಸವು ವಾರ್ಡ್‌ವಾರು ಚುನಾವಣಾ ಲೆಕ್ಕಾಚಾರವನ್ನೇ ಬದಲಿಸುವ ಸಾಧ್ಯತೆಯಿದೆ. ವಿಶೇಷವಾಗಿ, ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಕೆಲವು ವಾರ್ಡ್‌ಗಳಲ್ಲಿ ಮತದಾರರ ಸಂಖ್ಯೆ ಹೆಚ್ಚಾಗಿಯೂ, ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕಡಿಮೆಯಾಗಿಯೂ ಇರಬಹುದೆಂಬ ನಿರೀಕ್ಷೆಯಿದೆ. ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಕೆಲವು ವಾರ್ಡ್‌ಗಳಲ್ಲಿ ಮತದಾರರ ಸಂಖ್ಯೆ 10 ಸಾವಿರಕ್ಕಿಂತ ಕಡಿಮೆಯಾಗುವ ಸಾಧ್ಯತೆಯೂ ಇದೆ. ಇದು ವಾರ್ಡ್‌ಗಳ ನಡುವಿನ ಮತದಾರರ ಸಂಖ್ಯೆಯ ಅಸಮತೋಲನಕ್ಕೆ ಕಾರಣವಾಗಬಹುದು.

ಇದರ ನಡುವೆ, ವಾರ್ಡ್‌ವಾರು ಮತದಾರರ ವಿಂಗಡಣೆ ಮಾಡುವಾಗ 2011ರ ಜನಗಣತಿಯ ಮಾನದಂಡಗಳನ್ನು ಪಾಲಿಸಬೇಕಾದ ಅಗತ್ಯವೂ ಇದೆ. ಮತದಾರರ ಪರಿಷ್ಕೃತ ಸಂಖ್ಯೆ, ಜನಸಂಖ್ಯೆಯ ಹಂಚಿಕೆ ಹಾಗೂ ವಾರ್ಡ್‌ಗಳ ವ್ಯಾಪ್ತಿಯನ್ನು ಸಮನ್ವಯಗೊಳಿಸುವುದು ಜಿಬಿಎಗೆ ಪ್ರಮುಖ ಸವಾಲಾಗಲಿದೆ.

**ಯಾವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಮತದಾರರು?:** ಲಭ್ಯವಾಗಿರುವ ಅಂಕಿ–ಅಂಶಗಳ ಪ್ರಕಾರ, ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಗಳಲ್ಲಿನ ಮತದಾರರ ವಿವರ ಹೀಗಿದೆ: ಬೆಂಗಳೂರು ನಗರ: 24,01,939, ಬೆಂಗಳೂರು ಉತ್ತರ: 13,25,284, ಬೆಂಗಳೂರು ಕೇಂದ್ರ: 10,67,374 ಹಾಗೂ ಬೆಂಗಳೂರು ದಕ್ಷಿಣದಲ್ಲಿ 11,13,554 ಮತದಾರರಿದ್ದು, ಒಟ್ಟು: 59,08,151 ಮತದಾರರಿದ್ದಾರೆ.

**ಡಿಸೆಂಬರ್ ಒಳಗೆ ಚುನಾವಣೆ ನಡೆಸುವ ಸವಾಲು:** ಪ್ರಕ್ರಿಯೆ ಪೂರ್ಣಗೊಂಡ ಬೆನ್ನಲ್ಲೇ



ಜಿಬಿಎ ಚುನಾವಣೆ ನಡೆಸುವ ಪ್ರಕ್ರಿಯೆ ಮತ್ತೆ ಮುನ್ನೆಲೆಗೆ ಬಂದಿದೆ. ಐದು ನಗರ ಪಾಲಿಕೆಗಳ ಚುನಾವಣೆಗಳನ್ನು ಡಿಸೆಂಬರ್ 30ರೊಳಗೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಗಡುವು ನೀಡಿರುವ ಹಿನ್ನೆಲೆಯಲ್ಲಿ, ರಾಜ್ಯ ಚುನಾವಣಾ ಆಯೋಗದ ಮುಂದಿರುವ ಸಮಯಾವಕಾಶ ಸೀಮಿತವಾಗಿದೆ.

ಡಿಸೆಂಬರ್ ಅಂತ್ಯದ ಗಡುವಿಗೆ ಇಂದಿನಿಂದ ಸುಮಾರು 65 ದಿನಗಳು ಮಾತ್ರ ಬಾಕಿಯಿದ್ದು, ಚುನಾವಣೆಯ ಎಲ್ಲ ಪೂರ್ವಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಿದೆ. ರಾಜ್ಯ ಚುನಾವಣಾ ಆಯೋಗದ ನಿಯಮಾನುಸಾರ ಚುನಾವಣಾ ಪ್ರಕ್ರಿಯೆಗೆ ಗರಿಷ್ಠ 30 ದಿನಗಳು ಬೇಕಾಗಬಹುದು ಎಂಬ ಲೆಕ್ಕಾಚಾರವೂ ಇದೆ. ಮೊದಲಿಗೆ ಅಂತಿಮ ಮತದಾರರ ಪಟ್ಟಿಯ ಆಧಾರದಲ್ಲಿ ವಾರ್ಡ್‌ವಾರು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಬೇಕಿದೆ. ನಂತರ ಪ್ರಕಟಿಸಿರುವ ಮೀಸಲಾತಿಯನ್ನು ಮರುಪರಿಶೀಲಿಸುವ ಅಗತ್ಯ ಎದುರಾಗಬಹುದು.

ಮೀಸಲಾತಿ ಅಥವಾ ವಾರ್ಡ್‌ವಾರು ಪಟ್ಟಿಗಳಲ್ಲಿ ಬದಲಾವಣೆಗಳಿದ್ದರೆ, ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಬೇಕಾಗುತ್ತದೆ.

ಚುನಾವಣೆಯ ವೇಳಾಪಟ್ಟಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕಾದರೆ, ನವೆಂಬರ್ ಮೂರನೇ ವಾರದೊಳಗೆ ಚುನಾವಣೆ ಘೋಷಣೆಯಾಗಬೇಕು ಎಂಬ ಲೆಕ್ಕಾಚಾರವಿದೆ. ನವೆಂಬರ್ 25ರೊಳಗೆ ನೀತಿ ಸಂಹಿತೆ ಜಾರಿಗೊಳಿಸಿ ಸಂಬಂಧಿತ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಯೋಜನೆ ರೂಪಿಸಬೇಕಾಗುತ್ತದೆ. ಡಿಸೆಂಬರ್ 31ರೊಳಗೆ ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟಿಸುವುದು ಮುಂದಿರುವ ಗುರಿಯಾಗಬಹುದು.ಆದರೆ, ಮತದಾರರ ಪಟ್ಟಿಯ ಸಿದ್ಧತೆ, ಮೀಸಲಾತಿ ಮರುಪರಿಶೀಲನೆ, ಆಕ್ಷೇಪಣೆಗಳ ವಿಲೇವಾರಿ ಹಾಗೂ ಚುನಾವಣಾ ವೇಳಾಪಟ್ಟಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವುದು ಸುಲಭದ ಕೆಲಸವಲ್ಲ.

ಹೀಗಾಗಿ, ಎಸ್‌ಐಆರ್ ಬಳಿಕದ ಮತದಾರರ ಸಂಖ್ಯೆಯಲ್ಲಿನ ಭಾರೀ ಇಳಿಕೆ ಮತ್ತು ವಾರ್ಡ್‌ವಾರು ಅಸಮತೋಲನದ ನಡುವೆಯೇ ಜಿಬಿಎ ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಒಟ್ಟಿನಲ್ಲಿ, ಮತದಾರರ ಪಟ್ಟಿಯ ಪರಿಷ್ಕರಣೆ ಬೆಂಗಳೂರಿನ ಚುನಾವಣಾ ಚಿತ್ರಣವನ್ನೇ ಬದಲಿಸುವ ಸಾಧ್ಯತೆಯಿದ್ದು, ಡಿಸೆಂಬರ್ ಗಡುವಿನೊಳಗೆ ಚುನಾವಣೆ ನಡೆಸಲು ಆಯೋಗ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ ಎಂಬುದರತ್ತ ರಾಜಕೀಯ ವಲಯದ ಗಮನ ನೆಟ್ಟಿದೆ.

# ಟನ್ ಕಬ್ಬಿಗೆ ಕನಿಷ್ಠ 4500 ರೂ. ಬೆಲೆ ನಿಗದಿಗೆ ಆಗ್ರಹ: ಕೇಂದ್ರ ಸರ್ಕಾರಕ್ಕೆ ಕಬ್ಬು ಬೆಳೆಗಾರರ ಸಂಘದ ಮನವಿ

**ಬೆಂಗಳೂರು, ಅ.29:** ಪ್ರತಿ ಟನ್‌ಗೆ ಕನಿಷ್ಠ 4,500 ರೂಪಾಯಿ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) ನಿಗದಿ ಪಡಿಸಬೇಕು ಮತ್ತು ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಆಗುತ್ತಿರುವ ಶೋಷಣೆಯನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ನೀತಿ ಆಯೋಗದ ಮಾಜಿ ಸದಸ್ಯ ರಮೇಶ್ ಚಂದ್ ಅವರ ನೇತೃತ್ವದಲ್ಲಿ ರಚಿಸಲಾಗಿರುವ ಕೇಂದ್ರ ಸಮಿತಿಗೆ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು, ಹೆಚ್ಚುತ್ತಿರುವ ಕೃಷಿ ವೆಚ್ಚಗಳು, ಅಸಮರ್ಪಕ ಬೆಲೆ, ಬರ, ಬೆಳೆ ನಷ್ಟ ಮತ್ತು ಸಾಲದ ಸುಳಿಗೆ ಸಿಲುಕಿ ಕಬ್ಬು ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾರೆ



ಎಂದು ಹೇಳಿದ್ದಾರೆ. ರಾಜ್ಯ ಕಬ್ಬು ಅಭಿವೃದ್ಧಿ ಆಯುಕ್ತರ ವರದಿಯ ಪ್ರಕಾರ, ಕಳೆದ ವರ್ಷ ಒಂದು ಟನ್ ಕಬ್ಬು ಉತ್ಪಾದಿಸಲು 4,450 ರೂಪಾಯಿ ವೆಚ್ಚವಾಗುತ್ತಿತ್ತು ಎಂದು ಶಾಂತಕುಮಾರ್ ಮನವಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ, ಶೇಕಡಾ 10.25 ರಷ್ಟು ಸಕ್ಕರೆ ಇಳುವರಿ ಆಧಾರದ ಮೇಲೆ ಎಫ್‌ಆರ್‌ಪಿಯನ್ನು ಪ್ರತಿ ಟನ್‌ಗೆ ರೂ.4,500 ನಿಗದಿ ಪಡಿಸುವಂತೆ ಒತ್ತಾಯಿಸಿದ್ದಾರೆ.

**ಸಿಹಿತಿಂಡಿ ತಯಾರಕರು, ತಂಪು ಪಾನೀಯ, ಸಂಸ್ಕರಣಾಗಳಿಗೆ ಪ್ರತ್ಯೇಕ ಬೆಲೆ ನಿಗದಿ ಮಾಡಿ**

**ಸಿಹಿ ತಿಂಡಿ ತಯಾರಕರು, ತಂಪು ಪಾನೀಯ ಕಂಪನಿಗಳು ಮತ್ತು ಆಹಾರ ಸಂಸ್ಕರಣಾ ಘಟಕಗಳಂತಹ ವಾಣಿಜ್ಯ ಬಳಕೆದಾರರಿಗೆ ಮಾರಾಟವಾಗುವ ಸಕ್ಕರೆಗೆ ಪ್ರತ್ಯೇಕ, ಹೆಚ್ಚಿನ ಬೆಲೆ ನಿಗದಿ ಮಾಡಬೇಕು. ಆದರೆ, ಗೃಹ ಬಳಕೆದಾರರಿಗೆ ಈಗಿರುವ ಬೆಲೆಯನ್ನೇ ಮುಂದುವರಿಸಬೇಕು. ಈ ಮೂಲಕ ಬರುವ ಹೆಚ್ಚುವರಿ ಆದಾಯವನ್ನು ರೈತರಿಗೆ ಪಾವತಿಬೇಕು ಎಂದು ಕುರುಬೂರು ಶಾಂತಕುಮಾರ್ ಪ್ರಸ್ತಾಪಿಸಿದ್ದಾರೆ. ಅಲ್ಲದೆ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳಾದ ಮೊಲಾಸಸ್, ಬಗಾಸ್, ಎಥೆನಾಲ್ ಮತ್ತು ವಿದ್ಯುತ್ ಉತ್ಪಾದನೆಯಿಂದ ಬರುವ ಲಾಭದಲ್ಲಿ ರೈತರಿಗೂ ಕಡ್ಡಾಯ ಪಾಲು ನೀಡಬೇಕು ಎಂದು ಸಂಘವು ಆಗ್ರಹಿಸಿದೆ.**

# ವಿಡಿಯೋ ಕಾಲ್ ಪ್ರಕರಣ: ಸಚಿವ ವಿಜಯಾನಂದ ಕಾಶಪ್ಪನವರ್ ಸ್ಪಷ್ಟನೆ



**ಬೆಂಗಳೂರು, ಅ.29:** ಸಾಮಾಜಿಕ ಜಾಲತಾಣಗಳಲ್ಲಿ ಯುವತಿಯೊಬ್ಬಳೊಂದಿಗೆ ವಿಡಿಯೋ ಕಾಲ್ ನಡೆಸಿರುವುದಾಗಿ ಹೇಳಲಾದ ವಿಡಿಯೋ ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ವಿಜಯಾನಂದ ಕಾಶಪ್ಪನವರ ಸ್ಪಷ್ಟನೆ ನೀಡಿದ್ದಾರೆ.

ವಿಧಾನಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಶಿಯಲ್ ಮೀಡಿಯಾದಲ್ಲಿ ಒಂದು ವಿಡಿಯೋ ಓಡಾಡುತ್ತಿದೆ. ವಿಡಿಯೋದಲ್ಲಿರುವುದು ಹುಬ್ಬಳ್ಳಿಯ ಯುವತಿ. ಆಕೆ ಮಗು, ಆಕೆಯ ತೇಜೋವಧೆ ಮಾಡಬೇಡಿ ಎಂದು ಮನವಿ ಮಾಡಿದರು.

ಯುವತಿಯ ಬಗ್ಗೆ ಅನಗತ್ಯವಾಗಿ ಅಪಪ್ರಚಾರ ಮಾಡುವುದು ಅಥವಾ ಆಕೆಯ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ ಎಂಬ ಅರ್ಥದಲ್ಲಿ ಮಾತನಾಡಿದ ಸಚಿವರು, ಯುವತಿಯ ತೇಜೋವಧೆ ಮಾಡುವವರ ವಿರುದ್ಧ ದೂರು ನೀಡುವುದಾಗಿ ಎಚ್ಚರಿಕೆ ನೀಡಿದರು.

ವಿಡಿಯೋ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿರುವ ನಡುವೆಯೇ ಸಚಿವರು

# ಸ್ಟಿಂಗ್ ಆಪರೇಷನ್: ಬಂಧನದ ಭೀತಿಯಿಂದ ವಿದೇಶಕ್ಕೆ ಹಾರಿದ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ!

**ಬೆಂಗಳೂರು, ಅ.28:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ 'ಸ್ಟಿಂಗ್ ಆಪರೇಷನ್' ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದ ಭೀತಿಯಲ್ಲಿರುವ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಅವರು ಹಠಾತ್ ವಿದೇಶಕ್ಕೆ ತೆರಳಿದ್ದಾರೆ.

ಪ್ರಕರಣದ ತನಿಖೆ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಅವರು ಕಾನೂನು ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳಲು ವಿದೇಶಕ್ಕೆ ಪರಾರಿಯಾಗಿದ್ದಾರೆ ಎನ್ನಲಾಗಿದ್ದು, ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಹಾಗೂ ಚರ್ಚೆಗೆ ಗ್ರಾಸವಾಗಿದೆ.ಇತ್ತೀಚೆಗಷ್ಟೇ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಿದ್ದ ಕೃಪಾ ಆಳ್ವ ಅವರು ತಮ್ಮ ಸುದೀರ್ಘ ಹೇಳಿಕೆಯನ್ನು ದಾಖಲಿಸಿದ್ದರು. ವಿಚಾರಣೆ ಪೂರ್ಣಗೊಂಡ ನಂತರ "ಮುಂದೆ ಕರೆದಾಗಲೆಲ್ಲಾ ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗಬೇಕು" ಎಂಬ ಸ್ಪಷ್ಟ ಸೂಚನೆಯನ್ನು ನೀಡಿ ಪೊಲೀಸರು ಅವರನ್ನು ಕಳುಹಿಸಿ ಕೊಟ್ಟಿದ್ದರು. ಆದರೆ, ಹೇಳಿಕೆ ದಾಖಲಿಸಿದ ಬೆನ್ನಲ್ಲೇ ಕೃಪಾ ಆಳ್ವ ಅವರು ಮೊದಲು ಬೆಂಗಳೂರಿನಿಂದ ಜಪಾನ್‌ಗೆ ತೆರಳಿ, ಅಲ್ಲಿಂದ ಅಮೆರಿಕಕ್ಕೆ ಪ್ರಯಾಣ ಬೆಳೆಸಿದ್ದಾರೆ ಎಂಬ ನಂಬಲರ್ಹ ಮಾಹಿತಿ ಲಭ್ಯವಾಗಿದೆ. ಈ ನಡುವೆ, ಇಡೀ ತನಿಖೆಯ ನಡೆ ಹಾಗೂ ಪ್ರಗತಿಯ



ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಅಸಮಾಧಾನ ಹೊರಹಾಕಿದ್ದರು. ಸಿದ್ದರಾಮಯ್ಯ ಅವರ ಅಸಮಾಧಾನದ ಹಿನ್ನೆಲೆಯಲ್ಲಿ ಪೊಲೀಸರು ಎಲ್ಲಿ ತಮ್ಮನ್ನು ಬಂಧಿಸಬಹುದೋ ಎಂಬ ಭೀತಿಯಿಂದಾಗಿ, ಕೃಪಾ ಆಳ್ವ ಅವರು ಮುಂಜಾಗ್ರತೆಯಾಗಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸದೆಯೇ ತಡಬಡಿಯಾಗಿ ವಿದೇಶಕ್ಕೆ ತೆರಳಿದ್ದಾರೆ ಎನ್ನಲಾಗಿದೆ. ಕೃಪಾ ಆಳ್ವ ಅವರಿಗೆ ನೋಟಿಸ್ ನೀಡುವಂತೆ ಕೆಪಿಸಿಸಿಯಿಂದಲೂ ಸೂಚನೆ ಬಂದಿತ್ತಾದರೂ, ಇದುವರೆಗೂ ಕೆಪಿಸಿಸಿಯಿಂದ ಯಾವುದೇ ಅಧಿಕೃತ

# ರಾಷ್ಟ್ರೀಯ ಏಕತೆಯ ಸಂದೇಶ ಸಾರುವ ಸ್ಪಿರಿಟ್ ಆಫ್ ಯೂನಿಟಿ ಸಂಗೀತೋತ್ಸವಕ್ಕೆ ನ್ಯಾ.ಶಿವಶಂಕರೇಗೌಡ ನಾಳೆ ಚಾಲನೆ

**ಬೆಂಗಳೂರು, ಅ.29:** ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಶ್ರೀ ಶಿವಶಂಕರೇಗೌಡ ಅವರು ಶನಿವಾರ ಸಂಜೆ ಸಂಗೀತದ ಮೂಲಕ ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಿರುವ ಎರಡು ದಿನಗಳ ಸ್ಪಿರಿಟ್ ಆಫ್ ಯೂನಿಟಿ ಸಂಗೀತೋತ್ಸವವನ್ನು ಉದ್ಘಾಟಿಸಲಿದ್ದಾರೆ.

ಬಸವ ಸಮಿತಿಯ ಪತ್ರಿಕಾ ಪ್ರಕಟಣೆಯ ಪ್ರಕಾರ, ಅಕ್ಟೋಬರ್ 31ರ ಶನಿವಾರ ಸಂಜೆ 5 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ.

ಸಂಜೆ 5.30ಕ್ಕೆ ಖ್ಯಾತ ಸಂಗೀತ ಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಮರಿಮೊಮ್ಮಕ್ಕಳಾದ ಎಸ್. ಐಶ್ವರ್ಯ ಮತ್ತು ಕುಮಾರಿ ಎಸ್. ಸೌಂದರ್ಯ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಬಳಿಕ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪಂಡಿತ್ ವಿನಾಯಕ ತೋರ್ವಿ ಅವರು ಸಂಗೀತ ಪ್ರಸ್ತುತಿ ನೀಡಲಿದ್ದಾರೆ.

ನವೆಂಬರ್ 1ರ ಭಾನುವಾರ ಬೆಳಿಗ್ಗೆ 10.30ಕ್ಕೆ ಉಸ್ತಾದ್ ರಯೀಸ್ ಮತ್ತು ಉಸ್ತಾದ್ ಹಫೀಜ್ ಬಾಲೆ ಖಾನ್ ಅವರು ಸಿತಾರ್ ಜುಗಲ್‌ಬಂದಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ನಂತರ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಿ. ಮುದ್ದು




ಮೋಹನ್ ಮತ್ತು ಪಂಡಿತ್ ಕುಮಾರ ಗಂಧರ್ವ ಅವರ ಮೊಮ್ಮಗ ಪಂಡಿತ್ ಭುವನೇಶ್ ಕೊಂಕಾಳಿ ಅವರು ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಸವ ಸಮಿತಿ ಮತ್ತು ಸ್ವರ ಫೌಂಡೇಶನ್ ಜಂಟಿಯಾಗಿ ಆಯೋಜಿಸಿರುವ ಈ ಎರಡು ದಿನಗಳ ಸಂಗೀತೋತ್ಸವವು ಬೆಂಗಳೂರಿನ ಹೈಗ್ರೌಂಡ್ಸ್‌ನಲ್ಲಿರುವ ಬಸವ ಸಮಿತಿಯ ಅನುಭವ ಮಂಟಪ ಸಭಾಂಗಣದಲ್ಲಿ ನಡೆಯಲಿದೆ.

# ಕೆಯುಡಬ್ಲ್ಯೂಜೆ ವತಿಯಿಂದ ಅಗಲಿದ ಪತ್ರಕರ್ತರಿಗೆ ನುಡಿ ನಮನ




**ಬೆಂಗಳೂರು, ಅ. 29:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ವತಿಯಿಂದ ಇತ್ತೀಚೆಗೆ ನಿಧನರಾದ ಶಿವಮೊಗ್ಗದ ಹಿರಿಯ ಪತ್ರಕರ್ತ ಬಂಡಿಗಡಿ ನಂಜುಂಡಪ್ಪ ಹಾಗೂ ಚಾಮರಾಜ ನಗರದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಸಿ.ಆರ್.ವೆಂಕಟರಾವ್ ಅವರಿಗೆ ನುಡಿ ನಮನ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.

ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ನಮ್ಮೊಂದಿಗೆ ಇದ್ದು ಇಂದು ಅಗಲಿರುವ ಪತ್ರಕರ್ತ ಸ್ನೇಹಿತರನ್ನು ಸ್ಮರಿಸಿ, ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಒಂದು ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸುವ ಸಂಪ್ರದಾಯವನ್ನು ರಾಜ್ಯ ಸಂಘ ಮುಂದುವರಿಸಿಕೊಂಡು ಬರುತ್ತಿದೆ ಎಂದರು.

ಹಿರಿಯ ಪತ್ರಕರ್ತ ಬಂಡಿಗಡಿ ನಂಜುಂಡಪ್ಪ ಅವರು ರಾಜ್ಯ ಸಂಘದೊಂದಿಗೆ ನಿರಂತರ ಸಂಪರ್ಕ ಹೊಂದಿದ್ದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹಾಗೂ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಅವರು ಸಂಘದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರಿಗೆ ತಡವಾಗಿಯಾದರೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು ಸಂತಸ ತಂದಿತ್ತು. ಇಂದು ಅವರು ನಮ್ಮೊಂದಿಗಿಲ್ಲವಾದರೂ ಸಂಘಕ್ಕೆ ಅವರು ನೀಡಿದ ಕೊಡುಗೆಯನ್ನು ಸದಾ ಸ್ಮರಿಸಬೇಕು ಎಂದು ಹೇಳಿದರು.

ಚಾಮರಾಜನಗರದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಸಿ.ಆರ್. ವೆಂಕಟರಾವ್ ಅವರೂ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಇಬ್ಬರೂ ಹಿರಿಯ ಪತ್ರಕರ್ತರ ಆತ್ಮಕ್ಕೆ ಭಗವಂತ ಸದ್ಗತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಮಾತನಾಡಿ, ಬಂಡಿಗಡಿ ನಂಜುಂಡಪ್ಪ ಅವರು ಇತ್ತೀಚಿನವರೆಗೂ ರಾಜ್ಯ ಸಂಘದೊಂದಿಗೆ ನಿಕಟ ಒಡನಾಟ ಹೊಂದಿದ್ದರು.

ಶಿವಮೊಗ್ಗದ ಕೆಲವು ಪತ್ರಕರ್ತರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಬೇರೆ ಬೇರೆ ಸಂಘಗಳ ಹಾದಿ ಹಿಡಿದ ಸಂದರ್ಭದಲ್ಲಿಯೂ ನಂಜುಂಡಪ್ಪ ಅವರು ನಮ್ಮ ಸಂಘದೊಂದಿಗಿನ ನಿಷ್ಠೆಯನ್ನು ಉಳಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಪ್ರಜಾವಾಣಿ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಸಿ.ಆರ್. ವೆಂಕಟರಾವ್ ಅವರು ಎಲ್ಲರೊಂದಿಗೂ ಆತ್ಮೀಯವಾಗಿ ಬೆರೆಯುತ್ತಿದ್ದರು. ಅವರ ಸೇವೆ ಮತ್ತು ಒಡನಾಟವನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಹಿರಿಯ ಪತ್ರಕರ್ತರಾದ ಶಿವಾನಂದ್ ಮತ್ತು ಶಶಿಕಲಾ ಅವರು ಅಗಲಿದ ಪತ್ರಕರ್ತರೊಂದಿಗಿನ ಒಡನಾಟ ಹಾಗೂ ಅವರ ಸೇವೆಯನ್ನು ಸ್ಮರಿಸಿ ನುಡಿ ನಮನ ಸಲ್ಲಿಸಿದರು.

# ಅಪ್ಪು ಸಮಾಧಿಗೆ ಕುಟುಂಬದವರಿಂದ ವಿಶೇಷ ಪೂಜೆ

**ಬೆಂಗಳೂರು, ಅ.29:** ಪವರ್‌ಸ್ಟಾರ್ ಡಾ. ಪುನೀತ್ ರಾಜ್‌ಕುಮಾರ್ ಅವರ 5ನೇ ವರ್ಷದ ಪುಣ್ಯಸರಣೆ ಯನ್ನು ರಾಜ್ಯಾದ್ಯಂತ ಆಚರಿಸಲಾ ಗುತ್ತಿದೆ.

2021 ಅ.29 ರಂದು ದೊಡ್ಮನೆ ಮಗ ಪುನೀತ್‌ರಾಜ್‌ಕುಮಾರ್ ಅವರು ಅಭಿಮಾನಿಗಳನ್ನು ಅಗಲಿ ಇಂದಿಗೆ ಐದು ವರ್ಷ. ನಗರದ ಕಂಠೀರವ ಸ್ಟುಡಿಯೋದಲ್ಲಿರುವ ಅಪ್ಪು ಸಮಾಧಿಗೆ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ರಾಜಕುಮಾರ್ ಕುಟುಂಬದ ಸದಸ್ಯರು ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಮತ್ತು ಪುಷ್ಪ ನಮನ ಸಲ್ಲಿಸಿದ್ದಾರೆ.

ಕುಟುಂಬದವರೆಲ್ಲ ಮುದ್ದಿನ ತಮನಿಗೆ ಇಷ್ಟದ ಅಡುಗೆ ಮಾಡಿ ಎಡೆ ಇಟ್ಟಿದ್ದಾರೆ. ಬಣ್ಣ ಬಣ್ಣದ ಹೂಗಳಿಂದ ನಗುಮುಖದ ಒಡೆಯನ ಸಮಾಧಿ ಅಲಂಕಾರಗೊಂಡಿದೆ. ಅಭಿಮಾನಿಗಳೆಲ್ಲಾ ಹೂಗಳನ್ನ ನೀಡಿ ಅಪ್ಪು ಅವರನ್ನ ಸರಿಸಿದರು. ಕರ್ನಾಟಕದ ಮೂಲೆ ಮೂಲೆಯಿಂದ ಸಾವಿರಾರು ಅಭಿಮಾನಿಗಳು ಕಂಠೀರವ ಸ್ಟುಡಿಯೋಗೆ ಆಗಮಿಸಿ ತಮ ನೆಚ್ಚಿನ ನಟನಿಗೆ ನಮನ ಸಲ್ಲಿಸಿದರು. ಅಪ್ಪು ಅವರ ಸರಣಾರ್ಥ ರಾಜ್ಯದ ವಿವಿಧ ಜಿಲ್ಲೆಗಳಲ್ಲೂ ಅಭಿಮಾನಿಗಳು ಬೆಳಗ್ಗೆಯಿಂದಲೇ ವಿವಿಧ ದೇವಾಲಯಗಳಲ್ಲಿ ಪೂಜಾ ಕಾರ್ಯಕ್ರಮಗಳು, ಅನ್ನದಾನ ಸೇರಿದಂತೆ ಹಲವು ಸಮಾಜಸೇವಾ ಕಾರ್ಯಗಳನ್ನು ಹಮಿಕೊಂಡಿದ್ದಾರೆ.



ರಾಜ್ಯದ ಪ್ರಮುಖ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಲ್ಲಿ ಪುನೀತ್ ನಟನೆಯ ಸೂಪರ್ ಹಿಟ್ ಚಿತ್ರಗಳಾದ ಅಪ್ಪು, ಅರಸು, ಮಿಲನ, ರಾಜಕುಮಾರ ಮತ್ತು ಅವರ ಕೊನೆಯ ಸಾಕ್ಷ್ಯ ಚಿತ್ರ ಗಂಧದ

# ನ.1ರ ಇಂಡಿಯಾ ಒಕ್ಕೂಟದ ರ‍್ಯಾಲಿಗೆ ಪೀಪಲ್ ಎಗೆನೆಸ್ಟ್ ಎಸ್‌ಐಆರ್ ಒಕ್ಕೂಟ ಬೆಂಬಲ

**ಬೆಂಗಳೂರು, ಅ.29:** ಎಸ್‌ಐಆರ್ ರದ್ದುಪಡಿಸುವುದು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್‌ರನ್ನು ಪದಚ್ಯುತಗೊಳಿಸಿ ಕ್ರಮ ಕೈಗೊಳ್ಳುವುದು ಹಾಗೂ ಪ್ರಜಾಪ್ರಭುತ್ವದ ರಕ್ಷಣೆಗಾಗಿ ನ.1ರಂದು ದಿಲ್ಲಿಯ ರಾಮಲೀಲಾ ಮೈದಾನದಲ್ಲಿ ಇಂಡಿಯಾ ಒಕ್ಕೂಟ ಆಯೋಜಿಸಿರುವ ರ‍್ಯಾಲಿಗೆ ಪೀಪಲ್ ಎಗೆನೆಸ್ಟ್ ಎಸ್‌ಐಆರ್–ಒಕ್ಕೂಟ ಬೆಂಬಲ ವ್ಯಕ್ತಪಡಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಎದ್ದೇಳು ಕರ್ನಾಟಕದ ಪದಾಧಿಕಾರಿ ತಾರಾರಾವ್, ಎಲ್ಲ ರಾಜಕೀಯ ಪಕ್ಷಗಳು ಮತ್ತು ನಾಗರಿಕರು ಪಕ್ಷಾತೀತವಾಗಿ ಒಗ್ಗೂಡಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಕ್ಷಿಸಲು ಹೋರಾಡಬೇಕು. ಮತದಾರರ ಪಟ್ಟಿಯ ಸಮಗ್ರತೆ ಕಾಪಾಡುವುದು, ಮತಗಳ ಅಕ್ರಮ ತಡೆಯುವುದು, ಕಾಗದದ ಮತಪತ್ರ ಪದ್ಧತಿ ಮರುಸ್ಥಾಪನೆ, ಚುನಾವಣಾ ನಿಧಿಯ ಪರಿಶೀಲನೆ, ಮಾದರಿ ನೀತಿ ಸಂಹಿತೆ ಸುಧಾರಣೆ ಸೇರಿದಂತೆ ವಿವಿಧ ಹಕ್ಕೊತ್ತಾಯಗಳನ್ನು ಈಡೇರಿಸಬೇಕು. ಶಾಂತಿಯುತ ಪ್ರತಿಭಟನೆ ನಡೆಸುವುದು ನಾಗರಿಕರ ಮೂಲಭೂತ ಹಕ್ಕಾಗಿದೆ.



ಆದರೆ, ಮೋದಿ–ಶಾ ಆಡಳಿತವು ಪ್ರತಿಭಟನೆಗಳನ್ನು ಹತ್ತಿಕ್ಕುತ್ತಿದೆ.

ಜಂತರ್ ಮಂತರ್‌ನ್ನು ಶಾಂತಿಯುತ ಪ್ರತಿಭಟನೆಗಳ ಸ್ಥಳವಾಗಿ ಗುರುತಿಸುವ ಅಧಿಸೂಚನೆ ರದ್ದುಪಡಿಸಿರುವುದನ್ನು ಕೂಡಲೇ ಹಿಂಪಡೆಯಬೇಕು. ಚುನಾವಣಾ ಆಯೋಗವು ಸಂಸತ್ತಿನ ಶಾಸನಬದ್ಧ ಅಧಿಕಾರಗಳನ್ನು ಮೀರಿ ನಡೆದುಕೊಂಡಿದೆ.

ಎಸ್‌ಐಆರ್ ಮೂಲಕ ಮತದಾರರ ಹೆಸರುಗಳನ್ನು ತೆಗೆದು ಹಾಕಿರುವ ಪ್ರಕ್ರಿಯೆಯು ಚುನಾವಣಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಮತದಾರರ ಹೆಸರುಗಳ ಅಳಿಸುವಿಕೆಯಿಂದ ಬಿಜೆಪಿ ಚುನಾವಣಾ ಲಾಭ ಪಡೆದಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುವ ಬದಲು ಕೇಂದ್ರ ಸರ್ಕಾರವು ಚುನಾವಣಾ ಆಯೋಗದ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿದೆ.

ಪ್ರಸ್ತುತ ಸಾಂವಿಧಾನಿಕ ಬಿಕ್ಕಟ್ಟನ್ನು ಎದುರಿಸಲು ಎಲ್ಲ ನಾಗರಿಕರು, ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಹೋರಾಡಬೇಕು. ರಾಜಕೀಯ ನಿಲುವುಗಳನ್ನು ಮೀರಿ ಪ್ರಜಾಪ್ರಭುತ್ವ, ಸಂವಿಧಾನ ಮತ್ತು ನಾಗರಿಕರ ಚುನಾವಣಾ ಹಕ್ಕುಗಳ ರಕ್ಷಣೆಗಾಗಿ ನಡೆಯುವ ಎಲ್ಲ ಹೋರಾಟಗಳಿಗೆ ಬೆಂಬಲ ನೀಡಬೇಕು ಎಂದು ಕರೆ ನೀಡಿದ್ದಾರೆ.

# 2026–27ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ 1, 2ರ ವೇಳಾಪಟ್ಟಿ ಪ್ರಕಟ

**ಬೆಂಗಳೂರು, ಅ.29:** 2026–27ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1 ಮತ್ತು ಪರೀಕ್ಷೆ–2ರ ಅಂತಿಮ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಗುರುವಾರ ಪ್ರಕಟಿಸಿದೆ. ಪರೀಕ್ಷೆಗಳು ಬೆಳಗ್ಗೆ 10:00 ಗಂಟೆಯಿಂದ ಆರಂಭಗೊಳ್ಳಲಿದೆ.

**ದ್ವಿತೀಯ ಪಿಯು ಪರೀಕ್ಷೆ –1:** ಫೆ.2: ಕನ್ನಡ, ಅರೇಬಿಕ್, ಮಾ.1: ಇಂಗ್ಲಿಷ್, ಮಾ.2: ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಾ.3: ಭೂಗೋಳ ಶಾಸ್ತ್ರ , ಮನಃಶಾಸ್ತ್ರ, ಮಾ.4: ಸಮಾಜಶಾಸ್ತ್ರ , ಭೌತಶಾಸ್ತ್ರ, ಮಾ.5: ಲೆಕ್ಕ ಶಾಸ್ತ್ರ, ಮಾ.8: ರಸಾಯನ ಶಾಸ್ತ್ರ , ಶಿಕ್ಷಣ ಶಾಸ್ತ್ರ , ಮೂಲ ಗಣಿತ (75), ಮಾ.9: ಅರ್ಥಶಾಸ್ತ್ರ , ಭೂಗರ್ಭಶಾಸ್ತ್ರ, ಮಾ.11: ಹಿಂದುಸ್ತಾನಿ ಸಂಗೀತ, ಎಲೆಕ್ಟ್ರಾನಿಕ್ಸ್ ಮತ್ತು ಯಂತ್ರಾಂಶ, ಉಡುಪುಗಳ ತಯಾರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಆರೋಗ್ಯ ರಕ್ಷಣೆ, ಬ್ಯೂಟಿ ಅಂಡ್ ವೆಲ್‌ನೆಸ್, ಮಾ.12: ವ್ಯವಹಾರ ಅಧ್ಯಯನ, ಗಣಿತ, ಮಾ.13: ಐಚ್ಛಿಕ ಕನ್ನಡ , ತರ್ಕಶಾಸ್ತ್ರ, ಗೃಹವಿಜ್ಞಾನ, ಮಾ.15: ರಾಜ್ಯಶಾಸ್ತ್ರ, ಜೀವಶಾಸ್ತ್ರ , ಗಣಕ ವಿಜ್ಞಾನ, ಮಾ.16: ಸಂಖ್ಯಾಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಮಾ.17: ಹಿಂದಿ, ಮಾ.18: ಇತಿಹಾಸ.

**ದ್ವಿತೀಯ ಪಿಯು ಪರೀಕ್ಷೆ–2:** ಮೇ 3: ಕನ್ನಡ, ಅರೇಬಿಕ್, ಮೇ 4: ಲೆಕ್ಕಶಾಸ್ತ್ರ , ಜೀವಶಾಸ್ತ, ಭೂಗರ್ಭಶಾಸ್ತ್ರ , ವಿದ್ಯುನ್ಮಾನಶಾಸ್ತ್ರ, ಮೇ 5: ರಾಜ್ಯಶಾಸ್ತ್ರ, ಗಣಕ ವಿಜ್ಞಾನ, ಮೇ 6: ಇತಿಹಾಸ, ರಸಾಯನ ಶಾಸ್ತ್ರ, ಮೇ 7: ವ್ಯವಹಾರ ಅಧ್ಯಯನ, ಮನಃಶಾಸ್ತ್ರ, ಶಿಕ್ಷಣಶಾಸ್ತ್ರ, ಮೇ 8: ಐಚ್ಛಿಕ ಕನ್ನಡ, ಭೌತಶಾಸ್ತ್ರ, ಮೂಲ ಗಣಿತ, ಮೇ 10: ಅರ್ಥಶಾಸ್ತ್ರ, ಗಣಿತ, ಮೇ 11: ಹಿಂದಿ, ಮೇ 12: ಇಂಗ್ಲಿಷ್, ಮೇ 13: ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ, ಮೇ 14: ತರ್ಕಶಾಸ್ತ್ರ, ಭೂಗೋಳಶಾಸ್ತ್ರ, ಗೃಹವಿಜ್ಞಾನ, ಮೇ 15: ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಹಿಂದುಸ್ತಾನಿ ಸಂಗೀತ, ಎಲೆಕ್ಟ್ರಾನಿಕ್ಸ್ ಮತ್ತು ಯಂತ್ರಾಂಶ, ಉಡುಪುಗಳ ತಯಾರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಆರೋಗ್ಯ ರಕ್ಷಣೆ, ಬ್ಯೂಟಿ ಅಂಡ್ ವೆಲ್‌ನೆಸ್.

ಅದೇರೀತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1 ಮಾರ್ಚ್ 22ರಿಂದ ಏಪ್ರಿಲ್ 5ರವರೆಗೆ ಹಾಗೂ ಪರೀಕ್ಷೆ–2 ಮೇ 24ರಿಂದ ಮೇ 31ರವರೆಗೆ ನಡೆಯಲಿದೆ.

# ಗಡಿಭಾಗದ ಪತ್ರಿಕೆಗಳಿಗೆ ನೀಡುತ್ತಿದ್ದ ವಿಶೇಷ ಜಾಹೀರಾತು ರದ್ದು: ಕರ್ನಾಟಕ ಗಡಿ ಪತ್ರಿಕೆಗಳ ಸಂಪಾದಕರ ಸಂಘ ಕಳವಳ

**ಬೆಂಗಳೂರು, ಅ.29:** ಕನ್ನಡ ಭಾಷೆ, ಕನ್ನಡಿಗರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳು ಗಡಿ ಜಿಲ್ಲೆಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂದರ್ಭದಲ್ಲೇ ಗಡಿ ಬಾಗದ ಕನ್ನಡ ದಿನ ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿದ್ದ ವಿಶೇಷ ಜಾಹೀರಾತನ್ನು ಪರಿಷ್ಕೃತ ಜಾಹೀರಾತು ನೀತಿ–2026ರಲ್ಲಿ ರದ್ದು ಮಾಡಿರುವುದು ಅವೈಜ್ಞಾನಿಕ ಮತ್ತು ಆಘಾತಕಾರಿ ಸಂಗತಿ ಎಂದು ಕರ್ನಾಟಕ ಗಡಿ ಪತ್ರಿಕೆಗಳ ಸಂಪಾದಕರ ಸಂಘ ಕಳವಳ ವ್ಯಕ್ತಪಡಿಸಿದೆ.




ನಗರದ ಗಾಂಧಿ ಭವನದಲ್ಲಿ ನಡೆದ ಸಂಪಾದಕರ ಸಂಘದ ಸಭೆಯಲ್ಲಿ ಪರಿಷ್ಕೃತ ಜಾಹೀರಾತು ನೀತಿ –2026 ಕುರಿತು ಗಹನವಾಗಿ ಚರ್ಚೆ ನಡೆಸಲಾಯಿತು. ಬಳಿಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಂದಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಂಘದ ಸಂಚಾಲಕರು ಮನವಿ ಪತ್ರ ಸಲ್ಲಿಸಿದರು.

2013–14 ರ ಜಾಹೀರಾತು ನೀತಿಯಲ್ಲಿದ್ದ ಗಡಿಭಾಗದ ಜಾಹೀರಾತನ್ನು ಪರಿಷ್ಕೃತ ಜಾಹೀರಾತು ನೀತಿ–2026ರಲ್ಲಿ ರದ್ದು ಮಾಡಲು ಹೊರಟಿರುವ ಸರ್ಕಾರದ ಧೋರಣೆಯನ್ನು ಖಂಡಿಸಿದೆ. ಗಡಿ ಭಾಗದಲ್ಲಿ ಪ್ರಕಟವಾಗುವ ಕನ್ನಡ ದಿನ ಪತ್ರಿಕೆಗಳಿಗೆ ಪ್ರತಿ ತಿಂಗಳು ಒಂದು ಪುಟ ವಿಶೇಷ ಜಾಹೀರಾತು ನೀಡುವ ಮುಖಾಂತರ ಗಡಿ ಭಾಗದ ಜಿಲ್ಲೆಗಳಲ್ಲಿ ಕನ್ನಡ ಭಾಷೆ ಬೆಳವಣಿಗೆ ಮತ್ತು ಕನ್ನಡಿಗರ ಮೇಲೆ ನಡೆಯುವ ದೌರ್ಜನ್ಯವನ್ನು ನಿಯಂತ್ರಿಸಲು ಸಾಧ್ಯವಾಗಿದೆ. ಇಂದಿಗೂ ಕನ್ನಡ ಭಾಷೆಯ ದಿನ ಪತ್ರಿಕೆಗಳು ಮತ್ತು ಕನ್ನಡ ಪರ ಸಂಘಟನೆಗಳ ಪ್ರಬಲ ಹೋರಾಟಗಳು ಇಲ್ಲದೆ ಹೋಗಿದ್ದರೆ ಯಾವತ್ತೋ ಕನ್ನಡ ಭಾಷೆಗೆ ಕುತ್ತು ಬರುತ್ತಿತ್ತು ಮತ್ತು ಪರ ಭಾಷೆಗಳು ತಮ್ಮ ಅಧಿಪತ್ಯ ಸ್ಥಾಪನೆ ಮಾಡುತ್ತಿದ್ದವು, ಈ ಎಚ್ಚರಿಕೆ ಸದಾ ಸರ್ಕಾರಕ್ಕೆ ಇರಬೇಕು ಎಂದು ಸಂಘ ಹೇಳಿದೆ.

ಕೋವಿಡ್ ನಂತರದಲ್ಲಿ ಮುದ್ರಣಕ್ಕೆ ಬಳಸುವ ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದ್ದು, ವಿದ್ಯುತ್ ದುಬಾರಿಯಾಗಿದೆ. ಇಂತಹ ಕಷ್ಟದ ಸಮಯದಲ್ಲಿ ಪ್ರಸ್ತುತ ಜಾರಿಯಲ್ಲಿದ್ದ ಜಾಹೀರಾತು ದರ ಶೇ.12%ರಿಂದ ಶೇ.6%ಕ್ಕೆ ಇಳಿಸಲಾಗಿದೆ. ಸಹಜವಾಗಿ ಪರಿಷ್ಕೃತ ಜಾಹೀರಾತು ನೀತಿ–2026ರಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಉಳಿವಿಗಾಗಿ ಜಾಹೀರಾತು ದರ ಶೇ.18% ರಷ್ಟಾದರೂ ಹೆಚ್ಚಿಸಬೇಕಿತ್ತು. ಬದಲಿಗೆ ಪ್ರಸ್ತುತ ಜಾರಿಯಲ್ಲಿದ್ದ ದರವನ್ನೇ ಕಡಿಮೆ ಮಾಡಿರುವುದು ಪತ್ರಿಕೆಗಳ ಕತ್ತು ಹಿಸುಕುವ ಕೆಲಸವಾಗಿದೆ ಎಂದಿದೆ.

ಜಾಹೀರಾತು ನೀತಿ–2013 ರಲ್ಲಿರುವಂತೆ ಗಡಿಭಾಗದ ಒಂದು ಪುಟ ಜಾಹೀರಾತನ್ನು ಪರಿಷ್ಕೃತ ನೀತಿಯಲ್ಲೂ ಮುಂದುವರೆಸಬೇಕು. ಪ್ರತಿ ಎರಡು ವರ್ಷಕ್ಕೊಮ್ಮೆ ಹೆಚ್ಚಿಸುವ ಜಾಹೀರಾತು ದರ ಶೇ.18% ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದೆ. ಸಭೆಯಲ್ಲಿ ಬೆಳಗಾವಿ, ವಿಜಯಪುರ, ಬೀದರ್, ರಾಯಚೂರು, ಯಾದಗಿರಿ, ಉತ್ತರ ಕನ್ನಡ, ಮಂಗಳೂರು (ದಕ್ಷಿಣ ಕನ್ನಡ), ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳ ಕರ್ನಾಟಕ ಗಡಿ ಪತ್ರಿಕೆಗಳ ಸಂಪಾದಕರ ಸಂಘ ಸಂಚಾಲಕರು ಪಾಲ್ಗೊಂಡಿದ್ದರು.



ಚಾಮರಾಜನಗರದಲ್ಲಿ ಗುರುವಾರ ನಡೆದ ಗಣೇಶ ವಿಸರ್ಜನಾ ಮೆರವಣಿಗೆಯು ಜನರ ಗಮನ ಸೆಳೆಯಿತು.

## ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

# ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಆದ್ಯತೆ: ಡಾ.ಮಸೂತಿ ಆಗ್ರಹ



**ಕಲಬುರಗಿ, ಅ. 29:** ನಮ್ಮ ಭಾಷೆ ಸಂಸ್ಕೃತಿ ನಮ್ಮ ಜೀವನದ ಅಸ್ಮಿತೆಯಗಲಿ. ಮಾತೃಭಾಷಾ ಶಿಕ್ಷಣದಿಂದ ಉನ್ನತ ಶಿಕ್ಷಣದ ಮೌಲ್ಯ ಹೆಚ್ಚಿಸಬೇಕು. ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಬೇಕು. ಹಾಗೂ ಕೈಗಾರೀಕರಣ ವ್ಯವಸ್ಥೆ ಜಾರಿಯಾಗಬೇಕು ಎಂದು ಹಿರಿಯ ಸಾಹಿತಿ, ಕನ್ನಡ ಸಾಹಿತ್ಯ ಪರಿಷತ್ ಸರ್ವಾಧ್ಯಕ್ಷ ಡಾ. ನಾಗೇಂದ್ರ ಮಸೂತಿ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ವಿಶ್ವೇಶ್ವರಯ್ಯ ಭವನದಲ್ಲಿ ಹಮ್ಮಿಕೊಂಡ ಎರಡು ದಿನಗಳ ಕಾಲ ಜಿಲ್ಲಾ 23 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯತೆಯನ್ನು ವಹಿಸಿ ಮಾತನಾಡಿದ ಅವರು, ಆ ಮೂಲಕ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕು. ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ದೊರೆಯಬೇಕು. ಈಭಾಗದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತಿಳಿಸಿ ಹೇಳುವ ಕಾರ್ಯ ಆಗಬೇಕಾಗಿದೆ. ನಿರ್ಲಕ್ಷ್ಯಕ್ಕೊಳಪಟ್ಟ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯ ವೇಗ ಹೆಚ್ಚಿಸಬೇಕು. ಕನ್ನಡಕ್ಕೆ ಮೊಟ್ಟ ಮೊದಲ ಲಾಕ್ಷಣಿಕ ಗ್ರಂಥ ಕೊಟ್ಟಿದ್ದ ಈ ನೆಲದ ಹಿರಿಮೆ ಎತ್ತಿ ಹಿಡಿದೆ. ಜನಪದರು ಕಟ್ಟಿಕೊಡುವ ಸಿರಿ ಸಂಪತ್ತಿನ ನಾಡನ್ನು ಗೌರವದಿಂದ ಕಾಣಬೇಕಾಗಿದೆ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಡಾ. ಚೆನ್ನವೀರ ಶಿವಾಚಾರ್ಯರು, ಸಮಾಜಕ್ಕೆ ಕಣ್ಣಾಗಿ, ಮನಸ್ಸಿನ ಭಾವನೆಗಳಿಗೆ ಧ್ವನಿಯಾಗಿ ಮತ್ತು ಬದುಕಿನ ಹಾದಿಗೆ ಬೆಳಕಾಗಿ ಸಾಹಿತ್ಯವು ಸದಾ ಜೀವಂತವಾಗಿರುತ್ತದೆ. ನಾಡು–ನುಡಿ ಕಟ್ಟುವ ಪ್ರಬುದ್ಧ ಮನಸ್ಸುಗಳಿಂದ ಈ ಕನ್ನಡ ನಾಡನ್ನು ಬಹು ಎತ್ತರಕ್ಕೆ ಕೊಂಡೊಯ್ಯಬಹುದು. ಮುಂಜಾನೆದ್ದು ಕನ್ನಡಮ್ಮನನ್ನು ನೆನಪಿಸಿ, ಧ್ಯಾನಿಸಿ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳ ಬೇಕು. ಆ ಮೂಲಕ ಕನ್ನಡಿಗರ ಮನಸ್ಸು ಅರಳಿಸಬೇಕು. ಕಳೆದ ಐದು ವರ್ಷಗಳಿಂದ ಜಿಲ್ಲಾ ಕನ್ನಡ ಪರಿಷತ್ ನಿರಂತರ ಕನ್ನಡಪರ ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗಿದೆ ಎಂದರು.

ಪರಿಷತ್ ಜಿಲ್ಲಾ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರು ಆಶಯ ನುಡಿಗಳನ್ನಾಡಿ, ಇಂದಿನ ಸಮಾಜದಲ್ಲಿ ಮನೆ ಮಾಡಿರುವ ಮೂಢನಂಬಿಕೆಗಳು, ಮೌಢ್ಯಯತೆ ಹಗೂ ಸಾಮಾಜಿಕ ಅಸಮಾನತೆ ಎಂಬ ಅಂಯಿಧಕಾರವನ್ನು ಹೋಗಲಾಡಿಸಲು ಸಾಹಿತ್ಯ ಜ್ಞಾನದ ಬೆಳಕು ಕೊಡುವುದರ ಜತೆಗೆ ಹೊಸ ಚೈತನ್ಯವನ್ನೂ ಸಹ ನೀಡುತ್ತದೆ. ನನ್ನ 5 ವರ್ಷದ ಅವಧಿಯಲ್ಲಿ ಹದಿನಾರು ವಿಶೇಷ ಸಮ್ಮೇಳನಗಳು, ಆರು ಜಿಲ್ಲಾ ಸಮ್ಮೇಳನಗಳು ಮಾಡುವ ಮೂಲಕ ರಾಜ್ಯದಲ್ಲೇ ದಾಖಲೆ ಮಾಡಿದಂತಾಗಿದೆ. ನಮ್ಮಲ್ಲಿನ ಹುಮ್ಮಸ್ಸು ಮುಂದೆಯೂ ಸಹ ಕನ್ನಡದ ರಥವನ್ನು ಎಳೆಯುವ ಉತ್ಸಾಹದಲ್ಲಿದ್ದೇವೆ. ಇದಕ್ಕೆ ಜಿಲ್ಲೆಯ ಜನರು ಸಹಕರಿಸುತ್ತಿರುವುದು ನಮ್ಮಲ್ಲಿನ ಹುಮ್ಮಸ್ಸು ಇಮ್ಮಡಿಗೊಂಡಂತಾಗಿದೆ ಎಂದರು.

ಹಿರಿಯ ಸಾಹಿತಿ ಡಾ. ಕಲ್ಯಾಣಿರಾವ ಪಾಟೀಲ ಅಧ್ಯಕ್ಷತೆಯಲ್ಲಿ ಕನ್ನಡ ಕಾವ್ಯ ಪರಂಪರೆ ಮತ್ತು ಮೌಲ್ಯಗಳು ಕುರಿರಿತು ಡಾ. ಶ್ರೀಶೈಲ ನಾಗರಾಳ, ಕನ್ನಡ ಸಾಹಿತ್ಯ ವಿಕಾಸದಲ್ಲಿ ಕಥೆ–ಕಾದಂಬರಿಗಳ ಪಾತ್ರ ಕುರಿತು ಡಾ. ಕೆ.ಎಸ್. ನಾಯಕ, ಮಹಿಳಾ ವಿಕಾಸ ಮುನ್ನೋಟ ಕುರಿರಿತು ಡಾ. ಜಯದೇವಿ ಗಾಯಕವಾಡ ಮಾತನಾಡಿದರು. ಸೈಯ್ಯದ್ ಎಸ್. ಜೆ. ಇನಾಮದಾರ, ಜಯಶ್ರೀ ಜಮಾದಾರ, ಪೂಜಾ ಬಂಕಲಗಿ ವೇದಿಕೆ ಮೇಲಿದ್ದರು. ಅನೇಕ ಸೇವಾಮುಖಿಗಳಿಗೆ ಸೇವಾ ಕಲಾ ಕೌಶಲ್ಯ ಗೌರವ ಪುರಸ್ಕಾರ ನೀಡಿ ಸತ್ಕರಿಸಲಾಯಿತು. ಸಾಹಿತಿ ಡಾ. ಚಿ.ಸಿ. ನಿಂಗಣ್ಣ ಅಧ್ಯಕ್ಷತೆಯಲ್ಲಿ ನೋಡು ಕನ್ನಡ ಹಾಡು ಕವಿಗೋಷ್ಠಿ ಯಲ್ಲಿ ಜಿಲ್ಲೆಯ ಅನೇಕ ಕವಿಗಳು ಪ್ರಚಲಿತ ವಿದ್ಯಮಾನಗಳ ಮೇಲೆ ಚೆಲ್ಲುವ ಮೂಲಕ ಪ್ರೇಕ್ಷಕರ ಗಮನ ಸೆಳೆದರು. ಪತ್ರಕರ್ತ ರಾಜಕುಮಾರ ಬಿ ಉದನೂರ ಆಶಯ ನುಡಿಗಳನ್ನಾಡಿದರು. ಡಾ. ರಾಜೇಂದ್ರ ಕೊಂಡಾ ಮಾತನಾಡಿದರು.

ಜಿಲ್ಲಾ 23ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ನಾಗೇಂದ್ರ ಮಸೂತಿ ಅವರ ಸಾಂಸ್ಕೃತಿಕ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ನಗರದ ಸರ್ದಾರ ವಲ್ಲಭಬಾಯಿ ಪಟೇಲ್ ವೃತ್ತದಿಂದ ಆರಂಭಗೊಂಡ ಭವ್ಯ ಮೆರವಣಿಗೆ ವಿಶ್ವೇಶ್ವರಯ್ಯ ಭವನದವರೆಗೆ ಸಾಗಿಯಿತು. ಜಯ ಕರ್ನಾಟಕ ಸಂಘಟನೆಯ ವಿಭಾಗೀಯ ಅಧ್ಯಕ್ಷ ಮಲ್ಲಿಕಾರ್ಜುನ ಸಾರವಾಡ ಚಾಲನೆ ನೀಡಿದರು. ವಿವಿಧ ಕಲಾ ತಂಡಗಳೊಂದಿಗೆ ಹೆಜ್ಜೆ ಹಾಕಿದ ಕನ್ನಡದ ಮನಸ್ಸುಗಳು, ಕನ್ನಡ ಝೇಂಕಾರ ಹಾಕುತ್ತಾ ವಾದ್ಯ ಮೇಳಗಳೊಂದಿಗೆ ಮುಖ್ಯ ವೇದಿಕೆಗೆ ಬಂದು ತಲುಪಿದರು. ಡೊಳ್ಳು ಕುಣಿತ, ಲೇಜಿಮು ವಾದ್ಯ, ನೃತ್ಯಗಳ ನಾದದೊಂದಿಗೆ ಸಂಭ್ರಮಿಸಿದರು. ಮಾರ್ಗದುದ್ದಕ್ಕೂ ಕನ್ನಡಪರ ಘೋಷಣೆ ಕೂಗುತ್ತಾ, ಹಾಡುತ್ತಾ ನಲಿದರು. ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರು ಡೊಳ್ಳಿನ ನಾದಕ್ಕೆ ಹೆಜ್ಜೆ ಹಾಕಿ ಪ್ರೇಕ್ಷಕರ ವಿಶೇಷ ಗಮನ ಸೆಳೆದರು.

## ಕುಡಿಯುವ ನೀರಿನ ಸಮಸ್ಯೆ

# ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ನಡೆಸಿದ ಕಲಬುರಗಿ ನಿವಾಸಿಗಳು



**ಕಲಬುರಗಿ, ಅ. 29:** ನಗರದ ವಾರ್ಡ್ ನಂ.2ರ ಕೆ.ಕೆ. ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಕೂಡಲೇ ನೀರು ಪೂರೈಸುವಂತೆ ಆಗ್ರಹಿಸಿ ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಘಟಕದ ನೇತೃತ್ವದಲ್ಲಿ ನಿವಾಸಿಗಳು ಮಂಗಳವಾರ ಮಹಾನಗರ ಪಾಲಿಕೆ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೆ.ಕೆ. ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದ ನಿವಾಸಿಗಳು ಪ್ರತಿದಿನ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ನೀರು ಸಂಗ್ರಹಿಸಲು ಸಮಯ ವ್ಯಯವಾಗುತ್ತಿರುವುದರಿಂದ ಮಕ್ಕಳು ಶಾಲೆಗೆ ತಡವಾಗಿ ತೆರಳುವಂತಾಗಿದೆ. ಅಲ್ಲದೆ, ಇಲ್ಲಿನ ಕೂಲಿ ಕಾರ್ಮಿಕರು ಹಾಗೂ ಮಹಿಳೆಯರು ಕೆಲಸಕ್ಕೆ ತೆರಳಲು ತೊಂದರೆ ಅನುಭವಿಸುತ್ತಿದ್ದಾರೆ. ಕುಡಿಯುವ ನೀರಿನ ಅಭಾವದಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು. ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಸೆಪ್ಟೆಂಬರ್ 29ರಂದು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಲಾಗಿತ್ತು. ಆದರೆ, ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಕೆ. ನಗರಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಿರಂತರ ಧರಣಿ ನಡೆಸಲಾಗುವುದು ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಸಂಚಾಲಕಿ ರೇಣುಕಾ ಸರಡಗಿ, ಅಧ್ಯಕ್ಷೆ ಗೌರಮ್ಮ ಮಾಕಾ, ಖಜಾಂಚಿ ಸುನಿತಾ ಎಂ. ಕೊಲ್ಲೂರ, ಕಾರ್ಯದರ್ಶಿ ಶರಣು ಕಣ್ಣಿ ಸೇರಿದಂತೆ ನಿವಾಸಿಗಳಾದ ಪಂಪಣ್ಣ, ಮಲ್ಲಣ್ಣ, ಬಸಲಿಂಗಯ್ಯ, ಶರಣಮ್ಮ ಮತ್ತಿತರರಿದ್ದರು.

# ಜನತಾ ಬಜಾರ್ ಅಧ್ಯಕ್ಷ ಸ್ಥಾನಕ್ಕೆ ಪಲ್ಲೇದ ಮೈತ್ರಿ ರಾಜಿನಾಮೆ



**ಬಳ್ಳಾರಿ, ಅ.29.** ಬಳ್ಳಾರಿಯ ಜನತಾ ಬಜಾರ್ ಅಧ್ಯಕ್ಷ ಸ್ಥಾನಕ್ಕೆ ಪಲ್ಲೇದ ಮೈತ್ರಿ ಅವರು ರಾಜೀನಾಮೆಯನ್ನು ನೀಡಿದ್ದಾರೆ.

ವೈಯಕ್ತಿಕ ಕಾರಣ ಮತ್ತು ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದು ನಿಯಮಾನುಸಾರ ಅಂಗೀಕರಿಸಬೇಕೆಂದು ಕೋರಿದ್ದಾರೆ.

ಈ ಹಿಂದೆ ಅವಿರೋಧವಾಗಿ ಆಯ್ಕೆ ಮಾಡುವ ಸಂಧರ್ಭದಲ್ಲಿ ಜನತಾ ಬಜಾರ್ ನಿರ್ದೇಶಕರೆಲ್ಲ ಸೇರಿ ಮಾಜಿ ಶಾಸಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ರಾಜೀನಾಮೆ ನೀಡಿದ್ದಾರೆ.

ಈ ರಾಜೀನಾಮೆಯನ್ನು 14 ದಿನದ ನಂತರ ಅಂಗೀಕರಿಸಿ ನಂತರ ಚುನಾವಣೆ ಪ್ರಕ್ರಿಯೆ ಆರಂಭಿಸಬೇಕಿದೆ. ಹೀಗಾಗಿ ಅಧ್ಯಕ್ಷ ಸ್ಥಾನಕ್ಕೆ ನವೆಂಬರ್ ಅಂತ್ಯದೊಳಗೆ ಚುನಾವಣೆ ನಡೆಸ 'ಬಹುದಾಗಿದೆ.

# ಪ್ರತಿಯೊಬ್ಬರೂ ತಂತ್ರಜ್ಞಾನದ ಸುರಕ್ಷತೆ, ಸದ್ಬಳಕೆಗೆ ಆದ್ಯತೆ ನೀಡಿ: ಅವ್ವಾರು ಮಂಜುನಾಥ್ ಕರೆ




**ಬಳ್ಳಾರಿ, ಅ. 29–:**ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನದ ಬಳಕೆ ಎಷ್ಟು ಉಪಯೋಗ ಆಗಿದೆಯೋ, ಅಷ್ಟೇ ಪ್ರಮಾಣದಲ್ಲಿ ದುರ್ಬಗಳಕೆ ಆಗುತ್ತಿದೆ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ಬಳ್ಳಾರಿ ಜಿಲ್ಲಾ ಪೊಲೀಸ್ ಇಲಾಖೆಯ ಜಂಟಿ ಆಶ್ರಯದಲ್ಲಿ ಬಿಡಿಸಿಸಿಐ ಆಡಿಟೋರಿಯಂನಲ್ಲಿ ನಡೆದ 'ಸೈಬರ್ ಅಪರಾಧಗಳ ತಡೆಗಟ್ಟುವಿಕೆ ಜಾಗೃತಿ' ಶಿಬಿರದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಹಣಕ್ಕಾಗಿ, ಮಾಹಿತಿಗಾಗಿ, ಅಧಿಕಾರಕ್ಕಾಗಿ, ಪ್ರಚಾರಕ್ಕಾಗಿ, ನಾನಾ ಕಾರಣಗಳಿಗಾಗಿ ತಂತ್ರಜ್ಞಾನದ ಬಳಕೆ – ದುರ್ಬಳಕೆ ಆಗುತ್ತಿದೆ. ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿದ್ದಂತೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆ – ಅಗತ್ಯತೆ ದಿನೇ ದಿನೇ ಹೆಚ್ಚಾಗುತ್ತಿದೆ. ಡಿಜಿಟಲ್ ಸುರಕ್ಷತೆಯು ಪ್ರತಿಯೊಬ್ಬರ ಜೀವನದ ಅವಿಭಾಜ್ಯವಾಗಿದೆ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ವ್ಯಾಪಾರಿಗಳು, ಉದ್ಯಮಿಗಳು, ಸಾರ್ವಜನಿಕರು ಮತ್ತು ಯುವ ಸಮೂಹದಲ್ಲಿ ಡಿಜಿಟಲ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿರುವ ಗೃಹ ಇಲಾಖೆಯ ಕ್ರೈಂ ಬ್ರ್ಯಾಂಚ್‌ನ ಡಿಸಿಪಿ ಆರ್.ಐ. ಖಾಸಿಂ ಅವರು, ಶಿಕ್ಷಿತರಲ್ಲೇ ಹೆಚ್ಚಿನ ಪ್ರಮಾಣದ ವಂಚನೆಗಳು ನಡೆಯುತ್ತಿವೆ. ವಂಚಕರೂ ಹೆಚ್ಚಿನ ಸಂಖ್ಯೆಯಲ್ಲಿ ಸುಶಿಕ್ಷಿತರು. ವಂಚನೆಗೆ ಒಳಗಾಗುವವರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸುಶಿಕ್ಷಿತರು – ಶಿಕ್ಷಣ ಪಡೆದವರು ಆಗಿದ್ದಾರೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಹೈದರಾಬಾದ್‌ನ ಸಿಎ ಡಿ.ಪ್ರೇಮನಾಥ್ ಅವರು, ಡಿಜಿಟಲ್ ಸುರಕ್ಷತೆಗಾಗಿ ಡಿಪಿಡಿಪಿ ಕಾಯ್ದೆ ಜಾರಿಯಾಗಿದ್ದು, ಪ್ರತ್ಯೇಕ ಮಂಡಳಿ ರಚನೆಯಾಗುತ್ತಿದೆ. ಸಾರ್ವಜನಿಕರಿಗೆ ಡಿಜಿಟಲ್ ಸುರಕ್ಷತೆ ಒದಗಿಸಲು ಕೇಂದ್ರ ಸರ್ಕಾರ ಸೂಕ್ತ ಕಾಯ್ದೆಯನ್ನು ರೂಪಿಸಿದ್ದು, ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ. ಚಾರ್ಟೆಡ್ ಅಕೌಂಟೆಂಟ್‌ಗಳಿಗೂ ಡಿಜಿಟಲ್ ಸುರಕ್ಷತೆಯ ಕುರಿತು ಸೂಕ್ತ ತರಬೇತಿ ನೀಡಲಾಗುತ್ತಿದೆ ಎಂದರು.

## ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದವನಿಗೆ

# 20 ವರ್ಷ ಜೈಲು: ಶಿವಮೊಗ್ಗ ಜಿಲ್ಲಾ ನ್ಯಾಯಾಲಯ ತೀರ್ಪು




**ಶಿವಮೊಗ್ಗ, ಅ.29**: 13 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ 23 ವರ್ಷದ ಯುವಕನಿಗೆ 20 ವರ್ಷ ಕಠಿಣ ಕಾರಾಗೃಹ ವಿಧಿಸಿ ಶಿವಮೊಗ್ಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ಎಫ್‌ಟಿಎಸ್‌ಸಿ–1) ಆದೇಶ ಹೊರಡಿಸಿದೆ.

ಶಿವಮೊಗ್ಗದ ವಿನೋಬನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 13 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ 23 ವರ್ಷದ ಯುವಕ ಲೈಂಗಿಕ ದೌರ್ಜನ್ಯ ಎಸಗಿದ ಅರೋಪದ ಮೇಲೆ ಪ್ರಕರಣ ದಾಖಲಾಗಿತ್ತು. ಈ ಕುರಿತು ವಿನೋಬನಗರ ಪೊಲೀಸ್ ಠಾಣೆಯ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಕಲಾ ಅವರು ನ್ಯಾಯಾಲಯಕ್ಕೆ ಆರೋಪಿ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದರು.ಈ ಕುರಿತು ನ್ಯಾಯಾಲಯ ವಿಚಾರಣೆ ನಡೆಸಿದಾಗ ಆರೋಪಿತನ ವಿರುದ್ದ ಆರೋಪ ಸಾಬೀತಾದ ಹಿನ್ನೆಲೆ?ಯಲ್ಲಿ ಆತನಿಗೆ ನ್ಯಾಯಾಧೀಶರಾದ ನಿಂಗನಗೌಡ ಪಾಟೀಲ ಅವರು 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 1,01,000 ರೂ. ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ. ಅಲ್ಲದೆ, ನೊಂದ ಬಾಲಕಿಗೆ 4 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಪರ ಸರ್ಕಾರಿ ವಕೀಲ ಶ್ರೀಧರ್ ವಾದ ಮಂಡಿಸಿದ್ದರು.ಇತ್ತೀಚೆಗೆ ಪ್ರತ್ಯೇಕ ಪೋಕ್ಸೊ ಪ್ರಕರಣದಲ್ಲಿ, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕಡಬ ಕುದ್ಮಾರು ನಿವಾಸಿ ಅಬ್ದುಲ್ಲಾ (64) ಎಂಬಾತನಿಗೆ ಮಂಗಳೂರಿನ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 5 ವರ್ಷಗಳ ಸಾಧಾರಣ ಕಾರಾಗೃಹ ಶಿಕ್ಷೆ ಹಾಗೂ 35 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿತ್ತು.

ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ 2020ರಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 354(01), 506 ಹಾಗೂ ಪೋಕ್ಸೊ ಕಾಯ್ದೆ?2012ರ ಕಲಂ 8ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯದಲ್ಲಿ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶೆ ಸುಮಂಗಲಾ ಚಕಲಬ್ಬಿ ಅವರು ಆರೋಪಿಯನ್ನು ದೋಷಿ ಎಂದು ತೀರ್ಪು ನೀಡಿದ್ದರು.

ಪ್ರಕರಣದ ತನಿಖಾಧಿಕಾರಿಯಾಗಿ ಹಾಗೂ ಅಂದಿನ ಸುಳ್ಯ ವೃತ್ತ ನಿರೀಕ್ಷಕರಾಗಿ ಕಾರ್ಯನಿರ್ವಹಿಸಿದ್ದ ನವೀನ್ ಚಂದ್ರ ಜೋಗಿ ಅವರು ಅಗತ್ಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರ ವಿಶೇಷ ಅಭಿಯೋಜಕ ಪುಷ್ಪರಾಜ್ ವಾದ ಮಂಡಿಸಿದ್ದರು.

## ಬಾಂಬೆ ಡೇಸ್ ಪುಸ್ತಕ ಬಿಡುಗಡೆ ಮಾಡಲ್ಲ,

# ರಾಜಕೀಯದ ಬಗ್ಗೆ ಜನರಿಗೆ ಈಗಾಗಲೇ ಅಸಹ್ಯ ಎನಿಸಿದೆ: ಮಾಜಿ ಸಚಿವ ಎಚ್. ವಿಶ್ವನಾಥ್

**ಮೈಸೂರು, ಅ.29:** ಜನರಿಗೆ ಈಗಾಗಲೇ ರಾಜಕೀಯದ ಬಗ್ಗೆ ಅಸಹ್ಯವಾಗುವಂತೆ ಮಾಡಿಕೊಂಡಿದ್ದಾರೆ. ಈಗ ಇನ್ನಷ್ಟು ಅಸಹ್ಯ ಮಾಡಿಸುವುದು ನನಗೆ ಇಷ್ಟವಿಲ್ಲ. ಹೀಗಾಗಿ 'ಬಾಂಬೆ ಡೇಸ್' ಪುಸ್ತಕ ಬಿಡುಗಡೆ ಮಾಡುವುದಿಲ್ಲ ಎಂದು ಮಾಜಿ ಸಚಿವ ಹೆಚ್.ವಿಶ್ವನಾಥ್ ಹೇಳಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ವಿಶ್ವನಾಥ್, ಬಾಂಬೆ ಡೇಸ್ ಪುಸ್ತಕವನ್ನು ನಾನು ಸಂಪೂರ್ಣವಾಗಿ ಬರೆದಿದ್ದೇನೆ. ಆದರೆ ಪ್ರಕಟ ಮಾಡದಿರಲು ನಿರ್ಧರಿಸಿದ್ದೇನೆ. ಪುಸ್ತಕ ಬಿಡುಗಡೆ ಮಾಡಿದರೆ ರಾಜಕಾರಣದ ಬಗ್ಗೆ ಜನ ಮತ್ತಷ್ಟು ಅಸಹ್ಯಪಟ್ಟುಕೊಳ್ಳುತ್ತಾರೆ ಎಂದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಮೈಸೂರು ರಾಜಮನೆತನದ ಬಗ್ಗೆ ಬಹಳ ಹಗುರವಾಗಿ ಮಾತನಾಡಿದ್ದಾರೆ. ಯತೀಂದ್ರ ಅವರಿಗೆ ಅನುಭವವಿಲ್ಲ, ಅನುಭವ ಇಲ್ಲದವರಿಗೆ ಜವಾಬ್ದಾರಿ ನೀಡಿದರೆ ಏನಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಹಿಂದೆ ಚಾಮುಂಡೇಶ್ವರಿ ಉಪ ಚುನಾವಣೆ ಪ್ರಚಾರಕ್ಕೆ ಬರುವಂತೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರನ್ನು ಮನವಿ ಮಾಡಿಕೊಂಡೆವು. ಅಂದು ಮಹಾರಾಜರು ಬರದೇ ಹೋಗಿದ್ದರೆ ಸಿದ್ದರಾಮಯ್ಯ ಗೆಲ್ಲಲು ಆಗುತ್ತಿರಲಿಲ್ಲ. ಅವರು ಸಿಎಂ ಕೂಡ ಆಗುತ್ತಿರಲಿಲ್ಲ. ಆದರೆ ಶ್ರೀಕಂಠದತ್ತರ ಬಗ್ಗೆಯೂ ಸಿದ್ದರಾಮಯ್ಯ ಒಳ್ಳೆಯ ಮಾತುಗಳನ್ನು ಆಡಲಿಲ್ಲ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಮತ್ತು ಅವರ ಮಗ ಮೈಸೂರಿನ ಇತಿಹಾಸ ಗೊತ್ತಿಲ್ಲದವರಂತೆ ಮಾತನಾಡುತ್ತಿದ್ದಾರೆ. ಜಿಲ್ಲಾ ಮಂತ್ರಿ



ಇನ್ನಾದರೂ ಮೈಸೂರಿನ ಇತಿಹಾಸ ಓದಬೇಕು. ಮೈಸೂರು ರಾಜಮನೆತನದ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು ಎಂದು ಸಚಿವ ಯತೀಂದ್ರ ಅವರಿಗೆ ಹೆಚ್.ವಿಶ್ವನಾಥ್ ಸಲಹೆ ನೀಡಿದರು.ಯತೀಂದ್ರ ಅವರು ಜಂಭದ ಕೋಳಿಯ ರೀತಿ ಮಾತನಾಡುವುದು ಶೋಭೆಯಲ್ಲ. ಈ ವಿಚಾರದಲ್ಲಿ ಸಿಎಂ ಡಿ. ಕೆ.ಶಿವಕುಮಾರ್ ಸರಿಯಾಗಿ ಮಾತನಾಡಿದ್ದಾರೆ. ಈ ಬೆಳವಣಿಗೆಯಿಂದ ರಾಜಮನೆತನಕ್ಕೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿದ್ದಾರೆ ಎಂದರು.

ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಜಯಭೇರಿ ಬಾರಿಸಿದ ವಿಚಾರಕ್ಕೆ, ಈ ಚುನಾವಣೆಯಲ್ಲಿ ಪದವೀಧರರು, ಶಿಕ್ಷಕರು ಮಾತ್ರ ಮತ ಚಲಾಯಿಸಿದ್ದಾರೆ. ಆದರೆ ಫಲಿತಾಂಶ ಹೊರಬೀಳುತ್ತಿದ್ದಂತೆ ಬಿಜೆಪಿಯ ಬಿ.ವೈ.ವಿಜಯೇಂದ್ರ, ಆರ್. ಅಶೋಕ್ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು 2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ ಅಂತ ಕೂಗಾಡುತ್ತಿದ್ದಾರೆ. ಆದರೆ ಪ್ರಧಾನಿ ಪ್ರತಿನಿಧಿಸುತ್ತಿರುವ ವಾರಾಣಸಿ ಕ್ಷೇತ್ರದಲ್ಲಿ ಬಿಜೆಪಿ ಸೋತಿದೆ, ಅಲ್ಲಿ ಸಮಾಜವಾದಿ ಪಕ್ಷ ಗೆದ್ದಿದೆ ಎಂದು ಹೇಳಿದರು.

# ಶಶೀಲ್ ನಮೋಶಿಗೆ ಅಭಿನಂದನೆ



**ಕಲಬುರಗಿ, ಅ.29– :** ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯಲ್ಲಿ ಐದನೇ ಬಾರಿಗೆ ಭರ್ಜರಿ ಜಯಸಾಧಿಸಿ ವಿಧಾನ ಪರಿಷತ್ ಪ್ರವೇಶಿಸಿದ ಎನ್ ಡಿ ಎ ಅಭ್ಯರ್ಥಿ ಶಶೀಲ್ ಜಿ ನಮೋಶಿ ಅವರನ್ನು ದಕ್ಷಿಣ ಕನ್ನಡ ಸಂಘದ ಮಾಜಿ ಅಧ್ಯಕ್ಷರಾದ ಡಾ.ಸದಾನಂದ ಪೆರ್ಲ ಹಾಗೂ ಕಲಬುರ್ಗಿ ಜಿಲ್ಲೆ ಹೋಟೆಲ್ ವಸತಿ ಮತ್ತು ಬೇಕರಿ ಸಂಘಗಳ ಸಮಿತಿಯ ಜೊತೆ ಕಾರ್ಯದರ್ಶಿ ಸುನಿಲ್ ಶೆಟ್ಟಿ ಸತ್ಕರಿಸಿದರು.

ಜಿಲ್ಲಾ ಹೋಟೆಲ್ ಉದ್ಯಮಿಗಳ ಪ್ರೋತ್ಸಾಹಕರು ಹಾಗೂ ದಕ್ಷಿಣ ಕನ್ನಡ ಸಂಘದ ಹಿತೈಷಿಗಳು ಆದ ನಮೋಶಿಯವರು ತಮ್ಮ ಅವಧಿಯಲ್ಲಿ ಶಿಕ್ಷಣ ರಂಗದಲ್ಲಿ ಉತ್ತಮ ಸಾಧನೆ ಮಾಡಲಿ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸಲಾಯಿತು

# ಬಳ್ಳಾರಿ ರೈಲ್ವೆ ನಿಲ್ದಾಣ ಸಮಸ್ಯೆಗಳ ತುರ್ತು ಪರಿಹಾರಕ್ಕೆ ಎನ್ ಪ್ರಕಾಶ್ ಮನವಿ



**ಬಳ್ಳಾರಿ, ಅ.29–**ರಾಘವ ಮೆಮೋರಿಯಲ್ ಅಸೋಸಿಯೇಷನ್ ಬಳ್ಳಾರಿ ವತಿಯಿಂದ ಬಳ್ಳಾರಿ ರೈಲ್ವೆ ನಿಲ್ದಾಣದಲ್ಲಿ ಅದುಷ್ಟು ಬೇಗನೆ ರೈಲ್ವೆ ನಿಲ್ದಾಣ ಸಮಸ್ಯಗಳಾದ ಕೋಚ್‌ಗಳ ಮಾಹಿತಿ ಡಿಸಿಪ್ಲೆ ಮಾಡುವುದು, ಪ್ಲಾಟ್ ಫಾರಂ ದುರಸ್ತಿ, ಲಿಫ್ಟ್ ವ್ಯವಸ್ಥೆ, ಎಕ್ಸ್ ಲೇಟರ್, ಆಟೋ ಪ್ರಿಪೇಡ್ ಸ್ಟಾಂಡ್, ಬಾಂಬೆಯಿಂದ ಹೋಸಪೇಟೆ ರೈಲನ್ನು ಬಳ್ಳಾರಿಗೆ ವಿಸ್ತರಿಸಬೇಕು ಹಾಗೂ ಹೊಸ ರೈಲುಗಳ ಬಗ್ಗೆ ಚರ್ಚಿಸಿ ಇನ್ನಿತರ ಸಮಸ್ಯೆಗಳನ್ನೂ ಅದಷ್ಟು ತುರ್ತಾಗಿ ನಿವಾರಿಸಲು ಡಿವಿಜಿನಲ್ ರೈಲ್ವೆ ಮ್ಯಾನೇಜರ್ ಸೌಥ್ ಪಶ್ಚಿಮ ರೈಲ್ವೆ ಹುಬ್ಬಳ್ಳಿ ಪರವಾಗಿ ಡಿವಿಜನ್ ಅಪರೇಷನ್ ಮ್ಯಾನೇಜರ್ ಸತೀಶ್ ಇವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎನ್. ಪ್ರಕಾಶ್, ಉಪಾಧ್ಯಕ್ಷ ಬಾಣಾಪುರ ರಮೇಶಗೌಡ, ಖಜಾಂಚಿ ಪಿ. ಧನುಂ ಜಯ, ಜಂಟಿ ಕಾರ್ಯದರ್ಶಿ ಪಿ ಎಂ ನಟರಾಜ್ , ವಿ.ರಾಮಚಂದ್ರ, ಜಿ. ಆರ್ ವೆಂಕಟೇಶಲು, ಕಾಳಿದಾಸ್, ಪಿ.ಶ್ರೀನಿವಾಸಲು,

ಶೇಶರೆಡ್ಡಿ,ಗುರುನಾಥ ಭಟ್,ರಮಣಪ್ಪ ಭಜಂತ್ರಿ ಭಾಗವಹಿಸಿದ್ದರು.

# ಉಡುಪಿ ಪೇಜಾವರ ಶ್ರೀಗಳ ಕಲಬುರಗಿ ಭೇಟಿ



**ಕಲಬುರಗಿ, ಅ.29– :** ಉಡುಪಿಯ ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು ಕಲಬುರಗಿಗೆ ಆಗಮಿಸಿ ನ. 3.ಮತ್ತು 4 ರಂದು ಬುಧವಾರ ಭೇಟಿಯಾಗಿ ಆಶೀರ್ವದಿಸಲಿದ್ದಾರೆ.

ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿಯವರು, ವಿಜಯಪುರದಿಂದ ನವಂಬರ್ 3ರಂದು ಸಂಜೆ ಕಲಬುರಗಿ ಜೇವರ್ಗಿ ರಸ್ತೆಯಲ್ಲಿರುವ ರಾಮ ಮಂದಿರಕ್ಕೆ ಆಗಮಿಸಲಿದ್ದು ಸಂಜೆ 6 ಗಂಟೆಯ ನಂತರ ಭಕ್ತರು ಭೇಟಿಯಾಗಬಹುದು.

ಕಲಬುರಗಿಯ ವಿದ್ಯಾನಗರದ ಶ್ರೀಕೃಷ್ಣಗುಡಿಯಲ್ಲಿ ನವೆಂಬರ್ 4 ರಂದು ಸಾಯಂಕಾಲ 4.30 ರಿಂದ ಭಕ್ತರಿಗೆ ದರ್ಶನ ಹಾಗೂ ಮಂತ್ರಾಕ್ಷತೆ ಆಶೀರ್ವಾದ ನೀಡಲಿದ್ದಾರೆ. ಪೂಜ್ಯರ ಪಾದ ಪೂಜೆ ಸಲ್ಲಿಸ ಲಿಚ್ಚಿಸುವವರು ಕಿಶೋರ್ ದೇಶಪಾಂಡೆ (ಮೊಬೈಲ್ 944 9731728) ಕೊತ್ತೂರು ನಿಖಿಲ್ ಆಚಾರ್ (ಮೊಬೈಲ್ 8088240845) ಇವರನ್ನು ಸಂಪರ್ಕಿಸ ಬಹುದು ಎಂದು ಕೃಷ್ಣ ಗುಡಿಯ ಅಧ್ಯಕ್ಷರಾದ ರಂಗನಾಥ ದೇಸಾಯಿ ಮತ್ತು ಕಾರ್ಯದರ್ಶಿಗಳಾದ ಕಿಶೋರ್ ದೇಶಪಾಂಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಮೋಶಿ ಗೆಲುವಿನಿಂದ ಅಪ್ಪ-ಮಗನಿಗೆ ತಕ್ಕ ಉತ್ತರ

## ಸಚಿವ ಪ್ರಿಯಾಂಕ್-ಮಲ್ಲಿಕಾರ್ಜುನ ಖರ್ಗೆ ವಿರುದ್ಧ ರವಿಕುಮಾರ ವಾಗ್ದಾಳಿ



ಕಲಬುರಗಿಯಲ್ಲಿ ವಿಧಾನ ಪರಿಷತ್ ಮುಖ್ಯ ಸಚೇತಕ ಎನ್.ರವಿಕುಮಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶಶೀಲ್ ನಮೋಶಿ, ಚಂದು ಪಾಟೀಲ್ ಮಾಜಿ ಶಾಸಕರಾದ ದತ್ತಾತ್ರೇಯ ಪಾಟೀಲ್, ಅಮರನಾಥ ಪಾಟೀಲ್ ಅವರಿದ್ದಾರೆ.

ಕಲಬುರಗಿ, ಅ. 29: ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್‌ಗೆ ಜರುಗಿದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರು ಭರ್ಜರಿ ಗೆಲುವು ಸಾಧಿಸುವ ಮೂಲಕ ಕಲಬುರಗಿ ರಿಪಬ್ಲಿಕ್ ಮಾಡಿಕೊಂಡಿರುವ ಅಪ್ಪ, ಮಗನಿಗೆ ಸುಶಿಕ್ಷಿತ ಮತದಾರರು ತಕ್ಕ ಉತ್ತರ ನೀಡಿದ್ದಾರೆ ಎಂದು ರಾಜ್ಯ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹಾರದ ಪಾಟ್ನಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅಪ್ಪನಿಗೂ ಮನೆಗೆ ಕಳಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು ಮಾಡಿದ ಅವಹೇಳನಕ್ಕೆ ಪ್ರತಿಯಾಗಿ ಕಲ್ಯಾಣ ಕರ್ನಾಟಕದ ಸುಶಿಕ್ಷಿತ ಮತದಾರರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ಸೋಲಿಸುವ ಮೂಲಕ ಉತ್ತರ ನಿಡಿದ್ದಾರೆ. ಈ ಚುನಾವಣೆಯ ಫಲಿತಾಂಶ ಅಪ್ಪ ಮತ್ತು ಮಗನಿಗೆ ನೀಡಿದ ತಕ್ಕ ಉತ್ತರವಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಹೆಸರು ಪ್ರಸ್ತಾಪಿಸಿ ಆಕ್ರೋಶ ಹೊರಹಾಕಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸುದೀರ್ಘ ಆಡಳಿತದ ಅವಧಿಯ ದಾಖಲೆಯನ್ನು ಮುರಿದಿದ್ದಾರೆ. ಮೂರು ಬಾರಿ ಪ್ರಧಾನಿಯಾಗಿ, ಮುಂದೆಯೂ ಸಹ ಪ್ರಧಾನಿಯಾಗಲಿರುವ ಪ್ರಧಾನಿ ಮೋದಿ ಅವರ ಕುರಿತು ಖರ್ಗೆ ಅವರು ಮೂದಲಿಸುತ್ತ ಕಾಲ ಕಳೆಯುತ್ತಿದ್ದಾರೆ. ಅದೇ ರೀತಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಸಹ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕುಸಿದರೂ ಸಹ ಕಲ್ಯಾಣ ಕರ್ನಾಟಕದಲ್ಲಿ ಶೈಕ್ಷಣಿಕ ಗುಣಮಟ್ಟ ಕುಸಿದರೂ ಸಹ ಆ ಕುರಿತು ಯೋಚಿಸದೇ ಕೇವಲ ಕೇಂದ್ರ ಸರ್ಕಾರವನ್ನು ಟೀಕಿಸುವಲ್ಲಿಯೇ ವ್ಯರ್ಥ ಕಾಲಹರಣ ಮಾಡುತ್ತಿದ್ದು, ಅವರಿಗೆ ತಕ್ಕ ಉತ್ತರವನ್ನು ಸುಶಿಕ್ಷಿತ ಮತದಾರರು ನೀಡಿದ್ದಾರೆ ಎಂದು ಅವರು ಹೇಳಿದರು.

ರಾಜ್ಯ ಸರ್ಕಾರದ ಅಭಿವೃದ್ಧಿ ಇಲ್ಲದ ಬೇಕಾ ಬಿಟ್ಟಿ ಉಚಿತ ಯೋಜನೆ ಹಾಗೂ ನಿರ್ಧಾರಗಳು ಅದರಲ್ಲೂ ಎಲ್ಲದಕ್ಕೂ ತೋರು ತ್ತಿರುವ ಅಹಂಕಾರಕ್ಕೆ ಸುಶಿಕ್ಷಿತ ಪದವೀಧರರು ಮತ್ತು ಶಿಕ್ಷಕರು ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳ ಚುನಾವಣೆಯಲ್ಲಿ ತಕ್ಕ ಉತ್ತರ ಮೂಲಕ ಕಪಾಳಮೋಕ್ಷ ಮಾಡಿದ್ದಾರೆ. ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ವಲ್ಪ ಉತ್ತಮ ಫಲಿತಾಂಶ ಬಂದಿತ್ತು. ಆದರೆ ಶಿಕ್ಷಕರ ಹಾಗೂ ಪದವೀಧರರ ತಲಾ ಎರಡು ಕ್ಷೇತ್ರ ಸೇರಿ ಒಟ್ಟಾರೆ ನಾಲ್ಕಕ್ಕೆ ನಾಲ್ಕೂ ಕ್ಷೇತ್ರಗಳಲ್ಲಿ ಬಿಜೆಪಿ ಎನ್‌ಡಿಎ ಒಕ್ಕೂಟ ಗೆಲ್ಲುವ ಮೂಲಕ ಆಡಳಿತಾರೂಢ ಕಾಂಗ್ರೆಸ್ ತಕ್ಕ ತಿರುಗೇಟು ನೀಡಲಾಗಿದೆ ಎಂದು ಅವರು ಹೇಳಿದರು.

ಕಲ್ಯಾಣ ಕರ್ನಾಟಕ ಐದು ಲೋಕಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಸೋತಿದೆ. ಆದರೆ ಪ್ರಸ್ತುತ ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಐತಿಹಾಸಿಕ ಗೆಲ್ಲುವುದರ ಮೂಲಕ ಜೆತೆಗ ರಾಜ್ಯದ ನಾಲ್ಕೂ ರಾಜ್ಯ ವಿಧಾನ ಪರಿಷತ್ ಸದಸ್ಯ ಸ್ಥಾನಗಳನ್ನು ಗೆಲುವು ಸಾಧಿಸಿರುವುದು ಮುಂಬರುವ 2028ರ ವಿಧಾನಸಭಾ ಚುನಾವಣೆಯ ದಿಕ್ಸೂಚಿಯಾಗಿದೆ. ನಾಲ್ಕೂ ಕ್ಷೇತ್ರಗಳ ಗೆಲುವು ಹಿಂದಿನ ಸೋಲನ್ನು ಬಡ್ಡಿ ಸಮೇತ ತೀರಿಸುವಂತಹ ತೀರ್ಪನ್ನು ಮತದಾರರು ನೀಡಿದ್ದಾರೆ ಎಂದು ಅವರು ಬಣ್ಣಿಸಿದರು.

ವಿಜೇತ ರಾಜ್ಯ ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ ಅವರು ಮಾತನಾಡಿ, ಶಿಕ್ಷಕ ಮತದಾರರು ವಿಶ್ವಾಸವಿಟ್ಟು ಐದನೇ ಬಾರಿಗೆ ಆಶೀರ್ವಾದ ಮಾಡಿದ್ದಾರೆ. ಅವರ ನಿರೀಕ್ಷೆ ತಕ್ಕ ಕೆಲಸ ಮಾಡುವೆ. ಸರ್ಕಾರದ ಕೆಟ್ಟ ನಿರ್ಧಾರ ಹಾಗೂ ನಡಾವಳಿಕೆಗೆ ಉತ್ತರ ನೀಡಿದ್ದು, 2028ರ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದರು. ಜೆಡಿಎಸ್ ಕಾರ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್ ಅವರು ಮಾತನಾಡಿ, ರಾಜ್ಯ ವಿಧಾನ ಪರಿಷತ್ ಚುನಾವಣೆಯ ನಾಲ್ಕೂ ಸ್ಥಾನಗಳಲ್ಲಿ ಜೆಡಿಎಸ್ ಬಿಜೆಪಿ ಮೈತ್ರಿಕೂಟ ಗೆಲ್ಲಲು ಕಾಂಗ್ರೆಸ್ ದುರಾಡಳಿತಕ್ಕೆ ಮತದಾರರು ನೀಡಿರುವ ಉತ್ತರವಾಗಿದೆ. 2028ರಲ್ಲೂ ಮೈತ್ರಿಕೂಟ ಸ್ಪಷ್ಟವಾಗಿ ಆಡಳಿತದ ಚುಕ್ಕಾಣಿ ಹಿಡಿಯಲಿದೆ. ಪ್ರಮುಖವಾಗಿ ಈ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ಮೈತ್ರಿಯಾಗಿ ಕೆಲಸ ಮಾಡಿದೆ ಎಂದರು.

ಸುದ್ದಿಗೋಷ್ಠಿಕಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಶಾಸಕ ಡಾ. ಅವಿನಾಶ್ ಜಾಧವ್, ಮಾಜಿ ಶಾಸಕರಾದ ದತ್ತಾತ್ರೇಯ್ ಪಾಟೀಲ್ ರೇವೂರ್, ಅಮರನಾಥ ಪಾಟೀಲ್, ನಗರ ಜಿಲ್ಲಾಧ್ಯಕ್ಷ ಚಂದು ಬಿ. ಪಾಟೀಲ್, ಎನ್‌ಡಿಎ ಒಕ್ಕೂಟದ ಮುಖಂಡರಾದ ಉಸ್ತಾದ್ ನಾಸೀರ್ ಹುಸೇನ್, ಕೃಷ್ಣಾರೆಡ್ಡಿ, ಬಸವರಾಜ್ ಬಿರಬಟ್ಟಿ, ಶರಣಪ್ಪ ತಳವಾರ್, ಅವ್ವಣ್ಣ ಮ್ಯಾಕೇರಿ ಮುಂತಾದವರು ಉಪಸ್ಥಿತರಿದ್ದರು.

# ರಾಯಚೂರು ವಿಶ್ವವಿದ್ಯಾಲಯದಲ್ಲಿ ತತ್ವಪದ ಸಾಹಿತ್ಯ ಅಧ್ಯಯನ ಪೀಠ ಸ್ಥಾಪಿಸಲು ಒತ್ತಾಯ



ರಾಯಚೂರು ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ ತತ್ವಪದ ಸಾಹಿತ್ಯ ಅಧ್ಯಯನ ಪೀಠ ಸ್ಥಾಪಿಸುವಂತೆ ಆಗ್ರಹಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ನೇತೃತ್ವದ ನಿಯೋಗ, ಕುಲಪತಿ ಪ್ರೊ.ಶಿವಾನಂದ ಕೆಳಗಿನಮನಿ ಅವರಿಗೆ ಮನವಿ ಸಲ್ಲಿಸಿತು.

**ರಾಯಚೂರು, ಅ. 29:** ಇಲ್ಲಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ 'ತತ್ವಪದ ಸಾಹಿತ್ಯ ಅಧ್ಯಯನ ಪೀಠ'ವನ್ನು ಸ್ಥಾಪಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ನೇತೃತ್ವದ ನಿಯೋಗ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಿವಾನಂದ ಕೆಳಗಿನಮನಿ ಅವರಿಗೆ ಮನವಿ ಸಲ್ಲಿಸಿತು.

ಜಿಲ್ಲೆಯಲ್ಲಿ ಶರಣರು, ಹರಿದಾಸರು, ತತ್ವಪದಕಾರರು ಹಾಗೂ ಸೂಫಿಗಳು ಹುಟ್ಟಿಬಂದಿದ್ದು, ಶರಣರ ವಚನಗಳು ಮತ್ತು ದಾಸರ ಕೀರ್ತನೆಗಳಿಗಿಂತ ಭಿನ್ನವಾದ ತತ್ವಪದ ಸಾಹಿತ್ಯವು ಅತ್ಯಂತ ವಿಶಿಷ್ಟವಾಗಿದೆ ಎಂದು ಪರಿಷತ್ತು ತಿಳಿಸಿದೆ.

ತತ್ವಪದಕಾರರು ತಮ್ಮ ಸಮಕಾಲೀನ ಸಮಾಜದಲ್ಲಿದ್ದ ಮೂಢನಂಬಿಕೆಗಳನ್ನು ಖಂಡಿಸುತ್ತಾ, ಮನುಷ್ಯನನ್ನು ಅವುಗಳಿಂದ ಮುಕ್ತಗೊಳಿಸಲು ಸರಳ ಹಾಗೂ ವಿಶೇಷ ಜನಪದ ಒಗಟುಗಳ ಮಾದರಿಯಲ್ಲಿ ತತ್ವಪದಗಳನ್ನು ರಚಿಸಿದ್ದಾರೆ. ಸಮಾಜದಲ್ಲಿ ಶಾಂತಿ, ನೆಮ್ಮದಿ, ಮಾನವೀಯ ಮೌಲ್ಯಗಳ ಪ್ರತಿಪಾದನೆ, ಕೋಮು ಸೌಹಾರ್ದತೆ, ಮತಿಯ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಸಮನ್ವಯತೆಯನ್ನು ತತ್ವಗಳ ಮೂಲಕ ಬಹಳ ಪರಿಣಾಮಕಾರಿಯಾಗಿ ಬೋಧಿಸಲಾಗಿದೆ. ಈ ವಿಶಿಷ್ಟವಾದ ಸಾಹಿತ್ಯ ಮತ್ತು ತತ್ವಪದಕಾರರ ಜೀವನ ವೈಶಿಷ್ಟಗಳ ಕುರಿತು ಸುದೀರ್ಘವಾದ ಅಧ್ಯಯನದ ಅವಶ್ಯಕತೆ ಇರುವುದರಿಂದ, ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಅಧ್ಯಯನ ಪೀಠವನ್ನು ಸ್ಥಾಪಿಸಬೇಕು ಎಂದು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಬಿ. ವಿಜಯ ರಾಜೇಂದ್ರ, ಜಿಲ್ಲಾ ಘಟಕದ ಕೋಶ್ಯಾಧ್ಯಕ್ಷ ನಾಗಪ್ಪ ಹೊರಪ್ಯಾಟಿ, ಭೀಮನಗೌಡ ಪಾಟೀಲ ಇಟಗಿ ಉಪಸ್ಥಿತರಿದ್ದರು.

# ಸೌಜನ್ಯ ಕೊಲೆ ಪ್ರಕರಣ: ತನಿಖೆಗೆ ಹಾಜರಾದ ಹಿಂದಿನ ಮೂವರು ತನಿಖಾಧಿಕಾರಿಗಳು



**ಮಂಗಳೂರು, ಅ.29:** ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣದ ಮರು ತನಿಖೆ ತೀವ್ರಗೊಂಡಿದ್ದು, ಇಂದು ಈ ಪ್ರಕರಣದ ಅಂದಿನ ತನಿಖಾಧಿಕಾರಿಗಳಾಗಿದ್ದ ಮೂವರು ಪೊಲೀಸ್ ಅಧಿಕಾರಿಗಳು ಮಂಗಳೂರಿನ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ಅಂದಿನ ಬೆಳ್ತಂಗಡಿ ಠಾಣೆ ಸಬ್‌ಇನ್ಸ್ ಪೆಕ್ಟರ್ ಯೋಗೇಶ್, ಸರ್ಕಲ್ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಹಾಗೂ ಸಿಐಡಿ ಡಿವೈಎಸ್‌ಪಿ ರುದ್ರಮುನಿ ಅವರು ಇಂದು ತಮ್ಮ ಕಡತಗಳೊಂದಿಗೆ ಮಂಗಳೂರಿನ ಹಳೆ ಡಿಸಿ ಕಟ್ಟಡದಲ್ಲಿ ತೆರೆಯಲಾಗಿರುವ ಎಸ್‌ಐಟಿ ಕಚೇರಿಗೆ ಹಾಜರಾದರು.

ಈ ಮೂವರು ಪೊಲೀಸ್ ಅಧಿಕಾರಿಗಳನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿರುವ ತನಿಖಾಧಿಕಾರಿ ಮನೋಜ್‌ಕುಮಾರ್ ನಾಯಕ್ ಅವರು ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಪಡೆದು ಕೊಂಡಿದ್ದಾರೆ. 2012 ರಲ್ಲಿ ಘಟನೆ ನಡೆದ ಆರಂಭಿಕ ದಿನಗಳಲ್ಲಿ ಪ್ರಮುಖ ಸಾಕ್ಷಿಗಳನ್ನು ನಾಶಪಡಿಸಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿದ್ದವು.

ಈ ಪ್ರಕರಣದ ಮರುತನಿಖೆಗೆ ಸುಪ್ರಿಂ ಕೋರ್ಟ್ ಆದೇಶಿಸಿ ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಿರುವುದರಿಂದ ಎಸ್‌ಐಟಿ ತನಿಖೆಯನ್ನು ಚುರುಕುಗೊಳಿಸಿದೆ. ಇತ್ತೀಚೆಗಷ್ಟೇ ಸೌಜನ್ಯ ತಾಯಿ ಕುಸುಮಾವತಿ ಅವರ ರಕ್ತದ ಮಾದರಿಯನ್ನು ಸಂಗ್ರಹಿಸಲಾಗಿದೆ.

ಇದೀಗ ಪ್ರಕರಣದ ತನಿಖೆಯ ಮುಂದುವರೆದ ಭಾಗವಾಗಿ ಈ ಮೂವರು ಅಧಿಕಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟೀಸ್ ನೀಡಿತ್ತು. ಈ ಹಿನ್ನಲೆಯಲ್ಲಿ ಅವರುಗಳು ಇಂದು ವಿಚಾರಣೆಗೆ ಹಾಜರಾಗಿದ್ದಾರೆ. ಎಸ್‌ಐಟಿ ಮುಖ್ಯಸ್ಥ ಐಜಿಪಿ ಶಶಿಕುಮಾರ್ ಅವರು ನಿನ್ನೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಪ್ರಕರಣದ ಮಾಹಿತಿಗಳನ್ನು ನೀಡಿ ಚರ್ಚಿಸಿದ್ದಾರೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಕ್ಕಾಗಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಪ್ರತಿಕೃತಿಯನ್ನು ದಹಿಸುವ ಮೂಲಕ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಗುರುವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು.

### ಮೈಸೂರಿನಲ್ಲಿ ಬಿಜೆಪಿ-ಜೆಡಿಎಸ್ ಮುಖಂಡರಿಂದ ಪ್ರತಿಭಟನೆ, ಕ್ಷಮೆಯಾಚನೆಗೆ ಆಗ್ರಹ

# ರಾಜಮನೆತನದ ಕುರಿತು ಸಚಿವ ಯತೀಂದ್ರ ಹೇಳಿಕೆಗೆ ವಿರೋಧ



**ಮೈಸೂರು, ಅ.29:** ಮೈಸೂರು ರಾಜಮನೆತನದ ಕುರಿತು ಸಚಿವ ಯತೀಂದ್ರ ಸಿದ್ದರಾಮಯ್ಯ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದ್ದು, ಇದನ್ನು ಖಂಡಿಸಿ ಮೈಸೂರಿನಲ್ಲಿ ಪ್ರತಿಭಟನೆ ನಡೆದಿದೆ.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಸೇರಿದಂತೆ ಹಲವು ನಾಗರಿಕರು ಭಾಗವಹಿಸಿ ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜಮನೆತನದ ಬಗ್ಗೆ ನೀಡಿರುವ ಹೇಳಿಕೆಗೆ ಯತೀಂದ್ರ ಸಿದ್ದರಾಮಯ್ಯ ಕೂಡಲೇ ಕ್ಷಮೆ ಕೇಳಬೇಕು. ಅಲ್ಲದೆ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಈ ವೇಳೆ ರಾಜ್ಯ ಸರ್ಕಾರ ಮತ್ತು ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು. ಮೈಸೂರು ದಸರಾ ಆಚರಣೆಗೆ ಸಂಬಂಧಿಸಿದಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ರಾಜ್ಯ ಸರ್ಕಾರಕ್ಕೆ ಬರೆದ ಪತ್ರದ ವಿಚಾರವಾಗಿ ಯತೀಂದ್ರ ಸಿದ್ದರಾಮಯ್ಯ ಪ್ರತಿಕ್ರಿಯಿಸಿ ದ್ದರು. ಮೈಸೂರು ಅರಮನೆ ಮಂಡಳಿ ಸರ್ಕಾರದ ಅಧೀನದಲ್ಲಿದೆ, ಅರಮನೆ ಜಾಗ ಸರ್ಕಾರಕ್ಕೆ ಸೇರಿದ್ದು. ರಾಜಮನೆತನದವರು ವಾಸಿಸಲು ಸ್ವಲ್ಪ ಜಾಗ ನೀಡಲಾಗಿದೆ ಅಷ್ಟೇ. ದಸರಾ ಅಂಬಾರಿಯನ್ನು ಸರ್ಕಾರ ಉಚಿತವಾಗಿ ಪಡೆಯುತ್ತಿಲ್ಲ, ಅದಕ್ಕೂ ಹಣ ಪಾವತಿಸುತ್ತಿದೆ ಎಂದು ಅವರು ಹೇಳಿದ್ದರು. ಈ ಹೇಳಿಕೆ ರಾಜ ಮನೆತನದ ಅಭಿಮಾನಿಗಳು ಮತ್ತು ಮೈಸೂರಿನ ಹಲವು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.

**ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ ಎಂದ ಯತೀಂದ್ರ:** ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಸಚಿವ ಯತೀಂದ್ರ ಸಿದ್ದರಾಮಯ್ಯ, ತಾವು ಮೈಸೂರು ರಾಜರ ಬಗ್ಗೆ ಕೆಟ್ಟದಾಗಿ ಮಾತನಾಡಿಲ್ಲ ಎಂದು ಹೇಳಿದ್ದಾರೆ. ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಅವರ ಬಗ್ಗೆಯೂ ಕೀಳಾಗಿ ಮಾತನಾಡಿಲ್ಲ. ಅವರ ಬಗ್ಗೆ ಗೌರವವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಪಾಲಿಗೆ ಆದರ್ಶ ವ್ಯಕ್ತಿ ಎಂದು ತಿಳಿಸಿದ್ದಾರೆ.

ತಮ್ಮ ಹೇಳಿಕೆಗಳಿಗೆ ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ ಎಂದಿರುವ ಯತೀಂದ್ರ, ಮೈಸೂರು ಅರಮನೆ ಸ್ವಾಧೀನ ಕಾಯ್ದೆ ನ್ಯಾಯಾಲಯದಲ್ಲಿ ವಿಚಾರಣೆ ಯಲ್ಲಿದ್ದರೂ, ಶಾಸನದ ಪ್ರಕಾರ ಅರಮನೆ ಸರ್ಕಾರಕ್ಕೆ ಸೇರಿದೆ ಎಂಬ ಅಂಶವನ್ನಷ್ಟೇ ಪ್ರಸ್ತಾಪಿಸಿದ್ದೇನೆ ಎಂದು ಸಮರ್ಥಿಸಿಕೊಂಡಿದ್ದಾರೆ.



### ಎಸ್‌ಎಸ್‌ಎಲ್‌ಸಿ ಉತ್ತಮ ಅಂಕ ಗಳಿಸಿದ

# ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವಿಮಾನಯಾನ ಭಾಗ್ಯ...!



**ಬೀದರ್, ಅ. 29:** ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ರೋತ್ಸಾಹ ನೀಡಲು ಶಿಕ್ಷಕರು ಒಂದು ವಿಶೇಷ ಯೋಚನೆಯನ್ನು ಮಾಡಿದ್ದರು. ತಮ್ಮ ಸ್ವಂತ ಹಣದಿಂದ ವಿದ್ಯಾರ್ಥಿಗಳಿಗೆ ವಿಶೇಷ ವಿಮಾನ ಪ್ರಯಾಣ ಟಿಕೆಟ್ ಬುಕ್ ಮಾಡಿ, ಮಕ್ಕಳಿಗೆ ಸ್ಟಡಿ ಟೂರ್ ಏರ್ಪಡಿಸಿದ್ದಾರೆ.

ಬೀದರ್ ನಗರದ ಕರ್ನಾಟಕ ಪ್ರೌಢಶಾಲೆ ವಿಜ್ಞಾನ ಶಿಕ್ಷಕ ರಫೀಕ್ ತಾಳಿಕೋಟಿ ಈ ಮಹತ್ವದ ಕೆಲಸ ಮಾಡಿದ್ದಾರೆ. ಶಾಲೆಯ ಶಿಕ್ಷಕರಾದ ಅವರು ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿ ವಿದ್ಯಾರ್ಥಿಗಳನ್ನು ವಿಮಾನ ಹತ್ತಿಸಿ ಅವರ ಕನಸು ನನಸು ಮಾಡಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಶಿಕ್ಷಕನಿಂದ ವಿದ್ಯಾರ್ಥಿಗಳಿಗೆ ಉಡುಗೊರೆ ಸಿಕ್ಕಿದೆ.

ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿಮಾನ ಯಾನದ ಭಾಗ್ಯ ಯೋಜನೆಯನ್ನು ವಿಜ್ಞಾನ ಶಿಕ್ಷಕರು ಘೋಷಣೆ ಮಾಡಿದ್ದರು. ಇದರಂತೆ ಬೀದರ್‌ನ ಕರ್ನಾಟಕ ಪ್ರೌಢಶಾಲೆಯ ಎಂಟು ವಿದ್ಯಾರ್ಥಿಗಳಿಗೆ ವಿಮಾನಯಾನ ಭಾಗ್ಯ ಕೊಡಿಸಿದ್ದಾರೆ.

**ಶಿಕ್ಷಕರ ಪ್ರಯತ್ನಕ್ಕೆ ಮೆಚ್ಚುಗೆ :** ಬೀದರ್ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ವಿದ್ಯಾರ್ಥಿಗಳು ಇಂದು ಪ್ರಯಾಣ ಬೆಳೆಸಿದ್ದಾರೆ. ಆ ಮೂಲಕ ಎಸ್‌ಎಸ್‌ಎಲ್‌ಸಿ ಸಾಧಕ ವಿದ್ಯಾರ್ಥಿಗಳಿಗೆ ಶಿಕ್ಷಕರಿಂದ ವಿಶೇಷ ಗೌರವ ಸಿಕ್ಕಿದೆ. ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಆಕಾಶದಲ್ಲಿ ಹಾರುವ ಅವಕಾಶ ನೀಡಲಾಗಿದ್ದು, ವಿದ್ಯಾರ್ಥಿಗಳ ಸಾಧನೆಗೆ ವಿಭಿನ್ನ ಪ್ರೋತ್ಸಾಹ ನೀಡುವ ಕಾರ್ಯವನ್ನು ಮಾಡಿರುವ ಶಿಕ್ಷಕ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಈ ಹಿಂದೆ ಶಿವಮೊಗ್ಗದ ಲಿಂಗಾಪುರ ಗ್ರಾಮದಲ್ಲಿಯೂ ಶಿಕ್ಷಕರು, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ವಿದ್ಯಾರ್ಥಿಗಳಿಗೆ ವಿಮಾನದಲ್ಲಿ ಪ್ರಯಾಣಿಸುವ ಅವಕಾಶವನ್ನು ಕಲ್ಪಿಸಿದ್ದರು. ಗ್ರಾಮದಲ್ಲಿದ್ದ 36 ವಿದ್ಯಾರ್ಥಿಗಳಿ ಪೈಕಿ 6, 7 ತರಗತಿಯ 10 ಮಂದಿಗೆ ವಿಮಾನ ಪ್ರಯಾಣಯಾನ ಭಾಗ್ಯ ಸಿಕ್ಕಿತ್ತು.

**ಐದು ಲಕ್ಷದೊಂದಿಗೆ ವಿಮಾನ ಪ್ರಯಾಣ ಭಾಗ್ಯ:** ಕೊಪ್ಪಳದ ಜಿಲ್ಲಾ ಬಹದೂರ್‌ಬಂಡಿ ಗ್ರಾಮದ ಶಾಲೆಯ ಹೆಡ್ ಮಾಸ್ಟರ್ ಬೀರಪ್ಪ ಅವರು ಸುಮಾರು ಐದು ಲಕ್ಷ ರೂಪಾಯಿ ಖರ್ಚು ಮಾಡಿ 24 ವಿದ್ಯಾರ್ಥಿಗಳು, ಶಿಕ್ಷಕರು, ಅಡುಗೆ ಸಹಾಯರು ಸೇರಿ ಒಟ್ಟು 40 ಮಂದಿಗೆ ವಿಮಾನ ಪ್ರಯಾಣ ಮಾಡಿಸಿದ್ದರು. ಜಿಂದಾಲ್ ವಿಮಾನ ನಿಲ್ದಾಣದಿಂದ ಪ್ರತ್ಯೇಕ ವಿಮಾನ ಬುಕ್ ಮಾಡಿ ಕರೆದುಕೊಂಡು ಬಂದಿದ್ದರು. ಕೊಪ್ಪಳದ ಎಂಪಿ ಹಿಟ್ನಾಲ್ ಅವರು ವಿದ್ಯಾರ್ಥಿಗಳ ಪ್ರವಾಸಕ್ಕೆ ಬಾವುಟ ಹಾರಿಸಿ ಗ್ರೀನ್ ಸಿಗ್ನಲ್ ನೀಡಿದ್ದರು.

**28 ವಿದ್ಯಾರ್ಥಿಗಳಿಗೆ ಲಕ್ಕಿ ಚಾನ್ಸ್:** ಇದಕ್ಕೂ ಮುನ್ನ ಮಹಾರಾಷ್ಟ್ರ ಅಮರಾವತಿ ಜಿಲ್ಲೆಯ 28 ವಿದ್ಯಾರ್ಥಿಗಳನ್ನು ವಿಮಾನದಲ್ಲಿ ಕರೆದುಕೊಂಡು ಹೋಗಲಾಗಿತ್ತು. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಇದರೊಂದಿಗೆ ವಿಮಾನದಲ್ಲಿ ಪ್ರಯಾಣಿಸಿದ್ದ ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದರು.

# ಚುನಾವಣಾ ಫಲಿತಾಂಶ: ಸರ್ಕಾರ ತನ್ನ ಆಡಳಿತದ ಬಗ್ಗೆ ಪುನರಾವಲೋಕನ ಮಾಡಿಕೊಳ್ಳಬೇಕಾದ ಸ್ಪಷ್ಟ ಸೂಚನೆ –ರವಿಕುಮಾರ್

**ಬಳ್ಳಾರಿ,ಅ.29:** ವಿಧಾನಸಭೆ ಮತ್ತು ಉಪಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದ ಕಾಂಗ್ರೆಸ್‌ಗೆ ಜನರು ತಮ್ಮ ಕೈಯಲ್ಲಿದ್ದಾರೆ ಎಂಬ ಭ್ರಮೆ ಉಂಟಾಗಿತ್ತು. ಆದರೆ, ಇತ್ತೀಚಿನ ಚುನಾವಣಾ ಫಲಿತಾಂಶವು ರಾಜ್ಯ ಸರ್ಕಾರ ತನ್ನ ಆಡಳಿತದ ಬಗ್ಗೆ ಪುನರಾವಲೋಕನ ಮಾಡಿಕೊಳ್ಳಬೇಕಾದ ಸ್ಪಷ್ಟ ಸೂಚನೆ ನೀಡಿದೆ. ನಾಲ್ಕಕ್ಕೆ ನಾಲ್ಕೂ ಸ್ಥಾನಗಳನ್ನು ಗೆಲ್ಲುವ ಮೂಲಕ ಸುಶಿಕ್ಷಿತ ಮತದಾರರು ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಎನ್. ರವಿಕುಮಾರ್ ಹೇಳಿದರು. ಹೇಳಿದರು. ಎಂದು ಎನ್.ರವಿಕುಮಾರ್ ಹೇಳಿದರು.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕರ ಕೊರತೆ ಇದೆ. ಶಾಲಾ–ಕಾಲೇಜುಗಳು ಅತಿಥಿ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ವ್ಯವಸ್ಥೆಯ ಸ್ಥಿತಿ ಶೋಚನೀಯವಾಗಿದೆ. ಈ ಭಾಗದ ಸಮಸ್ಯೆಗಳನ್ನು ಕೇಳುವವರೇ ಇಲ್ಲದಂತಾಗಿದೆ. ರಾಜ್ಯ ಸರ್ಕಾರವು ಬಡವರು, ಶಿಕ್ಷಕರು, ಶಾಲಾ ಮಕ್ಕಳು, ಪದವೀಧರರು ಸೇರಿದಂತೆ ಎಲ್ಲವರ್ಗದ ಜನರ




ನಗರದ ಮೋಕಾ ರಸ್ತೆ ವಾಜಪೇಯಿ ಬಡಾವಣೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಇಂದು ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಜನ–ರಿಗೆ ನೀಡಿದ್ದ ಭರವಸೆಗಳನ್ನು ಮರೆತಿದೆ. ಜನರು, ಶಿಕ್ಷಕರು ಮತ್ತು ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸದೆ, ಸಚಿವರು ಜನರ ಕಡೆಗೆ ಗಮನ ಹರಿಸುತ್ತಿರಲಿಲ್ಲ. ಸರ್ಕಾರಿ ಶಾಲೆಗಳಿಗೆ ಸಮರ್ಪಕವಾಗಿ ಸಮವಸ್ತ್ರ

ವಿತರಿಸಿಲ್ಲ. ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗಿದ್ದು, ಬಾಣಂತಿಯರ ಸಾವುಗಳೂ ಸಂಭವಿಸಿವೆ. ಇಂತಹ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದರು.

ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ,ಎಂದು ಹಣಕಾಸು ಇಲಾಖೆಯೇ ಪತ್ರ ನೀಡಿತ್ತು. ಹೊಸ ಕಾಮಗಾರಿಗಳನ್ನು ಘೋಷಿಸಬಾರದು, ಇನ್ನು ಮುಂದೆ ಸಾಲ ಮಾಡುವ ಪರಿಸ್ಥಿತಿ ಇಲ್ಲ ಎಂಬ ಸೂಚನೆಗಳಿದ್ದರೂ, ಮಂಗಳೂರಿನಲ್ಲಿ 32 ಸಾವಿರ ಕೋಟಿ ಮೊತ್ತದ ಯೋಜನೆಗಳನ್ನು ಘೋಷಿಸಿ ಬಂದಿದೆ. ಸರ್ಕಾರದ ಈ ನಡೆಗಳನ್ನು ರಾಜ್ಯದ ಶಿಕ್ಷಕರು ಮತ್ತು ಪದವೀಧರರು ಗಮನಿಸುತ್ತಿದ್ದರು. ಹೀಗಾಗಿ ಚುನಾವಣೆಯಲ್ಲಿ ತಮ್ಮ ಮತಗಳ ಮೂಲಕ ಸರ್ಕಾರಕ್ಕೆ ಉತ್ತರ ನೀಡಿದ್ದಾರೆ ಸಮಸ್ಯೆಗಳಿಗೆ ಸ್ಪಂದಿಸಿ, ತನ್ನ ಆಡಳಿತದ ಬಗ್ಗೆ ಪುನರ್ವಿಮರ್ಶೆ ಮಾಡಿಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕುರಿತು ಕಾಂಗ್ರೆಸ್ ನಾಯಕರು ನೀಡುತ್ತಿರುವ ಹೇಳಿಕೆಗಳನ್ನು ಖಂಡಿಸಿದ ರವಿಕುಮಾರ್, ದೇಶದ ಪ್ರಧಾನಿಯನ್ನು ಕಾಂಗ್ರೆಸ್ ನೀಡಿದ ಭಿಕ್ಷೆ ಎಂದು ಭಾವಿಸಬಾರದು.

ದೇಶದ ಜನರು ನೀಡಿದ ಜನಾದೇಶದಿಂದ ಅವರು ಪ್ರಧಾನಿಯಾಗಿದ್ದಾರೆ. ಪ್ರಧಾನಿಯವರ ಕುಟುಂಬದ ಬಗ್ಗೆ ವೈಯಕ್ತಿಕ ಟೀಕೆ ಮಾಡುವುದು ಸರಿಯಲ್ಲ. ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿರುವುದು ಜನರ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದರು.

ಇಂತಹ ವೈಯಕ್ತಿಕ ಟೀಕೆಗಳು ಕಲ್ಯಾಣ ಕರ್ನಾಟಕದ ಸಂಸ್ಕೃತಿಯಲ್ಲ. ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳದೆ ನಡೆದುಕೊಂಡರೆ ಮತದಾರರು ಚುನಾವಣೆಯ ಮೂಲಕವೇ ತಕ್ಕ ಪಾಠ ಕಲಿಸುತ್ತಾರೆ. ಇತ್ತೀಚಿನ ಫಲಿತಾಂಶವನ್ನು ಬಿಜೆಪಿ ಸ್ವಾಗತಿಸುತ್ತದೆ. ಎನ್‌ಡಿಎ ಅಭ್ಯರ್ಥಿಗಳಿಗೆ ಮತ ನೀಡಿದ ಎಲ್ಲ ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಪಕ್ಷದ ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡಿದ್ದಾರೆ ಎಂದು ಎನ್. ರವಿಕುಮಾರ್ ತಿಳಿಸಿದರು.

# ಬಕ್ರೀದ್‌ನಲ್ಲಿ ಗೋಹತ್ಯೆ ವಿರೋಧಿಸಿದ್ದ ಪ್ರಕರಣ: ಶಾಸಕ ಶರಣು ಸಲಗರ ನಿರ್ದೋಷಿ



**ಬಸವಕಲ್ಯಾಣ, ಅ. 29:** ಬಕ್ರೀದ್ ನಿಮಿತ್ತ ಕುರ್ಬಾನಿಯಲ್ಲಿ ಗೋಹತ್ಯೆ ಮಾಡುತ್ತಿದ್ದಾರೆಂದು ಕಸಾಯಿ ಖಾನೆಗಳಿಗೆ ನುಗ್ಗಿದ ವಿಷಯಯಕ್ಕೆ ಸಂಬಂಧಿಸಿದಂತೆ ಶಾಸಕ ಶರನು ಸಲಗರ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ (ಜನಪ್ರತಿನಿಧಿಗಳ) ನ್ಯಾಯಾಲಯ, ಶಾಸಕ ಶರಣು ಸಲಗರ ಸೇರಿದಂತೆ ಎಲ್ಲ 9 ಜನರನ್ನು ನಿರ್ದೋಷಿಗಳು ಎಂದು ಪ್ರಕಟಿಸಿ, ತೀರ್ಪು ನೀಡಿದೆ.

ಇಲ್ಲಿನ ಹಿರೇಮಠ ಕಾಲನಿ ಮನೆಯೊಂದರಲ್ಲಿ ಬಕ್ರೀದ್ ನಿಮಿತ್ತ ಗೋವುಗಳ ಕುರ್ಬಾನಿ ಮಾಡಲಾಗುತ್ತಿದೆ ಎಂದು ದೂರಿ, 2023ರ ಜು.1ರಂದು ಶಾಸಕ ಸಲಗರ ಹಾಗೂ ಇತರರು ಸ್ಥಳಕ್ಕೆ ಭೇಟಿ ನೀಡಿದ್ದರು. ಸಾಕು ಪ್ರಾಣಿಯಾದ ಗೋವು ಬಲಿ ನೀಡುವುದು ಅಪರಾಧ. ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕೆಂದು ಶಾಸಕರು ಒತ್ತಾಯಿಸಿದ್ದರು. ನಮ್ಮ ಧರ್ಮದ ಸಂಪ್ರದಾಯದಂತೆ ಕುರ್ಬಾನಿ ಕೊಡುವಾಗ, ಅವ್ಯಾಚ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿ, ಮತೀಯ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ ಎಂದು ಶಾಸಕರು ಮತ್ತು ಇತರರ ವಿರುದ್ಧ ಇಲ್ಲಿನ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಸಂಬಂಧ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ಸಂದೀಪ್ ಪಾಟೀಲ್, ಭಾರತೀಯ ದಂಡ ಸಂಹಿತೆಯ ಕಲಂ 143, 147, 448, 504, 506, 298 ಸಹ ಕಲಂ 149ರಡಿಯಲ್ಲಿನ ಅಪರಾಧಕ್ಕೆ ಸಂಬಂಧಿದಂತೆ ಶಾಸಕ ಸಲಗರ ಸೇರಿದಂತೆ ಎಲ್ಲ 9 ಜನರು ನಿರ್ದೋಷಿಗಳೆಂದು ಆದೇಶ ನೀಡಿದ್ದಾರೆ. ಶಾಸಕ ಸಲಗರ ಸೇರಿದಂತೆ ಎಲ್ಲ 9 ಜನರ ಪರ ಹೈಕೋರ್ಟ್ ವಕೀಲ ಅಮೀತ್ ಸಾಹುಕಾರ್ ಧನ್ನೂರ (ಆರ್) ವಾದ ಮಂಡಿಸಿದರು.

# ಕ್ಯೂಬಾ ಮೇಲಿನ ಅಮೆರಿಕದ ನಿರ್ಬಂಧ ಕೊನೆಗೊಳಿಸಲು ನಿರ್ಣಯ: ವಿಶ್ವಸಂಸ್ಥೆ ಅಂಗೀಕಾರ

**ವಿಶ್ವಸಂಸ್ಥೆ, ಅ.29: ಕ್ಯೂಬಾ ಮೇಲಿನ ದಶಕಗಳಿಂದ ಅಮೆರಿಕ ವಿಧಿಸಿರುವ ಆರ್ಥಿಕ ನಿರ್ಬಂಧವನ್ನು ಕೊನೆಗೊಳಿಸಲು ಕರೆ ನೀಡುವ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಬುಧವಾರ ಅಂಗೀಕರಿಸಿತು, 130 ದೇಶಗಳು ಪರವಾಗಿ ಮತ ಚಲಾಯಿಸಿದವು,**

ನಿರ್ಣಯವನ್ನು 17 ದೇಶಗಳು ವಿರೋಧಿಸಿದರೆ, 25 ದೇಶಗಳು ಮತದಾನದಿಂದ ಹೊರಗುಳಿದವು. ಕೆರಿಬಿಯನ್ ದ್ವೀಪದ ಮೇಲಿನ ಆರ್ಥಿಕ, ವಾಣಿಜ್ಯ ಮತ್ತು ಆರ್ಥಿಕ ನಿರ್ಬಂಧಗಳನ್ನು ತೆಗೆದುಹಾಕುವಂತೆ ವಾಷಿಂಗ್ಟನ್‌ಗೆ ಒತ್ತಾಯಿಸುವ ನಿರ್ಣಯವನ್ನು ಸಭೆ ಅಂಗೀಕರಿಸಿದ ಸತತ 34ನೇ ವರ್ಷವನ್ನು ಈ ಮತದಾನ ಗುರುತಿಸಿದೆ. 1996 ರ ಹೆಲ್ಮ್ಸ್–ಬರ್ಟನ್ ಕಾಯ್ದೆ ಸೇರಿದಂತೆ ಅಮೆರಿಕದ ಕಾನೂನುಗಳ ಬಾಹ್ಯ ಪರಿಣಾಮಗಳ ಬಗ್ಗೆ ನಿರ್ಣಯವು ಕಳವಳ ವ್ಯಕ್ತಪಡಿಸಿತು, ಇದು ಕ್ಯೂಬಾದೊಂದಿಗೆ ವ್ಯಾಪಾರ ಮಾಡುವ ವಿದೇಶಿ ಕಂಪನಿಗಳು ಮತ್ತು ವ್ಯಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ.

ಇತರ ದೇಶಗಳ ಸಾರ್ವಭೌಮತ್ವವನ್ನು ಉಲ್ಲಂಘಿಸುವ ಕ್ರಮಗಳನ್ನು ಜಾರಿಗೊಳಿಸುವುದರಿಂದ ದೂರವಿರಲು ರಾಜ್ಯಗಳನ್ನು ಒತ್ತಾಯಿಸಿತು ಮತ್ತು ಅಂತಹ ನಿರ್ಬಂಧಗಳನ್ನು ಕಾಯ್ದುಕೊಳ್ಳುವವರು ಅವುಗಳನ್ನು ರದ್ದುಗೊಳಿಸಲು ಅಥವಾ ಅಮಾನ್ಯಗೊಳಿಸಲು ಕರೆ ನೀಡಿದರು. ಎರಡು ದಿನಗಳ ಚರ್ಚೆಯ ನಂತರ ಮತದಾನ ನಡೆಯಿತು, ಈ ಸಂದರ್ಭದಲ್ಲಿ ಅನೇಕ ದೇಶಗಳು ನಿರ್ಬಂಧ ಕೊನೆಗೊಳಿಸಲು ಕರೆ ನೀಡಿದವು.

ಮಂಗಳವಾರ ವಿಶ್ವಸಂಸ್ಥೆಯ ಅಮೆರಿಕದ ರಾಯಭಾರಿ ಮೈಕ್ ವಾಲ್ಟ್ಜ್ ಮತ್ತು ಕ್ಯೂಬನ್ ನಿಯೋಗದ ಸದಸ್ಯರ ನಡುವೆ ನಡೆದ ಬಿಸಿ ವಾಗ್ವಾದದ ನಂತರ ಕಲಾಪವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

ಕ್ಯೂಬಾದಲ್ಲಿ ಭ್ರಷ್ಟಾಚಾರದ ಪುರಾವೆಗಳನ್ನು ತೋರಿಸುವ ಛಾಯಾಚಿತ್ರಗಳನ್ನು ವಾಲ್ಟ್ಜ್ ಪ್ರಸ್ತುತಪಡಿಸಿದರು, ಇದು ಕ್ಯೂಬನ್ ಪ್ರತಿನಿಧಿಗಳು ಅಡ್ಡಿಪಡಿಸಿ ಆದೇಶದ ಅಂಶವನ್ನು ಎತ್ತುವಂತೆ ಪ್ರೇರೇಪಿಸಿತು. ಕ್ಯೂಬಾದ ವಿದೇಶಾಂಗ ಸಚಿವ ಬ್ರೂನೋ ರೊಡ್ರಿಗಸ್ ವೇದಿಕೆಯ ಬಳಿಗೆ ಬಂದು ವಾಲ್ಟ್ಜ್ ಸುಳ್ಳು ಹೇಳುತ್ತಿದ್ದಾರೆ ಎಂದು ಆರೋಪಿಸಿದರು, ಆದರೆ ಯುಎಸ್ ರಾಯಭಾರಿ ಕ್ಯೂಬಾ ನಿಯೋಗ ಹಿಂದೆ ಸರಿಯಬೇಕೆಂದು ಒತ್ತಾಯಿಸಿದರು. ಕಲಾಪಗಳು



ಪುನರಾರಂಭವಾಗುವ ಮೊದಲು ಸಭೆಯ ಅಧ್ಯಕ್ಷರು ಚರ್ಚೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದರು.

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ ಪರವಾಗಿ ಮಾತನಾಡಿದ ಸಿಂಗಾಪುರದ ಪ್ರತಿನಿಧಿ, ಅಗತ್ಯ ಔಷಧಿಗಳ ಕೊರತೆ ಮತ್ತು ಆಹಾರ ಉತ್ಪಾದನೆ ಕಡಿಮೆಯಾಗುವುದು ಸೇರಿದಂತೆ ಕ್ಯೂಬಾದ ಹದಗೆಡುತ್ತಿರುವ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ವಿಶ್ವಸಂಸ್ಥೆಯ ಚಾರ್ಟರ್ನ ರಕ್ಷಣೆಯಲ್ಲಿ ಸ್ನೇಹಿತರ ಗುಂಪನ್ನು ಪ್ರತಿನಿಧಿಸುವ ಎರಿಟ್ರಿಯಾ, ನಿರ್ಬಂಧವನ್ನು ಅಂತರರಾಷ್ಟ್ರೀಯ ಕಾನೂನಿನ ದೀರ್ಘಕಾಲದ ಉಲ್ಲಂಘನೆ ಎಂದು ಖಂಡಿಸಿತು ಮತ್ತು ಕ್ಯೂಬನ್ ಜನರು ಬಾಹ್ಯ ಒತ್ತಡವಿಲ್ಲದೆ ತಮ್ಮದೇ ಆದ ಭವಿಷ್ಯವನ್ನು ನಿರ್ಧರಿಸಲು ಮುಕ್ತರಾಗಿರಬೇಕು ಎಂದು ಹೇಳಿದರು. ಅಲಿಪ್ತ ಚಳವಳಿಯ ಪರವಾಗಿ ಮಾತನಾಡಿದ ಉಗಾಂಡಾ, ಅಮೆರಿಕದ ನಿರ್ಬಂಧಗಳನ್ನು ಬಿಗಿಗೊಳಿಸುವುದನ್ನು ಸಾಮೂಹಿಕ ಶಿಕ್ಷೆಯ ಒಂದು ರೂಪವೆಂದು ವಿವರಿಸಿತು. ಅದರ ಪ್ರತಿನಿಧಿಯು ಆಸ್ಪತ್ರೆಗಳು, ಶಾಲೆಗಳು, ನೀರು ಸರಬರಾಜು ಮತ್ತು ಆಹಾರ ಸಂರಕ್ಷಣೆಯನ್ನು ಅಡ್ಡಿಪಡಿಸಿದ ದೀರ್ಘಕಾಲದ ವಿದ್ಯುತ್ ಕಡಿತವನ್ನು ಉಲ್ಲೇಖಿಸಿದರು. ಆಫ್ರಿಕನ್ ಸಮೂಹವನ್ನು ಪ್ರತಿನಿಧಿಸುವ ನಮೀಬಿಯಾ, ಆಫ್ರಿಕನ್ ದೇಶಗಳೊಂದಿಗೆ ಕ್ಯೂಬಾದ ಐತಿಹಾಸಿಕ ಒಗ್ಗಟ್ಟನ್ನು ಎತ್ತಿ ತೋರಿಸಿತು ಮತ್ತು ಆಫ್ರಿಕನ್ ಒಕ್ಕೂಟವು ಸತತ 17ನೇ ವರ್ಷಕ್ಕೆ ನಿರ್ಬಂಧವನ್ನು ತೆಗೆದುಹಾಕುವಂತೆ ಕರೆ ನೀಡಿದೆ ಎಂದು ಹೇಳಿದರು. ಗ್ರೂಪ್ ಆಫ್ 77 ಮತ್ತು ಚೀನಾ ಪರವಾಗಿ ಮಾತನಾಡಿದ ಉರುಗ್ವೆ, ಮೂರನೇ ದೇಶಗಳನ್ನು ಒಳಗೊಂಡ ವ್ಯಾಪಾರ, ಹೂಡಿಕೆ ಮತ್ತು ಹಣಕಾಸು ವ್ಯವಹಾರದ ಮೇಲಿನ ನಿರ್ಬಂಧಗಳನ್ನು ಟೀಕಿಸಿತು, ಅವು ಕ್ಯೂಬಾದ ಸುಸ್ಥಿರ ಅಭಿವೃದ್ಧಿಯ ನಿರೀಕ್ಷೆಗಳನ್ನು ಹಾಳುಮಾಡುತ್ತವೆ ಎಂದು ಎಚ್ಚರಿಸಿತು.

"ಕ್ಯೂಬಾ ವಿರುದ್ಧ ಅಮೆರಿಕಾ ವಿಧಿಸಿರುವ ಆರ್ಥಿಕ, ವಾಣಿಜ್ಯ ಮತ್ತು ಆರ್ಥಿಕ ನಿರ್ಬಂಧವನ್ನು ಕೊನೆಗೊಳಿಸುವ ಅಗತ್ಯ" ಎಂಬ ಶೀರ್ಷಿಕೆಯ ನಿರ್ಣಯವನ್ನು ಪರಿಚಯಿಸಿದ ರೋಡ್ರಿಗಸ್, ಮಂಗಳವಾರದ ಚರ್ಚೆಯ ಸಮಯದಲ್ಲಿ ಯುಎಸ್ ನಿಯೋಗದ ನಡವಳಿಕೆಯನ್ನು ತಿರಸ್ಕರಿಸಿದರು. "ಕ್ಯೂಬಾ ಬೆದರಿಕೆಯಲ್ಲ. ದಿಗ್ಬಂಧನವು ಒಂದು ಬೆದರಿಕೆ" ಎಂದು ಅವರು ಹೇಳಿದರು. 1959 ರ ಕ್ಯೂಬನ್ ಕ್ರಾಂತಿಯ ನಂತರ ಅಮೆರಿಕ ಮೊದಲು 1960 ರಲ್ಲಿ ಕ್ಯೂಬಾ ವಿರುದ್ಧ ವ್ಯಾಪಾರ ನಿರ್ಬಂಧಗಳನ್ನು ಪರಿಚಯಿಸಿತು ಮತ್ತು 1962 ರಲ್ಲಿ ಸಮಗ್ರ ಆರ್ಥಿಕ, ವಾಣಿಜ್ಯ ಮತ್ತು ಆರ್ಥಿಕ ನಿರ್ಬಂಧವನ್ನು ವಿಧಿಸಿತು.

ಮಾರ್ಚ್ 1996 ರಲ್ಲಿ ಜಾರಿಗೆ ಬಂದ ಹೆಲ್ಮ್ಸ್–ಬರ್ಟನ್ ಕಾಯಿದೆಯು, ಕ್ಯೂಬಾ ಸರ್ಕಾರವು ಮುಟ್ಟುಗೋಲು ಹಾಕಿಕೊಂಡ ಆಸ್ತಿಯನ್ನು ಒಳಗೊಂಡ ಕೆಲವು ವ್ಯವಹಾರಗಳ ಮೇಲೆ ವಿದೇಶಿ ಕಂಪನಿಗಳನ್ನು ಸಂಭಾವ್ಯ ಕಾನೂನು ಕ್ರಮಕ್ಕೆ ಒಡ್ಡುವ ಮೂಲಕ ನಿರ್ಬಂಧದ ವ್ಯಾಪ್ತಿಯನ್ನು ವಿಸ್ತರಿಸಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಹವಾನಾ ಮೇಲೆ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ.

# ನೆತನ್ಯಾಹು ಸೋಲಿಗೆ ಅರಬ್ ಪಕ್ಷಗಳ ಸಂಚು: ಲಿಕುಡ್ ಪಕ್ಷ ಆರೋಪ

## ತನಿಖೆಗೆ ಇಸ್ರೇಲ್ ಅಧ್ಯಕ್ಷರ ಆದೇಶ : ಕತಾರ್ ನಿಂದ ಆರೋಪ ನಿರಾಕರಣೆ



ಟೆಲ್ ಅವೀವ್: ಅ.29: 27ರಂದು: ನಡೆದ ಇಸ್ರೇಲ್ ಚುನಾವಣೆಯಲ್ಲಿ ಅರಬ್ ನೇತೃತ್ವದ ಪಕ್ಷಗಳು ಅಕ್ರಮ ಎಸಗುವ ಮೂಲಕ ಮತಗಳನ್ನು ಕದ್ದಿವೆ ಹಾಗೂ ಮತದಾರರಿಗೆ ಬೆದರಿಕೆ ಹಾಕಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಲಿಕುಡ್ ಪಕ್ಷ ಆರೋಪಿಸಿದೆ. ಈ ಬೆಳವಣಿಗೆಯ ಬೆನ್ನಲ್ಲೇ ವಿದೇಶಿ ಹಸ್ತಕ್ಷೇಪದ ಶಂಕೆಯ ಕುರಿತು ಅಧಿಕೃತ ತನಿಖೆಗೆ ಆದೇಶಿಸಲಾಗಿದೆ. ಆದರೆ, ಕತಾರ್ ಮತ್ತು ಅರಬ್ ಪಕ್ಷಗಳು ಆರೋಪವನ್ನು ತಳ್ಳಿಹಾಕಿವೆ. ಮತ ಎಣಿಕೆ ಮುಂದುವರಿದಿರುವುದರಿಂದ ಇಸ್ರೇಲ್ ಚುನಾವಣೆಯ ಫಲಿತಾಂಶ ಇನ್ನೂ ಅನಿಶ್ಚಿತವಾಗಿದೆ. ಶೇ.93ರಷ್ಟು ಮತಗಳ ಎಣಿಕೆ ಆಧರಿಸಿದ ತಾತ್ಕಾಲಿಕ ಫಲಿತಾಂಶಗಳ ಪ್ರಕಾರ, ನೆತನ್ಯಾಹು ನೇತೃತ್ವದ ಮೈತ್ರಿಕೂಟ 53 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಗಡಿ ಐಸೆನ್ಕೋಟ್ ನೇತೃತ್ವದ ಪ್ರತಿಪಕ್ಷಗಳ ಮೈತ್ರಿಕೂಟ 48 ಸ್ಥಾನಗಳನ್ನು ಪಡೆದಿದೆ. ಅರಬ್ ನೇತೃತ್ವದ ಪಕ್ಷಗಳು 19 ಸ್ಥಾನಗಳನ್ನು ಹೊಂದಿವೆ. ರಾ'ಮ್ ಪಕ್ಷದ ಸ್ಥಾನಗಳ ಸಂಖ್ಯೆ ಏಳರಿಂದ ಎಂಟಕ್ಕೆ ಏರಿದ್ದರೆ, ಜಂಟಿ ಪಟ್ಟಿ (ಜಾಯಿಂಟ್ ಲಿಸ್ಟ್) ಪಕ್ಷದ ಸ್ಥಾನಗಳು 12ರಿಂದ 11ಕ್ಕೆ ಇಳಿದಿವೆ ಎಂದು ವರದಿಯಾಗಿದೆ.

ಸಮೀಕ್ಷೆಯ ತನಿಖೆಯ ನಡುವೆ ನೆತನ್ಯಾಹು ಅವರ 'ಜನಾಂಗೀಯ' ಚುನಾವಣಾ ವಂಚನೆಯ ಆರೋಪಗಳನ್ನು ಅರಬ್ ಜಂಟಿ ಪಟ್ಟಿ ಖಂಡಿಸಿದೆ:

ಇಸ್ರೇಲ್‌ನ ಅರಬ್ ರಾಜಕೀಯ ಮೈತ್ರಿಕೂಟ, ಜಾಯಿಂಟ್ ಲಿಸ್ಟ್, ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಬಲಪಂಥೀಯ ಬಣಗಳು ಇತ್ತೀಚಿನ ನೆಸ್ಸೆಟ್ ಚುನಾವಣೆಗಳನ್ನು ಅಪಖ್ಯಾತಿಗೊಳಿಸಲು ಸಂಘಟಿತ ಅಭಿಯಾನವನ್ನು ಆಯೋಜಿಸುತ್ತಿವೆ ಎಂದು ತೀವ್ರವಾಗಿ ಆರೋಪಿಸಿದೆ. ಚುನಾವಣಾ ವಂಚನೆ ಮತ್ತು ವಿದೇಶಿ ಹಸ್ತಕ್ಷೇಪದ 'ಜನಾಂಗೀಯ ಆರೋಪಗಳು' ಎಂದು ಕರೆಯಲಾದವುಗಳೊಂದಿಗೆ ಸಹಕಾರವನ್ನು ನಿಲ್ಲಿಸುವಂತೆ ಮೈತ್ರಿಕೂಟ ವಿರೋಧ ಪಕ್ಷಗಳನ್ನು ಒತ್ತಾಯಿಸಿದೆ. ಸಾರ್ವಜನಿಕ ಹೇಳಿಕೆಯಲ್ಲಿ, ಜಾಯಿಂಟ್ ಲಿಸ್ಟ್ ಅರಬ್ ಪಕ್ಷಗಳ ವಿರುದ್ಧದ ಆರೋಪಗಳನ್ನು ತಳ್ಳಿಹಾಕಿತು, ಐತಿಹಾಸಿಕವಾಗಿ ಮಹತ್ವದ ಚುನಾವಣಾ ಪ್ರದರ್ಶನದ ನಂತರ ಅವರ ರಾಜಕೀಯ ಪ್ರಭಾವವನ್ನು ಕಡಿಮೆ ಮಾಡುವ ಗುರಿಯನ್ನು ಈ ಹಕ್ಕುಗಳು ಪ್ರತಿಪಾದಿಸಿದವು. "ನೆತನ್ಯಾಹು ಅವರ ಕೆಟ್ಟ ಸುಳ್ಳುಗಳು ಮತ್ತು ಜನಾಂಗೀಯ ಕಹಾನಿಸ್ಟ್ ಗಳೊಂದಿಗೆ ಸಹಕರಿಸುವುದನ್ನು ನಿಲ್ಲಿಸಲು ನಾವು ವಿರೋಧ ಪಕ್ಷದ ನಾಯಕರನ್ನು ಕರೆಯುತ್ತೇವೆ. ನೆತನ್ಯಾಹು ಅವರ ಕೈಯಲ್ಲಿ ಕೈಗೊಂಬೆಗಳಾಗಿರಬೇಡಿ ಮತ್ತು ಅವರ ಪ್ರಚೋದನೆ ಅಭಿಯಾನವನ್ನು ಪ್ರಚಾರ ಮಾಡುವುದನ್ನು ನಿಲ್ಲಿಸಿ" ಎಂದು ಮೈತ್ರಿಕೂಟ ಘೋಷಿಸಿತು.

ಚುನಾವಣಾ ಸಮಿತಿ ಮುಖ್ಯಸ್ಥರು ವಂಚನೆಯ ಹಕ್ಕುಗಳನ್ನು ತಳ್ಳಿಹಾಕುತ್ತಾರೆ, ಕಾನೂನುಬದ್ಧ ನಡವಳಿಕೆಯನ್ನು ಉಲ್ಲೇಖಿಸುತ್ತಾರೆ:

ಇಸ್ರೇಲ್‌ನ ಕೇಂದ್ರ ಚುನಾವಣಾ ಸಮಿತಿಯ ಕಾರ್ಯಕಾರಿ ಮಹಾನಿರ್ದೇಶಕ ಡೀನ್ ಲಿವ್ನೆ, ಇತ್ತೀಚಿನ ನೆಸ್ಸೆಟ್ ಮತದಾನವನ್ನು ಕಾನೂನು ಬದ್ಧವಾಗಿ ನಡೆಸಲಾಗಿದೆ ಎಂದು ಪ್ರತಿಪಾದಿಸುತ್ತಾ, ವ್ಯಾಪಕ ಚುನಾವಣಾ ವಂಚನೆಯ ಆರೋಪಗಳನ್ನು ಬಲವಾಗಿ ನಿರಾಕರಿಸಿದ್ದಾರೆ. ಮತದಾನದ ಅಕ್ರಮಗಳು ಮತ್ತು ವಿದೇಶಿ ಹಸ್ತಕ್ಷೇಪದ ಬಗ್ಗೆ ತನಿಖೆ ನಡೆಸಬೇಕೆಂಬ ಬೇಡಿಕೆಗಳ ನಂತರ ಅವರ ಹೇಳಿಕೆಯು ತೀವ್ರ ರಾಜಕೀಯ ಪರಿಶೀಲನೆಯ ನಂತರ ನಡೆಯಿತು. ಇದಕ್ಕೂ ಮೊದಲು, ಕೇಂದ್ರ ಚುನಾವಣಾ ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ನೋಮ್ ಸೊಹ್ಲ್‌ಬರ್ಗ್ ಅವರು ಶಿನ್ ಬೆಟ್ ಮುಖ್ಯಸ್ಥ ಡೇವಿಡ್ ಜಿನಿ ಅವರಿಗೆ ಇಸ್ರೇಲ್ ಹಿತಾಸಕ್ತಿಗಳ ವಿರುದ್ಧ ಹಣಕಾಸು ಒದಗಿಸುವ ಮೂಲಕ ಅನುಚಿತ ವಿದೇಶಿ ಪ್ರಭಾವದ ಅನುಮಾನಗಳನ್ನು ತನಿಖೆ ಮಾಡುವಂತೆ ನಿರ್ದೇಶಿಸಿದರು.

**ಚುನಾವಣಾ ವಂಚನೆಯ ಬಗ್ಗೆ ಇಸ್ರೇಲ್ ಪೊಲೀಸರು ಪೂರ್ಣ ತನಿಖೆ ನಡೆಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ:**

ಚುನಾವಣೆಗೆ ಸಂಬಂಧಿಸಿದ ಅಪರಾಧಗಳ ಎಲ್ಲಾ ದೂರುಗಳು ಮತ್ತು ಅನುಮಾನಗಳ ಬಗ್ಗೆ, ವಿಶೇಷವಾಗಿ ಆಪಾದಿತ ವಿದೇಶಿ ನಿಧಿಗೆ ಸಂಬಂಧಿಸಿದವುಗಳ ಬಗ್ಗೆ ಇಸ್ರೇಲ್ನ ಪೊಲೀಸ್ ಪಡೆ ಸಂಪೂರ್ಣ ಮತ್ತು ಪಕ್ಷಪಾತವಿಲ್ಲದ ತನಿಖೆಯನ್ನು ಪ್ರತಿಜ್ಞೆ ಮಾಡಿದೆ. ಇತ್ತೀಚಿನ ಚುನಾವಣೆಯ ಮೇಲೆ ಬಾಹ್ಯ ಹಣಕಾಸು ನೆರವು ಪ್ರಭಾವ ಬೀರಿದೆ ಎಂಬ ಆರೋಪಗಳ ಬಗ್ಗೆ ತನಿಖೆ ನಡೆಸುವಂತೆ, ದೇಶದ ಆಂತರಿಕ ಭದ್ರತಾ ಸಂಸ್ಥೆಯಾದ 'ಷಿನ್ ಬೆಟ್'ಗೆ ಇಸ್ರೇಲ್ ಚುನಾವಣಾ ಸಮಿತಿಯ ಅಧ್ಯಕ್ಷರು ಆದೇಶಿಸಿದ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

**ಬಲಿಪಶು ಮಾಡಬೇಡಿ: ಕತಾರ್**

ಚುನಾವಣೆಯಲ್ಲಿ ವಿದೇಶಿ ಹಸ್ತಕ್ಷೇಪದ ಶಂಕೆ ಮತ್ತು ಕತಾರ್ ವಿರುದ್ಧದ ಆರೋಪಗಳ ನಡುವೆ, ತನ್ನನ್ನು ಈ ವಿವಾದದಲ್ಲಿ ಬಲಿಪಶು ಮಾಡಬಾರದು ಎಂದು ಕತಾರ್ ಹೇಳಿದೆ. ಅರಬ್ ಪಕ್ಷಗಳು ಮತ್ತು ಕತಾರ್ ಆರೋಪಗಳನ್ನು ನಿರಾಕರಿಸಿರುವುದರಿಂದ, ತನಿಖೆಯ ಫಲಿತಾಂಶದ ಮೇಲೆ ಇದೀಗ ಗಮನ ನೆಟ್ಟಿದೆ.

# ಉದ್ವಿಗ್ನತೆ ತಗ್ಗಿಸುವ ಪ್ರಯತ್ನಗಳ ನಡುವೆಯೇ ನಾಗರಿಕರ ಮೇಲೆ ರಷ್ಯಾದ ದಾಳಿ ತೀವ್ರ ಡಿನಿಪ್ರೊದಲ್ಲಿ ಸಾವಿನ ಸಂಖ್ಯೆ 17ಕ್ಕೆ ಏರಿಕೆ



**ಮಾಸ್ಕೋ, ಅ.29:** ರಷ್ಯಾ ನಡೆಸಿದ ಹೊಸ ದಾಳಿಗಳಿಂದಾಗಿ ನಾಗರಿಕರ ಸಾವು–ನೋವುಗಳ ಸಂಖ್ಯೆ ಗಂಭೀರವಾಗಿ ಹೆಚ್ಚಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ತಿಳಿಸಿದ್ದಾರೆ. ಡಿನಿಪ್ರೊದ ರೈಲು ನಿಲ್ದಾಣವೊಂದರಲ್ಲಿ ಪ್ರಯಾಣಿಕರ ರೈಲಿನ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 17ಕ್ಕೆ ಏರಿದೆ.

ಸಂಘರ್ಷವನ್ನು ತಗ್ಗಿಸಲು ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿರುವಾಗಲೇ ಈ ಘಟನೆ ಸಂಭವಿಸಿದೆ. ಚೆರ್ನಿಹಿವ್ ಮತ್ತು ಕ್ರೆಮೆನ್ಚುಕ್‌ನಲ್ಲಿರುವ ವಸತಿ ಪ್ರದೇಶಗಳ ಮೇಲೂ ರಷ್ಯಾ ದಾಳಿ ನಡೆಸಿದೆ ಎಂದು ಝೆಲೆನ್ಸ್ಕಿ ದೃಢಪಡಿಸಿದ್ದಾರೆ. ಈ ದಾಳಿಗಳಲ್ಲಿ ಐವರು ಮೃತಪಟ್ಟಿದ್ದಾರೆ; ಇವರಲ್ಲಿ ಚೆರ್ನಿಹಿವ್‌ನಲ್ಲಿ ಇಬ್ಬರು 15 ವರ್ಷದ ಬಾಲಕಿಯರು ಮತ್ತು ಕ್ರೆಮೆನ್ಚುಕ್‌ನಲ್ಲಿ ಮೂವರು ವ್ಯಕ್ತಿಗಳು ಸೇರಿದ್ದಾರೆ. ಕ್ರೆಮೆನ್ಚುಕ್‌ನಲ್ಲಿ ರಷ್ಯಾದ 'ಶಾಹೆದ್' ಡ್ರೋನ್ ಅಪಾರ್ಟ್ಮೆಂಟ್ ಕಟ್ಟಡವೊಂದಕ್ಕೆ ಅಪ್ಪಳಿಸಿದೆ. ಈ ಮೂರು ಘಟನೆಗಳಲ್ಲಿ ಒಟ್ಟು 56 ಮಂದಿ ಗಾಯಗೊಂಡಿದ್ದು, ಅವರಲ್ಲಿ 10 ಮಕ್ಕಳು ಕೂಡ ಸೇರಿದ್ದಾರೆ.

ಅಧ್ಯಕ್ಷ ಝೆಲೆನ್ಸ್ಕಿ ಈ ಕೃತ್ಯಗಳನ್ನು ನಾಗರಿಕರ ಮೇಲಿನ ಉದ್ದೇಶಪೂರ್ವಕ ದಾಳಿಗಳೆಂದು ಖಂಡಿಸಿದ್ದು, ಇವುಗಳ ಕ್ರೌರ್ಯವನ್ನು ಎತ್ತಿ ತೋರಿಸಿದ್ದಾರೆ. ಒಲೆಶ್ಕಿಯಲ್ಲಿ ಮಾನವೀಯ ಕಾರ್ಯಾಚರಣೆಗಳು ನಡೆಯುತ್ತಿರುವಾಗಲೂ ರಷ್ಯಾ ತನ್ನ ಆಕ್ರಮಣಶೀಲತೆಯನ್ನು ಮುಂದುವರಿಸಿರುವುದು, ಅದು ಯುದ್ಧವನ್ನು ದೀರ್ಘ ಕಾಲದವರೆಗೆ ಮುಂದುವರಿಸಲು ಬಯಸುತ್ತಿದೆ ಎಂಬುದನ್ನು ಸೂಚಿಸುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಶಾಶ್ವತ ಶಾಂತಿಯನ್ನು ಸಾಧಿಸಲು ಯುರೋಪಿಯನ್ ಒಕ್ಕೂಟ, ಅಮೆರಿಕ ಮತ್ತು ಜಿ7 ರಾಷ್ಟ್ರಗಳು ರಷ್ಯಾದ ಮೇಲೆ ಕಠಿಣ ನಿರ್ಬಂಧಗಳನ್ನು ಹೇರುವ ಮೂಲಕ ಮಾಸ್ಕೋ ಮೇಲಿನ ಒತ್ತಡವನ್ನು ಹೆಚ್ಚಿಸಬೇಕೆಂದು ಅವರು ಅಂತರರಾಷ್ಟ್ರೀಯ ಸಮುದಾಯವನ್ನು ಕೋರಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರೋನ್ ಕೂಡ ಇದೇ ರೀತಿಯ ಕಳವಳ ವ್ಯಕ್ತಪಡಿಸಿದ್ದು, ಡಿನಿಪ್ರೊ ದಾಳಿಯ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಒಲೆಶ್ಕಿಯಲ್ಲಿನ ಸೀಮಿತ ಕದನ ವಿರಾಮವನ್ನು ಮೀರಿ, ನ್ಯಾಯಯುತ ಮತ್ತು ಶಾಶ್ವತ ಶಾಂತಿಗಾಗಿ ಮಾತುಕತೆ ನಡೆಸುವಂತೆ ಅವರು ರಷ್ಯಾವನ್ನು ಒತ್ತಾಯಿಸಿದ್ದಾರೆ. ಒಲೆಶ್ಕಿಯಲ್ಲಿ ಮಾನವೀಯ ನೆರವಿಗಾಗಿ ಸ್ಥಳೀಯ ಕದನ ವಿರಾಮ ಜಾರಿಯಲ್ಲಿದ್ದರೂ, ಇತ್ತೀಚಿನ ಈ ದಾಳಿಗಳು ಸಂಘರ್ಷವನ್ನು ಸಂಪೂರ್ಣವಾಗಿ ತಗ್ಗಿಸುವ ಭರವಸೆಯ ಮೇಲೆ ಕಪ್ಪು ಛಾಯೆಯನ್ನು ಮೂಡಿಸಿವೆ.

# ಪಾಕಿಸ್ತಾನದ ಬಂದರಿನಲ್ಲಿರುವ ಎಲ್ಲ 6 ಭಾರತೀಯ ನಾವಿಕರೂ ಸುರಕ್ಷಿತ



**ನವದೆಹಲಿ, ಅ.29:** ಪಾಕಿಸ್ತಾನದ ಕರಾಚಿ ಬಂದರಿನಲ್ಲಿ ಸರಕು ಸಾಗಣೆ ಹಡಗಿನಲ್ಲಿ ಸಿಲುಕಿರುವ ಆರು ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಕೆವರ್ ಹೆಸರಿನ ಸಾಮಾನ್ಯ ಸರಕು ಸಾಗಣೆ ಹಡಗಿನಲ್ಲಿ ವಿನೀತ್ ಕಿಶೋರ್ ಮಿಶ್ರಾ ಸೇರಿದಂತೆ ಆರು ಭಾರತೀಯ ನಾವಿಕರು ಕರಾಚಿಯಲ್ಲಿ ಸಿಲುಕಿದ್ದಾರೆ ಎಂದು ವರದಿಗಳು ತಿಳಿಸಿವೆ. ಹಡಗಿನ ಮಾಲೀಕರು ಮತ್ತು ಬಂದರು ಅಧಿಕಾರಿಗಳ ನಡುವಿನ ವಿವಾದದಿಂದಾಗಿ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನಲಾಗಿದೆ.

ವಿವಾದದ ನಿರ್ದಿಷ್ಟ ವಿವರಗಳು ತಕ್ಷಣಕ್ಕೆ ಲಭ್ಯವಾಗಿಲ್ಲವಾದರೂ ಇದೀಗ ಭಾರತೀಯ ನಾವಿಕರ ಸುರಕ್ಷತೆ ಕುರಿತು ಭಾರತೀಯ ಅಧಿಕಾರಿಗಳು ಮಾಹಿತಿ ನೀಡಿದ್ದು, ಆರೂ ನಾವಿಕರೂ ಸುರಕ್ಷಿತವಾಗಿದ್ದಾರೆ ಎಂದು ಹೇಳಿದ್ದಾರೆ.

ಹಡಗಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಾವಿಕರ ಬದಲಿಗೆ ಆರು ಮಂದಿ ಪರಿಹಾರ ಸಿಬ್ಬಂದಿಯನ್ನು ಹಡಗಿಗೆ ಹತ್ತಿಸಲು ಅಗತ್ಯವಾದ ಔಪಚಾರಿಕ ಪ್ರಕ್ರಿಯೆಗಳು ಆರಂಭವಾಗಿವೆ ಎಂದು ಅವರು ಹೇಳಿದ್ದಾರೆ.

**ಪರಿಹಾರ ಸಿಬ್ಬಂದಿಗೆ ಅನುಮತಿ ಬಾಕಿ**

ಕರಾಚಿ ಬಂದರಿನ ವೆಸ್ಟ್ ವಾರ್ಫ್‌ನ 21ನೇ ಬರ್ತ್‌ನಲ್ಲಿ ಹಡಗು ಸುರಕ್ಷಿತವಾಗಿ ನಿಂತಿದೆ. ಹಡಗಿನ ಮಾಲೀಕರು ಬಂದರು ಅಧಿಕಾರಿಗಳಿಂದ ಸಿಬ್ಬಂದಿಯನ್ನು ಹಡಗಿಗೆ ಹತ್ತಿಸಲು ಅಗತ್ಯವಾದ ಅನುಮತಿಗಾಗಿ ಕಾಯುತ್ತಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಆರು ಮಂದಿ ಪರಿಹಾರ ನಾವಿಕರನ್ನು ಹಡಗಿಗೆ ಕಳುಹಿಸಲು ಮ್ಯಾನಿಂಗ್ ಏಜೆನ್ಸಿ ಅಗತ್ಯ ಮನವಿಯನ್ನು ಸಲ್ಲಿಸಿದೆ. ಈ ಸಿಬ್ಬಂದಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಅನುಮತಿ ದೊರೆತ ಕೂಡಲೇ ಹಡಗನ್ನು ಏರಲು ಸಿದ್ಧರಾಗಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ. ಪರಿಹಾರ ಸಿಬ್ಬಂದಿ ಈಗಾಗಲೇ ಪಾಕಿಸ್ತಾನದ ಹೋಟೆಲ್‌ನಲ್ಲಿ ತಂಗಿದ್ದು, ಬಂದರು ಅಧಿಕಾರಿಗಳಿಂದ ಅಧಿಕೃತ ಅನುಮತಿ ದೊರೆಯುವುದಷ್ಟೇ ಬಾಕಿಯಿದೆ ಎಂದು ಅವರು ವಿವರಿಸಿದ್ದಾರೆ.

**ಭಾರತೀಯ ಹೈಕಮಿಷನ್ ಸಂಪರ್ಕ**

ಹಡಗಿನ ಮಾಲೀಕರು ಮತ್ತು ನಾವಿಕರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ದಿನದ 24 ಗಂಟೆಯೂ ಗಮನಿಸಲಾಗುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಈ ಸಂಬಂಧ ಪಾಕಿಸ್ತಾನದಲ್ಲಿರುವ ಭಾರತೀಯ ಹೈಕಮಿಷನ್ ಸೇರಿದಂತೆ ಎಲ್ಲ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಗಳಿಗೆ ಪತ್ರ ಬರೆಯಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪಿಎಐ ವಿಭಾಗಕ್ಕೂ ಪತ್ರದ ಪ್ರತಿಯನ್ನು ಕಳುಹಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ನಾವಿಕರು ಸುರಕ್ಷಿತವಾಗಿದ್ದಾರೆ. ಆದರೆ, ಆರು ಮಂದಿ ಪರಿಹಾರ ಸಿಬ್ಬಂದಿ ಹಡಗನ್ನು ಏರಲು ಬಂದರು ಅಧಿಕಾರಿಗಳ ಅಧಿಕೃತ ಅನುಮತಿ ಇನ್ನೂ ದೊರೆತಿಲ್ಲ. ಅಧಿಕಾರಿಗಳಿಂದ ಯಾವುದೇ ಪ್ರಗತಿಯ ಮಾಹಿತಿ ಲಭ್ಯವಾದ ತಕ್ಷಣ ಮುಂದಿನ ವಿವರಗಳನ್ನು ನೀಡಲಾಗುವುದು ಎಂದು ಸರ್ಕಾರದ ಅಧಿಕಾರಿ ತಿಳಿಸಿದ್ದಾರೆ.

# ಅಂಡಮಾನ್ ಸಮುದ್ರದಲ್ಲಿ ಪ್ರಬಲ ಭೂಕಂಪನ; ರಿಕ್ಟರ್ ಮಾಪಕದಲ್ಲಿ 5.1 ತೀವ್ರತೆ ದಾಖಲು

ನವದೆಹಲಿ, ಅ.29: ಅಂಡಮಾನ್ ಸಮುದ್ರದಲ್ಲಿ ಗುರುವಾರ 5.1 ತೀವ್ರತೆಯ ಭೂಕಂಪ ಸಂಭವಿಸಿದ್ದು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಕೆಲವು ಭಾಗಗಳಲ್ಲಿ ಕಂಪನದ ಅನುಭವವಾಗಿದೆ.

ಸದ್ಯಕ್ಕೆ ಯಾವುದೇ ಪ್ರಾಣಹಾನಿ ಅಥವಾ ಆಸ್ತಿಪಾಸ್ತಿ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ (ಓಅಖ) ಪ್ರಕಾರ, ಗುರುವಾರ ಮಧ್ಯಾಹ್ನ 3.19ರ ಸುಮಾರಿಗೆ ಭೂಕಂಪ ಸಂಭವಿಸಿದೆ. ಬಾಂಬೂ ಫ್ಲ್ಯಾಟ್ ಪ್ರದೇಶದಿಂದ ಉತ್ತರ–ವಾಯವ್ಯ ದಿಕ್ಕಿನಲ್ಲಿ ಸುಮಾರು 218 ಕಿ.ಮೀ. ದೂರದಲ್ಲಿ ಭೂಕಂಪದ ಕೇಂದ್ರಬಿಂದು ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕಂಪವು ಭೂಮಿಯ ಮೇಲ್ಮೈಯಿಂದ ಸುಮಾರು 10 ಕಿ.ಮೀ. ಆಳದಲ್ಲಿ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲ ಇಲಾಖೆಗಳಿಗೂ ಮಾಹಿತಿ ನೀಡಲಾಗಿದ್ದು, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ಪ್ರವಾಸಿಗರು ಮತ್ತು ಮೀನುಗಾರರು ಸಮುದ್ರಕ್ಕೆ ತೆರಳದಂತೆ ಸೂಚಿಸಲಾಗಿದೆ ಎಂದು ಶ್ರೀ ವಿಜಯ ಪುರಂನ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರದ ಅಧಿಕಾರಿಯೊಬ್ಬರು ಹೇಳಿದ್ದಾರೆ. ಪ್ರದೇಶದಲ್ಲಿ ಭೂಕಂಪನ ಚಟುವಟಿಕೆಗಳ ಮೇಲೆ ನಿಗಾ ಇಡಲು ಹಲವು ತಂಡಗಳು ಕಾರ್ಯನಿರ್ವಹಿಸುತ್ತಿವೆ ಎಂದು ಅವರು ತಿಳಿಸಿದ್ದಾರೆ.

**ಉತ್ತರ ಮತ್ತು ಮಧ್ಯ ಅಂಡಮಾನ್‌ನಲ್ಲಿ ಲಘು ಕಂಪನ**

ಉತ್ತರ ಅಂಡಮಾನ್ ಮತ್ತು ಮಧ್ಯ ಅಂಡಮಾನ್‌ನ ಕೆಲವು ಭಾಗಗಳಲ್ಲಿ ಲಘು ಕಂಪನ ಅನುಭವವಾದ ಬಗ್ಗೆ ವರದಿಗಳು ಬಂದಿವೆ. ನೈಸರ್ಗಿಕ ವಿಕೋಪಗಳನ್ನು ಎದುರಿಸಲು ನಾವು ನಿಯಮಿತವಾಗಿ ಅಣಕು ಕಾರ್ಯಾಚರಣೆಗಳನ್ನು ನಡೆಸುತ್ತಿರುತ್ತೇವೆ. ಹೀಗಾಗಿ ಇಂತಹ ಪರಿಸ್ಥಿತಿಗಳನ್ನು ನಿಭಾಯಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಭೂಕಂಪದ ಕೇಂದ್ರಬಿಂದು ಕರಾವಳಿಯಿಂದ ಸಾಕಷ್ಟು ದೂರದಲ್ಲಿರುವುದರಿಂದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಯಾವುದೇ ಹಾನಿ ಸಂಭವಿಸಿರುವ ಬಗ್ಗೆ ವರದಿಯಾಗಿಲ್ಲ. ಪರಿಸ್ಥಿತಿಯನ್ನು ಅಧಿಕಾರಿಗಳು ನಿರಂತರವಾಗಿ ಗಮನಿಸುತ್ತಿದ್ದಾರೆ.

# ಐಎನ್‌ಎಸ್ ತ್ರಿಶೂಲ್ ಇಟಲಿ ಭೇಟಿ ಮುಕ್ತಾಯ ಭಾರತದ ಜೊತೆ ನೌಕಾ ಸಹಕಾರಕ್ಕೆ ಮತ್ತಷ್ಟು ಉತ್ತೇಜನ



**ನವದೆಹಲಿ, ಅ.29:** ಭಾರತೀಯ ನೌಕಾ ನೌಕೆ: ತ್ರಿಶೂಲ್ ಇಟಲಿಯ ಸಿವಿಟಾವೆಚಿಯಾದಲ್ಲಿ ತನ್ನ ಬಂದರು ಭೇಟಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ, ಇದು ಭಾರತೀಯ ಮತ್ತು ಇಟಾಲಿಯನ್ ನೌಕಾಪಡೆಗಳ ನಡುವಿನ ಕಡಲ ಸಹಕಾರವನ್ನು ಬಲಪಡಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಐಎನ್‌ಎಸ್ ತ್ರಿಶೂಲ್ನ ಕಾರ್ಯಾಚರಣೆಯ ನಿಯೋಜನೆಯ ಭಾಗವಾಗಿರುವ ಈ ಭೇಟಿಯು ವೃತ್ತಿಪರ ಸಂವಹನ ಮತ್ತು ಸಾಂಸ್ಕೃತಿಕ ವಿನಿಮಯದ ಮೇಲೆ ಕೇಂದ್ರೀಕರಿಸಿದೆ. ತನ್ನ ವಾಸ್ತವ್ಯದ ಸಮಯದಲ್ಲಿ, ಹಡಗು ವೃತ್ತಿಪರ ನಿಶ್ಚಿತಾರ್ಥಗಳು, ಕ್ರಾಸ್–ಡೆಕ್ ಭೇಟಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿತು, ಸಿಬ್ಬಂದಿಗಳ ನಡುವೆ ಬಲವಾದ ಸಂಬಂಧಗಳನ್ನು ಬೆಳೆಸಿತು. ಐಎನ್‌ಎಸ್ ತ್ರಿಶೂಲ್ನ ಕಮಾಂಡಿಂಗ್ ಆಫೀಸರ್ ಇಟಾಲಿಯನ್ ನೌಕಾಪಡೆಯ ಫ್ಲೀಟ್ ಕಮಾಂಡರ್ ಅವರನ್ನು ಭೇಟಿ ಮಾಡಿದರು ಮತ್ತು ಸಿಬ್ಬಂದಿಗೆ ಇಟಾಲಿಯನ್ ನೌಕಾಪಡೆಯ ವಿಮಾನವಾಹಕ ನೌಕೆ ಐಟಿಎಸ್ ಕ್ಯಾವರ್ಗೆ ಭೇಟಿ ನೀಡುವ ಅವಕಾಶ ದೊರೆಯಿತು. ಈ ಸಂವಹನಗಳು ಕಾರ್ಯಾಚರಣೆಯ ಅಭ್ಯಾಸಗಳು ಮತ್ತು ಅನುಭವಗಳ ಅಮೂಲ್ಯ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟವು.

ಈ ಭೇಟಿಯ ಮಹತ್ವವನ್ನು ಒತ್ತಿ ಹೇಳುತ್ತಾ, ಇಟಲಿಯ ಭಾರತದ ರಾಯಭಾರಿ ವಾಣಿ ರಾವ್ ಮತ್ತು ಇಟಾಲಿಯನ್ ನೌಕಾಪಡೆಯ ಫ್ಲೀಟ್ ಕಮಾಂಡರ್ ವೈಸ್ ಅಡ್ಮಿರಲ್ ಔರೆಲಿಯೊ ಡಿ ಕ್ಯಾರೊಲಿಸ್ ಅವರು ಐಎನ್‌ಎಸ್ ತ್ರಿಶೂಲ್ಗೆ ಭೇಟಿ ನೀಡಿ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿದರು. ಸ್ಥಳೀಯ ಅಧಿಕಾರಿಗಳು, ಹಿರಿಯ ಇಟಾಲಿಯನ್ ನೌಕಾಪಡೆ ಮತ್ತು ಕರಾವಳಿ ಕಾವಲು ಅಧಿಕಾರಿಗಳು, 13 ರಾಷ್ಟ್ರಗಳ ರಕ್ಷಣಾ ರಾಯಭಾರಿಗಳು ಮತ್ತು ಭಾರತೀಯ ವಲಸೆಗಾರರನ್ನು ಒಟ್ಟುಗೂಡಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಬ್ಬರೂ ಗಣ್ಯರು ಭಾಗವಹಿಸಿದ್ದರು. ಈ ಸಭೆಯು ವೃತ್ತಿಪರ ನೌಕಾಪಡೆಯ ನಿಶ್ಚಿತಾರ್ಥಗಳಿಗೆ ಪೂರಕವಾಗಿ ರಾಜತಾಂತ್ರಿಕ ಮತ್ತು ಸಮುದಾಯ ಸಂವಹನಕ್ಕೆ ನಿರ್ಣಾಯಕ ವೇದಿಕೆಯನ್ನು ಒದಗಿಸಿತು. ಈ ಯಶಸ್ವಿ ಭೇಟಿಯ ನಂತರ, ಐಎನ್‌ಎಸ್ ತ್ರಿಶೂಲ್ ಈಗ ತನ್ನ ನಿಯೋಜನೆಯ ಮುಂದಿನ ಹಂತಕ್ಕೆ ಸಾಗಿದೆ.

# 4ನೇ ಟಿ20ಗೂ ಮೊದಲೇ ಡಬಲ್ ಆಘಾತ; ಸಂಕಷ್ಟದಲ್ಲಿ ಕಿವೀಸ್



**ಆಕ್ಲೆಂಡ್, ಅ.29:** ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ನಡುವಿನ ನಾಲ್ಕನೇ ಟಿ20 ಪಂದ್ಯ ಶುಕ್ರವಾರ ನಡೆಯಲಿದೆ. ಮೊದಲ ಮೂರು ಪಂದ್ಯಗಳಲ್ಲಿ ಸೋಲನ್ನು ಕಂಡಿರುವ ಆತಿಥೇಯರು ಈಗಾಗಲೇ ಸರಣಿಯನ್ನು ಸಹ ಕೈಚೆಲ್ಲಿದ್ದಾರೆ. ಕನಿಷ್ಠ ಕೊನೆಯ ಎರಡು ಪಂದ್ಯಗಳಲ್ಲಾದರೂ ಗೆದ್ದು ತವರಿನಲ್ಲಿ ಸರಣಿ ಕ್ಲೀನ್ ಸ್ವೀಪ್ ನಿಂದ ತಪ್ಪಿಸಿಕೊಳ್ಳಲು ನ್ಯೂಜಿಲೆಂಡ್ ಸಿದ್ಧತೆ ನಡೆಸುತ್ತಿದೆ. ಏತನ್ಮಧ್ಯೆ ನಾಲ್ಕನೇ ಪಂದ್ಯಕ್ಕೂ ಮೊದಲೇ ಭಾರಿ ಹಿನ್ನಡೆಯಾಗಿದ್ದು ಸ್ಟಾರ್ ಆಟಗಾರ ಉಳಿದ ಎರಡು ಪಂದ್ಯಗಳಿಂದ ಹೊರಬಿದ್ದಿದ್ದಾರೆ.

ಉಭಯ ತಂಡಗಳು ನಡುವಿನ ನಾಲ್ಕನೇ ಟಿ20 ಪಂದ್ಯ ಆಕ್ಲಾಂಡ್‌ನ ಇಡೆನ್ ಪಾರ್ಕ್ ಮೈದಾನಲ್ಲಿ ನಡೆಯಲಿದೆ. ಇಲ್ಲಿ ಇದುವರೆಗೆ 37 ಟಿ20 ಪಂದ್ಯಗಳು ನಡೆದಿದ್ದು, ಮೊದಲು ಬ್ಯಾಟಿಂಗ್ ಮಾಡಿರುವ ತಂಡಗಳು 16 ಪಂದ್ಯ ಗೆದ್ದರೆ, ಚೇಸಿಂಗ್ ಮಾಡಿರುವ ತಂಡಗಳು ಸಹ ಇಷ್ಟೇ ಪಂದ್ಯವನ್ನು ಗೆದ್ದುಕೊಂಡಿವೆ. ಈ ಮೈದಾನಲ್ಲಿ ಮೊದಲ ಇನ್ನಿಂಗ್ಸ್ ಸರಾಸರಿ ಸ್ಕೋರ್ 159 ಆಗಿದ್ದರೆ, ಎರಡನೇ ಇನ್ನಿಂಗ್ಸ್ ಸರಾಸರಿ 149 ಆಗಿದೆ. ಇಲ್ಲಿ ದಾಖಲಾದ ಹೈಸ್ಕೋರ್ 245 ಆಗಿದ್ದು 76 ಕನಿಷ್ಠ ಸ್ಕೋರ್ ಆಗಿದೆ.

ಏತನ್ಮಧ್ಯೆ ಈ ಮೈದಾನದಲ್ಲಿ 245 ರನ್ ಚೇಸ್ ಸಹ ಮಾಡಲಾಗಿದೆ ಮತ್ತು 108 ರನ್‌ಗಳನ್ನು ರಕ್ಷಣೆ ಮಾಡಿ ಗೆಲುವು ಸಾಧಿಸಿರುವ ದಾಖಲೆಯು ಇದೆ. ಇದನ್ನು ಗಮನಿಸಿದರೆ ನಾಳೆಯ ಪಂದ್ಯದಲ್ಲೂ ಟಾಸ್ ನಿರ್ಣಾಯಕ ಪಾತ್ರ ವಹಿಸಲಿದೆ. ಗೆದ್ದ ತಂಡ ಮೊದಲಿಗೆ ಬೌಲಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಗಳೆ ಹೆಚ್ಚು. ಏತನ್ಮಧ್ಯೆ ಈ ಪಂದ್ಯದ ಟಿಕೆಟ್‌ಗಳು ಈಗಾಗಲೇ ಸಂಪೂರ್ಣ ಮಾರಾಟವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಕಿವೀಸ್ ಪಡೆ ತವರಿನ ಪ್ರೇಕ್ಷರ ಮುಂದೆ ಟಾಸ್ ಜೊತೆ ಪಂದ್ಯವನ್ನು ಗೆಲ್ಲುವ ಗುರಿಯನ್ನು ಹೊಂದಿದೆ. ಆದರೆ, ಇದಕ್ಕೂ ಮೊದಲೆ ಸತತ ಮೂರ ಪಂದ್ಯಗಳನ್ನು ಸೋತಿರುವ ಸ್ಯಾಂಟ್ನರ್ ಪಡೆಗೆ ದೊಡ್ಡ ಹಿನ್ನಡೆಯಾಗಿದೆ. ತಂಡದ ಸ್ಟಾರ್ ಬೌಲರ್ ಉಳಿದ ಎರಡೂ ಪಂದ್ಯಗಳಿಂದ ಹೊರಬಿದ್ದಿದ್ದಾರೆ.

**ಉಳಿದ ಎರಡೂ ಪಂದ್ಯಗಳಿಂದ ಹೊರಬಿದ್ದ ಬೌಲರ್ಸ್**

ವೇಗಿ ಲಾಕಿ ಫರ್ಗುಸನ್ ಸರಣಿಯ ಉಳಿದ ಎರಡೂ ಪಂದ್ಯಗಳಿಂದಲೂ ಹೊರಗುಳಿದಿದ್ದಾರೆ. ಹ್ಯಾಗ್ಲಿ ಓವಲ್‌ನಲ್ಲಿ ನಡೆದ ಸರಣಿಯ ಎರಡನೇ ಟಿ20 ಪಂದ್ಯದ ಸಮಯದಲ್ಲಿ ಲಾಕಿ ಫರ್ಗುಸನ್ ಅವರ ಬಲತೊಡೆಯ ಭಾಗದಲ್ಲಿ ನೋವು ಕಾಣಿಸಿಕೊಂಡಿತು. ಇದರಿಂದಾಗಿ ಮೂರನೇ ಪಂದ್ಯದಿಂದ ಹೊರಗುಳಿದಿದ್ದರು. ಸ್ನಾಯು ಸೆಳೆತದಿಂದ ಬಳಲುತ್ತಿರುವ ಲಾಕಿ ಅವರ ಬಗ್ಗೆ ನ್ಯೂಜಿಲೆಂಡ್ ಕ್ರಿಕೆಟ್ ಪ್ರಮುಖ ಮಾಹಿತಿ ಹಂಚಿಕೊಂಡಿದೆ. ಅವರು ಮೈದಾನಕ್ಕೆ ಮರಳುವ ಮೊದಲು ಚೇತರಿಸಿಕೊಳ್ಳಲು ಸುಮಾರು ಒಂದು ವಾರ ಸಮಯ ಬೇಕಾಗಬಹುದು ಎಂದು ಹೇಳಿದೆ. ಇದರಿಂದಾಗಿ ಕೊನೆಯ ಎರಡು ಟಿ20ಪಂದ್ಯಗಳಿಗೆ ಅವರ ಸ್ಥಾನದಲ್ಲಿ ಮ್ಯಾಟ್ ಫಿಶರ್ ಅವರೇ ಮುಂದುವರಿಯಲಿದ್ದಾರೆ.